
ಕಲ್ಯಾಣ ಕಿರಣ

ಆಗಸ್ಟ್ - 2001

ಬೆಲೆ : ರೂ. 5-00





ಡಾ|| ಹೆಚ್. ನರಸಿಂಹಯ್ಯ ಅವರಿಂದ ದೃಷ್ಟಾಂತ ಸರಸಿ (ಹಿಂದಿ) ಪುಸ್ತಕ ಬಿಡುಗಡೆ
ಎಡದಿಂದ ಬಲಕ್ಕೆ ಡಾ|| ಎಂ.ಸಿ.ಮೋದಿ, ಪುಟ್ಟರುದ್ರಪ್ಪ, ಡಿ.ಪಿ.ಪ್ರಕಾಶ್, ಬ್ರಾಡ್ ಬೀಮನ್,
ಡಾ|| ನರಸಿಂಹಯ್ಯ, ಪೂಜ್ಯ ಮಾತಾಜಿ, ಅಮೇರಿಕಾದ ಆಂಡ್ರ್ಯೂ, ವಿ.ಟಿ. ರಾಯರೆಡ್ಡಿ, ಹಿಂದಿ
ಅನುವಾದಕ ಸಿ. ಸದಾಶಿವಯ್ಯ

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ.

ಸಂಚಿಕೆ 7 | ಆಗಸ್ಟ್ 2001 | ವಾರ್ಷಿಕ ಚಂದಾ 50/- ರೂ.

ಗುರು ಚರಣಕೆ ನುಡಿ ಕಾಣಿಕೆ

ಜಯತು ಜಯತು ಲಿಂಗಾನಂದ ನಿಜ ಜಂಗಮ ಜ್ಯೋತಿಯೇ
ಜಯತು ಜಯ ಮಂಗಳಾಂಗ ಗುರುಬಸವ ಕಂದನೆ || ಪಲ್ಲವಿ ||

ಕರ್ತ ಕಳುಹೆ ಧರೆಗೆ ಬಂದು ಮರ್ತ್ಯರನ್ನು ಪೊರೆದ ಗುರು
ಕರ್ತೃ ಬಸವೇಶನ ಮಣಿಹವ ಪೂರೈಸಿದೆ
ಮಣಿಗವಳ್ಳಿಯಲ್ಲಿ ಜನಿಸಿ ಮನುಕುಲವನುದ್ಧರಿಸಿದೆ
ಸಂಗಮ ಸುಕ್ಷೇತ್ರದಲ್ಲಿ ಬಸವ ಪೀಠ ಸ್ಥಾಪಿಸಿದೆ. || 1 ||

ದೇವನೊಬ್ಬ ಸೃಷ್ಟಿಕರ್ತ ಲಿಂಗದೇವನೆಂದೆಯ್ಯೆ
ಕಾಕು ಪೋಕು ದೈವಂಗಳ ಪೂಜೆ ಖಂಡಿಸಿ ತೊರೆಸಿದ್ಯೆ
ದೇವನವನ ಪೂಜಿಸಲು ನಿಜ ಪಥವ ತೋರಿದ್ರೈ
ಧರ್ಮ ಜ್ಯೋತಿಯಾಗಿ ಪ್ರೀತಿ ಶಿಷ್ಯರಿಗೆ ನೀಡಿದ್ರೈ || 2 ||

ಬಸವ ಮಂಟಪ ಕಟ್ಟಿ ನೀವು ಎಲ್ಲರನ್ನು ಕರೆದಿರೈ
ವಚನಾಮೃತ ಶಿರದಿ ಹೊತ್ತು ಜನಮನಕ್ಕೆ ಎರೆದಿರೈ
ಪ್ರವಚನದ ಸುಧೆಯನ್ನಿತ್ತ ಪರಮ ದಿವ್ಯ ಯೋಗಿಯೆ
ಬಸವಣ್ಣನೇ ಧರ್ಮಗುರು ಎಂದು ಸಾರ್ದ ತ್ಯಾಗಿಯೆ || 3 ||

ಜಾತಿ-ಮತ-ಪಂಥಗಳ ಭೇದ ಜರಿದ ಮಹಾ ಪುರುಷ
ಮಹಾಮನೆಯ ಕಟ್ಟಿ ನಮ್ಮ ಆಹ್ವಾನಿಸಿದ ಗುರು ಪರುಷ
ಧರ್ಮ ಕ್ರಾಂತಿ ಧೀರಯೋಗಿ, ಲಿಂಗದೇವ ಕಂದನೆ
ಬಸವ ಧರ್ಮವನ್ನು ಬೆಳಗಿ ದಿವ್ಯ ಜ್ಯೋತಿಯಾದಿರೈ || 4 ||

- ಶರಣ. ಶ್ರೀಕಂಠಕುಮಾರ್
ಬಸವ ಗಂಗೋತ್ರಿ, ಕುಂಬಳಗೋಡು

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ
71ನೆಯ ಜಯಂತಿಯ ನಿಮಿತ್ತ

www.Lingayathism.com

ಕಲ್ಯಾಣ ಕಿರಣ

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 7	ಆಗಸ್ಟ್ 2001	ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಗುರು ಚರಣಕೆ ನುಡಿ ನೈವೇದ್ಯ	ಶ್ರೀಕಂಠ ಕುಮಾರ್	1
2. ಧರ್ಮಕ್ರಾಂತಿಯ ಧೀರಯೋಗಿಯ ಲಾವಣಿ	ಶ್ರೀಕಂಠ ಕುಮಾರ್	3
3. ಸಂಪಾದಕೀಯ- ಬಹುದೇವತೋಪಾಸಕರ ಬಗ್ಗೆ ಅನುಕಂಪ	ಮಾತಾಜಿ	5
4. ಚಿಂತನ ಲಹರಿ : ವೈಚಾರಿಕತೆ ಯಾರಿಗೆ ಬೇಡ ?	ಮಾತಾಜಿ	10
5. ವಿಮರ್ಶೆ: ಸೇವೆ ಗೈವವರು ಪೂಜೆ-ಧ್ಯಾನ ತೊರೆಯಬೇಕೆ ?	ಮಾತಾಜಿ	11
6. ಬಸವ ಪಥವೇ ಚಂದ (ಕವನ)	ಶೋಭಾದೇವಿ ಪರಮಾದಿ	13
7. ಅಪೂರ್ವ ವ್ಯಕ್ತಿತ್ವದ ಅಪ್ಪಾಜಿ (ಕವನ)	ಶಾರದಾ ಬಸವರಾಜ್	13
8. ವಚನ ಕಿರಣ	ಮಾತೆ ಅಕ್ಕಮಹಾದೇವಿ	14
9. ಕಲ್ಯಾಣ ಕಿರಣ (ಕವನ)	ಮಹೇಶ್ವರಿ ಪಾಟೀಲ	15
10. ಬಾಳಿನ ಸಾರ್ಥಕತೆ	ಮಾತೆ ಕಸ್ತೂರಿದೇವಿ	17
11. ಬೆಂಗಳೂರಿನಲ್ಲಿ 806ನೆಯ ಬಸವ ಪಂಚಮಿ-ವರದಿ	ರಮೇಶ್ ಲಿಂಗಾಯತ (ತಳ್ಳಿ)	25
12. ಮಾತೆ ಗಂಗಾದೇವಿಯವರ ಮಂಗಲ	--	28
13. ಬಿಡುಗಡೆಯಾದ ಹೊಸ ಪುಸ್ತಕಗಳು	--	29
14. ಪೂಜ್ಯ ಶ್ರೀ ಅಪ್ಪಾಜಿಯವರ ಜಯಂತಿ ಮತ್ತು ಗಂಗಾ ಮಾತಾಜಿಯವರ ವರ್ಧಂತಿ	--	30
15. ಸಮಸ್ಯೆ ?- ಸಮಾಧಾನ !	ಮಾತಾಜಿ	31
16. ಧನ-ದಾಸೋಹಿಗಳ ಪಟ್ಟಿ	--	45
17. ಬಸವ ತತ್ತ್ವ ತರಬೇತಿ ಕಮ್ಮಟ	--	48





★ ದಿ. 22-8-2001ರಂದು ಪರಮಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 71ನೆಯ ಜಯಂತಿಯು ಒದಗಿ ಬಂದಿದ್ದು ಅಂದು ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬವನ್ನು ಆಚರಿಸಲಾಗುವುದು. ತನ್ನಿಮಿತ್ತ ಕಲ್ಯಾಣ ಕಿರಣದ ಓದುಗರಿಗೆಲ್ಲ ಶುಭ ಹಾರೈಕೆಗಳು. ಅಂದು ಎಲ್ಲರೂ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಆಚರಿಸಬೇಕೆಂದು ಕೋರುತ್ತೇವೆ.

★ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ದಿ. 22-8-2001ರಂದು 43 ವರ್ಷಗಳನ್ನು ಪೂರೈಸಿ 44ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಲಿದ್ದಾರೆ. ಅವರಿಗೆ ಗೌರವ ಪೂರ್ವಕ ನಮನಗಳು.

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone 8437234

ಅಕ್ಷರ ಜೋಡಣೆ : ಬಸವಶ್ರೀ   ಪುಟ ವಿನ್ಯಾಸ : ರಮೇಶ್ ಲಿಂಗಾಯತ

ಧರ್ಮಕ್ರಾಂತಿ ಧೀರಯೋಗಿಯ ಲಾವಣಿ

ಭಾಗ - 1

1. ಕೇಳಿರಿ ಶರಣರೆ ಕೇಳಿರಿ ಭಕ್ತರೆ
ನುಡಿಯುವೆ ನಾನು ಸತ್ಯವನು
ಧರ್ಮ ಕ್ರಾಂತಿಯ ಧೀರ ಯೋಗಿಯ
ಸತ್ಯ ಚರಿತ್ರೆಯ ಪೇಳುವೆನು

2. ಲಾಲಿಸಿ ಶರಣರೆ ಲಾಲಿಸಿ ಭಕ್ತರೆ
ಪೇಳುವೆ ನಾನು ಸತ್ಯವನು
ಮಾಯೆಯ ಗೆಲಿದ ಮಹಾಮಹಿಮ
ಗುರು ಲಿಂಗಾನಂದರ ಮಹಿಮೆಯನು

3. ಬಾಗೇವಾಡಿಯ ಸನಿಹದಲ್ಲಿಹುದು
ಮಣಿಗವಳ್ಳಿ ಎಂಬ ಒಂದೂರು
ಅದು ಸತ್ಯ ಶರಣರ ತವರೂರಾಗಿ
ಲಿಂಗ ಭಕ್ತರು ನೆಲೆಸಿದ್ದರು.

4. ಶರಣೆ ಕಲ್ಲಮ್ಮ ಮಲ್ಲಪ್ಪರೊಡಲಲ್ಲಿ
ಜನಿಸಿತು ಚಿಜ್ಯೋತಿ ಕೂಸೊಂದು
ಸಂಗಮೇಶ್ವರನೆಂಬ ನಾಮವ ತಳೆದು
ಮಣಿಗವಳ್ಳಿಯ ಮಾಣಿಕ್ಯವಾಯ್ತು

5. ಎಳೆತನದಲ್ಲಿ ಗೆಳೆಯರ ಮಧ್ಯದಿ
ಹಿರಿಮೆಯ ಜ್ಞಾನವ ಗಳಿಸುತಲಿ
ಬಿದಿಗೆಯ ಚಂದಿರನಂತೆ ಬೆಳೆದರು
ತಂದೆ-ತಾಯಿಯ ಹರಕೆಯಲ್ಲಿ

6. ಬಡತನದಲ್ಲಿ ಸಾಗಿತು ಬಾಲಕ
ಸಂಗಮೇಶನ ವಿದ್ಯಾಭ್ಯಾಸ
ಹೊಟ್ಟೆ ಬಟ್ಟೆಗೂ ಕಷ್ಟವಾದರೂ
ಪಡೆದರು ಆನರ್ಸ್ ಪದವಿಯ

7. ಕಷ್ಟ ನಷ್ಟಗಳು ತಂದೆಯ ಕಾಡುತಿರೆ
ಅಷ್ಟ ವಿಧದಲ್ಲಿ ಬಲು ನೊಂದಿರಲು
ಸತ್ಯ ಮಾರ್ಗವ ಅರಸುತ್ತ ಬಂದು
ಲಿಂಗದೀಕ್ಷೆಯ ಹೊಂದಿದರು.

8. ಸಂಗಮೇಶನ ಜೀವನದಲ್ಲಿ ಜರುಗಿತು
ವಿಚಿತ್ರ ಪ್ರಸಂಗವು ಅಂದು
ಬಸವ ಜಯಂತಿಯ ವಿಶೇಷವು, 'ಅದು'
ಬಸವ ಗುರುವಿನ ಸಂದೇಶವು, 'ಅದು'
ಬಸವ ಗುರುವಿನ ಆದೇಶವು.

9. ಗುರು ಬಸವಣ್ಣನ ಆಣತಿಯ ಪಾಲಿಸಿ
ಮಿಂದು ಮಡಿಯುಟ್ಟ ಸಂಗಮೇಶ
ಬಸವ ಗುರುವಿನ ಭಾವ ಚಿತ್ರದ
ಅಡಿಯಲ್ಲಿ ಕುಳಿತನು ಧ್ಯಾನದಲ್ಲಿ

10. ಒಮ್ಮಿಂದೊಮ್ಮೆಲೆ ಚಿಮ್ಮಿತು ಬೆಳಕು
ಬಸವ ಗುರುವಿನ ಚಿತ್ರದಲ್ಲಿ
ಬಸವ ಗುರುವಿನ ದಿವ್ಯ ರೂಪವು
ಕಾಣಿಸಿತು ಸಂಗಮೇಶನಿಗೆ
(ಜಯಘೋಷ: ವಿಶ್ವ ಗುರು ಬಸವಣ್ಣನವರಿಗೆ ಜಯವಾಗಲಿ)

11. ಮಧುರವಾಣಿಯು ಮೊಳಗಿತು ಆಗ
ಸಂಗಮೇಶ ನೀ ಸನಿಹ ಬಾರೆಂದು
ನಿನ್ನ ಬಾಳನು ನನಗೆ ಅರ್ಪಿಸು
ತ್ಯಾಗ ಜೀವನ ಸ್ವೀಕರಿಸು

12. ದಿಗ್ಭ್ರಾಂತಿಯಾಯಿತ್ತು ಸಂಗಮೇಶನಿಗೆ
ಈ ವಿಚಿತ್ರ ಸನ್ನಿವೇಶ
ತಂದೆ-ತಾಯಿಗಳ ಬಡತನ ನೆನೆದು
ಸಾಧ್ಯವಿಲ್ಲವೆಂದ ಸಂಗಮೇಶ.

13. ತನ್ಮಯವಾಗಿ ತನಗರಿವಿಲ್ಲದೆ
ಸಮ್ಮತಿ ನೀಡಿದ ಸಂಗಮೇಶ
ಸಮ್ಮತಿ ಪಡೆದು ಅಭಯ ಹಸ್ತ ನೀಡಿ
ಕಣ್ಮರೆಯಾದ ಬಸವೇಶ.

14. ಬಂಧು ಬಾಂಧವರ ಬಂಧನ ಕಳಚಿ
ಕಾಷಾಯ ವಸ್ತ್ರವ ಧರಿಸಿದರು
ಜ್ಞಾನ ಸನ್ಯಾಸತ್ವ ಸ್ವೀಕರಿಸುತ್ತಲಿ
ಸ್ವಾಮಿ ಲಿಂಗಾನಂದರೆನಿಸಿಹರು.
(ಧರ್ಮ ಕ್ರಾಂತಿಯ ಧೀರಯೋಗಿ ಲಿಂಗಾನಂದ ಗುರುವಿಗೆ ಜಯವಾಗಲಿ ಜಯವಾಗಲಿ)

ಭಾಗ - 2

15. ಕೇಳಿರಿ ಶರಣರೆ ಕೇಳಿರಿ ಭಕ್ತರೆ
ನುಡಿಯುವೆ ನಾನು ಸತ್ಯವನು

ಮಾಯೆಯ ಗೆಲಿದ ಮಹಾಮಹಿಮ
ಗುರು ಲಿಂಗಾನಂದರ ಮಹಿಮೆಯನು
(ಸತ್ಯ ಶಾಂತಿಯ ತ್ಯಾಗ ಮೂರ್ತಿಯ ನಿತ್ಯ ಚರಿತ್ರೆಯ ಪೇಳುವೆನು.)

16. ಅಂತರಾತ್ಮನ ಪ್ರೇರಣೆಯಂತೆ
ಮುನ್ನಡೆದರು ಚರ ಜಂಗಮರಾಗಿ
ಸೊಗಲ ಸೋಮೇಶ್ವರ ಮಾಣಿಕ್ಯ ಗಿರಿಯ
ಗುಹೆಯಲ್ಲಿ ಕುಳಿತು ಧ್ಯಾನದಲ್ಲಿ

17. ಕಳೆದವು ದಿನಗಳು ಜ್ಞಾನ ಸಮಾಧಿಯಲ್ಲಿ
ಯಾರಿಗೂ ಗೋಚರವಾಗದಂತೆ ಸು-
ಜ್ಞಾನದ ಬೆಳಕು ಸಿದ್ಧಿಯಾಯಿತು. ಆ-
'ಲಿಂಗದೇವನ' ಕೃಪೆಯಂತೆ

18. ಲಿಂಗದೇವನ ಮಹಿಮೆಯನು ಸ್ಮರಿಸುತಾ
ಪ್ರವಚನ ಕಹಳೆಯನೂದಿದರು.
ಪ್ರವಚನವೇ ನನ್ ಉಸಿರೆಂದು ಸಾರಿ
ಪ್ರವಚನ ಪಿತಾಮಹರಾಗಿಹರು.

19. ವಿಶ್ವ ಕಲ್ಯಾಣ ಸಂಸ್ಥೆಯ.ಸ್ಥಾಪಿಸಿ
ಬಸವ ಮಂಟಪವ ಕಟ್ಟಿದರು
ಎಲ್ಲ ಜನತೆಯನೊಂದುಗೂಡಿಸಿ
"ರಾಷ್ಟ್ರೀಯ ಬಸವ ದಳ"ಗಳ ಕಟ್ಟಿದರು.

20. ಜ್ಞಾನ ಗಂಗೆಯನ್ನು ಧಾರೆಯನೆರೆಯುತ್ತ
ಬಸವ ಗಂಗೋತ್ರಿಯ ಕಟ್ಟಿದರು
ಪ್ರವಚನ ಪಟುಗಳ ಸೃಷ್ಟಿಸಿ ಶಿಷ್ಯರ
ದೇಶ ವಿದೇಶಕ್ಕೆ ಕಳಿಸಿದರು

21. ಸ್ತ್ರೀಯರ ಸಮಾನತೆ ಎತ್ತಿ ಹಿಡಿಯಲು
ಸ್ತ್ರೀ ಜಗದ್ಗುರು ಪೀಠವ ಕಟ್ಟಿದರು
ಮಾತಾಜಿಯಂತಹ ಜ್ಞಾನ ರತ್ನದ
ಬೆಳಕನು ಜಗತ್ತಿಗೆ ನೀಡಿದರು.
(ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಮಾತೆ
ಮಹಾದೇವಿಯವರಿಗೆ ಜಯವಾಗಲಿ)

22. ಬಸವ ಗುರುವಿನ ಐಕ್ಯಕ್ಷೇತ್ರದಲ್ಲಿ
ಬಸವ ಪೀಠವ ಕಟ್ಟಿದರು
ಬಸವ ಸಂತತಿಯನೊಂದುಗೂಡಿಸಲು
ಶರಣ ಮೇಳವ ನಡೆಸಿದರು

23. ಶರಣ ಮೇಳದ ಮಹಿಮೆಯ ಸಾರುತ್ತ
ಗುರು ಲಿಂಗಾನಂದರು ಸಾಗಿದರು
ದೇಶ ವಿದೇಶದ ಶರಣರು ಬಂದು
ಶರಣ ಮೇಳದಲ್ಲಿ ಕೂಡಿದರು
(ಜಯಘೋಷ:
16ನೇ ಶರಣ ಮೇಳಕ್ಕೆ ಜಯವಾಗಲಿ
ಬಸವ ಧರ್ಮ ಪೀಠಕ್ಕೆ ಜಯವಾಗಲಿ
ಶರಣರ ಸತ್ ಸಂಕಲ್ಪಕ್ಕೆ ಜಯವಾಗಲಿ)

24. ಶರಣ ಬಂಧುಗಳು ಬಿನ್ನಹವನಿತ್ತು
ಕರೆದೊಯ್ದರು ಹಿರಿಯೂರಿಗೆ
ಹಿರಿಯೂರಿಗೆ ಹೋದ ಗುರುದೇವರು
ಬರಲಿಲ್ಲ ಮರಳಿ ಮಹಾಮನೆಗೆ
ಬರಲಿಲ್ಲ ಮಹಾಮನೆ ಮಹಾಮಠಕ್ಕೆ
(ನಿಧಾನವಾಗಿ ಮಕ್ಕಳು ಹಾಡುತ್ತಾ ಬರುವುದು.)

25. ಗುರುವೆ ಬಾರೋ ಎನ್ನೊಡೆಯ ಬಾರೊ
ಜಗದ್ಗುರುವೆ ಬಾರೋ ಮಹಾಮಠಕ್ಕೆ (ಮನೆಗೆ)
ನೀ ಬಾರದಿದ್ದರೆ ಎನ್ನಾಣೆ
ಗುರುದೇವರಾಣೆ ಎಂದೆಂಬೆ

26. ಬಸವ ಗುರುವೇ ಬಾರೋ
ಅಲ್ಲಮ ಪ್ರಭು ಬಾರೋ
ಚನ್ನಬಸವಣ್ಣ ನೀ ಕೇಳೋ.
ಎನ್ನೊಡೆಯ ಗುರು ಲಿಂಗಾನಂದರು
ಎಲ್ಲಿಹರೆಂದು ನೀವ್ ತೋರಿ

27. ತೋರ್ದರು ಲಿಂಗಾನಂದರು
ಗಣಲಿಂಗ ರೂಪದೊಳಗೆ
ತೋರ್ದರು ಗುರುಲಿಂಗಾನಂದರು
ಲಿಂಗದೇವನೊಳಗೆ
ಗುರು ಲಿಂಗಾನಂದರ ಲಿಂಗದೇವನೊಳಗೆ
ಗುರು ಲಿಂಗಾನಂದರ ಇಷ್ಟ ಲಿಂಗದೇವನೊಳಗೆ

28. ಗುರು ಲಿಂಗಾನಂದ ಗುರುಲಿಂಗಾನಂದ
ಗುರುಲಿಂಗಾನಂದ ಗುರು ಪಾಹಿಮಾಂ ॥
ಗುರು ಲಿಂಗಾನಂದ ಗುರುಲಿಂಗಾನಂದ
ಗುರುಲಿಂಗಾನಂದ ಗುರು ರಕ್ಷಮಾಂ ॥

-ಶರಣ. ಶ್ರೀಕಂಠಕುಮಾರ್, ಬಸವ ಗಂಗೋತ್ರಿ

ಸಂಪಾದಕೀಯ: -ಮಾತಾಜಿ

"ಬಹುದೇವತೋಪಾಸಕರ ಬಗ್ಗೆ ಅನುಕಂಪ"

ಬಸವ ಧರ್ಮ ಪೀಠದ ಉತ್ಕಟ ಅಭಿಮಾನಿಗಳಾದ ಓರ್ವ ಶರಣರು ಬಂದಿದ್ದರು. ಅವರ ಬಸವ ಭಕ್ತಿ, ತತ್ತ್ವನಿಷ್ಠೆ ಮೆಚ್ಚುವಂಥದ್ದು. ಶರಣ ಮೇಳದ ಸಮಯದಲ್ಲಿ ಮಾತ್ರವಲ್ಲ ವರ್ಷವಿಡೀ ತತ್ತ್ವ ಪ್ರಚಾರಕ್ಕೆಂದು ದುಡಿಯುತ್ತಾರೆ. ಹಲವಾರು ವಿಷಯ ಚರ್ಚಿಸುತ್ತಲಿದ್ದೆವು. ಆಗ ಅವರು ನುಡಿದರು, "ನಮ್ಮ ಜನ ಒಳ್ಳೆಯವರು; ಆದರೆ ತತ್ತ್ವನಿಷ್ಠರಲ್ಲ. ಶರಣ ಮೇಳದ ದೇಣಿಗೆ ಸಂಗ್ರಹಕ್ಕೆ ಹೋದಾಗ ಇಲ್ಲವೆನ್ನದೆ ಕೊಡುತ್ತಾರೆ. ಯಾವ ಮಠಾಧೀಶರು ಎಷ್ಟೇ ಮನಸ್ಸನ್ನು ಕಲಕಲು ನೋಡಿದರೂ ಅಂತರಂಗದಲ್ಲಿ ನಿಮ್ಮ ಬಗ್ಗೆಯೇ ಅಭಿಮಾನ. ಆದರೆ ಧೈರ್ಯವಾಗಿ ಹೊರಗೆ ತೋರಿಸಿಕೊಳ್ಳರು." ಎಂದು ಹೇಳಿದರು. ಇಡೀ ದಿನ ಈ ಬಗ್ಗೆಯೇ ಚಿಂತನೆ ಮಾಡತೊಡಗಿದೆ. "ಲಿಂಗಾಯತರು ಒಳ್ಳೆಯ ಜನರು ಆದರೆ ತತ್ತ್ವನಿಷ್ಠರಲ್ಲ, ಧೀರರಲ್ಲ." ಈ ಆಲೋಚನೆ ಮತ್ತೆ ಮತ್ತೆ ಸುಳಿಯುತ್ತಿದೆ. ಏಕೆ ಇವರುಗಳ ಮನಸ್ಸು ದುರ್ಬಲವಾಗಿದೆ ? ಸತ್ಯವನ್ನು ತತ್ತ್ವವನ್ನು ಅಳವಡಿಸಿಕೊಳ್ಳದಾಗಿದೆ ? ಹುಟ್ಟಿನಿಂದ ಬೇರೆ ಜಾತಿಯವರಿದ್ದು ಆಧ್ಯಾತ್ಮಿಕ ಪ್ರೇರಣೆಯಿಂದ ಬಸವ ಪಥಕ್ಕೆ ಒಲಿದು ಬಂದಿರುವ ಓರ್ವ ಶರಣೆ ಹೇಳುತ್ತಿದ್ದರು. "ನಮ್ಮಲ್ಲಿ ಹುಟ್ಟಿನಿಂದ ಲಿಂಗಾಯತರಾದ ಒಂದು ಕುಟುಂಬ ಬಾಡಿಗೆಗೆ ಇದ್ದಾರೆ. ಅವರು ಬೇರೆ ಏನೆಲ್ಲ ಮಾತನಾಡುತ್ತಿದ್ದರೂ ಸುಮ್ಮನಿರುತ್ತಾರೆ. ಆದರೆ ಏಕದೇವೋಪಾಸನೆ, ಲಿಂಗ ನಿಷ್ಠೆ, ತತ್ತ್ವನಿಷ್ಠೆ ಬಗ್ಗೆ ಮಾತನಾಡುತ್ತಿದ್ದಂತೆಯೇ ಮೆಲ್ಲನೆ ಜಾಗ ಖಾಲಿ ಮಾಡುತ್ತಾರೆ. ನೂರೆಂಟು ದೇವತೆಗಳನ್ನಿಟ್ಟು ಪೂಜೆ ಮಾಡುತ್ತಾರೆ. ತತ್ತ್ವ ಹೇಳಿದರೂ ಧೈರ್ಯದಿಂದ ಏಕದೇವೋಪಾಸನೆಗೆ ಬರುವುದಿಲ್ಲ."

ತತ್ತ್ವವನ್ನು ತಿಳಿದು ಬರುವವರು ಕಮಲದ ಹೂವಿನ ಮಕರಂದ ಪಾನ ಮಾಡಲು ಬರುವ ದಾರ್ಶನಿಕ ದುಂಬಿಗಳು. ಈ ಜಾತಿಯಲ್ಲಿ ಹುಟ್ಟಿದ್ದೇವೆ ಎಂದು ಏನೇನೋ ಆಚರಣೆ ಮಾಡುವವರು ಕಮಲದ ಹೂವಿನ ಕೆಳಗಿರುವ ಜೊಂಡು ನೀರನ್ನು ಕುಡಿದು ವಟಗುಟ್ಟುವ ಕಪ್ಪೆಯಂತಲ್ಲವೇ ಎನ್ನಿಸಿತು. ಇವರೇಕೆ ಹೀಗೆ ಮಾಡುತ್ತಾರೆ ಎಂದರೆ ಅವರ ಮನಸ್ಸನ್ನು ದೃಢ ಪಡಿಸುವ, ಸಬಲಗೊಳಿಸುವ ಸಂಸ್ಕಾರವಾಗಲೀ, ವಾತಾವರಣವಾಗಲೀ ಇಲ್ಲ. ಇವರ ಸುತ್ತಲೂ ಇರುವವರು ಬಹುದೇವತೋಪಾಸಕ ಜನರು, ರೋಗಾಣುಗಳ ಮಧ್ಯೆ ಇರುವವರಿಗೆ ರೋಗ ಬರುವುದು ಅಥವಾ ಇರುವುದು ಎಷ್ಟು ಸಹಜವೋ ಹಾಗೆ ಇವರ ಸುತ್ತಲಿನ ವಾತಾವರಣ. 'ಲಿಂಗದೇವ'ದ ಪರಿಕಲ್ಪನೆ ಏಕದೇವೋಪಾಸನೆಗೆ ಒತ್ತುಕೊಡುವ ಒಂದು ಅದ್ಭುತ ಶಾಸ್ತ್ರೀಯ ಸಿದ್ಧಾಂತದ ಕೊಡುಗೆ. ಈ ಹೊಡೆತ ಸಹಿಸಿಕೊಳ್ಳಲಾರದೆ ಕೆಲವರು ಮುಲುಗುವುದನ್ನು ನೋಡಿದರೆ ಧರ್ಮಪಿತ ಬಸವಣ್ಣನವರ ಕಲ್ಪನೆಯ ಲಿಂಗಾಚಾರ ಈ ಸಮಾಜದಲ್ಲಿ ಎಂದಾದರೂ ಅಳವಡುವುದು ಸಾಧ್ಯವೇ ಅನ್ನಿಸುತ್ತದೆ. ಸಾಮಾನ್ಯ ಗೃಹಸ್ಥರಿಗೆ ಅವರ ಸುತ್ತ ಹೆಂಡತಿ-ಮಕ್ಕಳು, ವ್ಯಾಪಾರ-ವ್ಯವಹಾರ, ಲಾಭ-ನಷ್ಟ ಇಂಥ ನೂರೆಂಟು ಜಂಜಡ. ಆದರೆ ಮಠಾಧಿಪತಿ, ಸ್ವಾಮಿಗಳಿಗೇನು ಭಯ, ಜಂಜಡ ? ಅವರು ಎಲ್ಲವನ್ನೂ ತೊರೆದ

ನಿರ್ಮೋಹಿಗಳು (?!) ಇವರಿಗೆ ಭಯ ಗೆಲ್ಲಲು ಆಗದೆ, ಬಹುದೇವತೋಪಾಸಕರು ಆಗುತ್ತಾರೆ ಎಂದರೆ ಇನ್ನು ಬಡಪಾಯಿ ಗೃಹಸ್ಥರ ಪಾಡೇನು ?

ಅನ್ಯರಿಗೆ ಅಸಹ್ಯ ಪಡಬೇಡ.

ಅದಕ್ಕೆ ಇಂದೆಲ್ಲ ನನಗೆ ಇದೇ ಆಲೋಚನೆ, ಕೊರೆತ. ಕೆಲವರು ಸಿಗರೇಟು ಸೇದುತ್ತಾರೆ, ಸಾರಾಯಿ ಕುಡಿಯುತ್ತಾರೆ. ಯಾವುದೋ ದೌರ್ಬಲ್ಯಕ್ಕೆ ಈಡಾಗಿ ಅದರ ಸೆಳವಿಗೆ ಸಿಕ್ಕಿರುತ್ತಾರೆ. ಆದರೆ ಏನಾದರೂ ಘಟನೆ ನಡೆದೋ, ಪ್ರವಚನ ಕೇಳಿಯೋ, ಪುಸ್ತಕ ಓದಿಯೋ ಪರಿವರ್ತನೆಯಾಗಿ ಸದಾಚಾರಿಗಳಾಗುತ್ತಾರೆ. ಆದರೆ ಮತ್ತೆ ಕೆಲವರು ಅದು ತಪ್ಪು ಎಂದು ತಿಳಿದೂ ಬಿಡಲಾರದೆ ಮಾನಸಿಕವಾಗಿ ತೊಳಲಾಡುತ್ತಾರೆ. ಪಾಪ ಪ್ರಜ್ಞೆಯಿಂದ ಬಳಲುತ್ತಾರೆ. ಸಿಗರೇಟು, ಗುಟಕಾ, ಮಾದಕ ಪೇಯಕ್ಕಿಂತಲೂ ದೊಡ್ಡ ದೌರ್ಬಲ್ಯ ಬಹುದೇವತೋಪಾಸನೆ. ಮೂಢ ನಂಬಿಕೆ, ಬಗೆಬಗೆಯ ಭಯ, ವಿವಿಧ ಭ್ರಾಂತಿಗಳ ಜಂಜಡದಲ್ಲಿ ಸಿಕ್ಕಿ ಹೊರ-ಬರಲಾರದೆ, ಧೈರ್ಯದಿಂದ ಜೀವನವನ್ನು ಎದುರಿಸಲಾರದೆ ಬಹುದೇವತೋ- ಪಾಸನೆಯ ಮೊರೆ ಹೋಗುತ್ತಾರೆ. ಆದ್ದರಿಂದ ದುರ್ವ್ಯಸನಗಳ ಜಾಲದಲ್ಲಿ ಸಿಕ್ಕವನ ಬಗ್ಗೆ ಹೇಗೆ ಮರುಕ ತಾಳಿ ಅದರಿಂದ ಹೊರತರಲು ವಿವೇಕಿಗಳು ಪ್ರಯತ್ನಿಸುವರು ಹಾಗೆ ನಿಜ ಶರಣರು ತಾವು ಧೈರ್ಯಶಾಲಿ ಏಕದೇವೋಪಾಸಕರಾಗಿದ್ದರೂ ಬಹುದೇವತೋಪಾಸನೆಯ ದೌರ್ಬಲ್ಯಕ್ಕೆ ಸಿಕ್ಕಿದವರ ಬಗ್ಗೆ ತಿರಸ್ಕಾರ ತಾಳದೆ, ಕಠೋರ ಭಾವನೆಯಿಂದ ವರ್ತಿಸದೆ ಅನುಕಂಪ ತಾಳಿ ಅವರ ಮನಸ್ಸನ್ನು ಸಬಲಗೊಳಿಸಲು ಯತ್ನಿಸಬೇಕು. ವ್ಯಾಪಾರ ವ್ಯವಹಾರದಲ್ಲಿ ಮುಂದೆ ಬರಲಿಲ್ಲ ಎಂದುಕೊಳ್ಳೋಣ. ತಮ್ಮಲ್ಲಿ ಏನು ಕುಂದುಕೊರತೆ, ವ್ಯವಹಾರ ಜ್ಞಾನವಿಲ್ಲದ ಸ್ಥಿತಿ ಇದೆ ಅದನ್ನು ತಿದ್ದಿಕೊಳ್ಳಬೇಕು ಎಂದು ಚಿಂತಿಸುವುದು ಬಿಟ್ಟು, ಯಾವುದಾದರೂ ದೇವತೆಯ ಮೊರೆ ಹೋಗುತ್ತಾರೆ. ಅದೇ ಸ್ವಯಂ ಪ್ರೇರಣೆಯಿಂದ ಬಸವ ಪಥಕ್ಕೆ ಬಂದವರು. ಶ್ರದ್ಧಾವಂತ ಶರಣ ಮಾರ್ಗಿಗಳಾಗಿ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಮಾನಸಿಕವಾಗಿ ದೃಢಗೊಳ್ಳುತ್ತಾರೆ. ಪಾಶ್ಚಿಮಾತ್ಯರು ಭಾರತೀಯ ತತ್ತ್ವಜ್ಞಾನ, ಧರ್ಮ ಸಂಸ್ಕೃತಿಗಳ ಬಗ್ಗೆ ಓದಿ ತಿಳಿದು, ಭಾರತೀಯರೆಲ್ಲರೂ ಮುಖ್ಯವಾಗಿ ಹಿಂದುಗಳು ಬಹಳ ತತ್ತ್ವಜ್ಞಾನಿಗಳು, ಅಧ್ಯಾತ್ಮಿಕ ಆಸಕ್ತಿಯುಳ್ಳವರು ಎಂದು ನಂಬಿ ಭಾರತಕ್ಕೆ ಬರುತ್ತಾರೆ. ಬಂದ ಮೇಲೆ ಇಲ್ಲಿಯ ಬಹುಪಾಲು ಹಿಂದುಗಳ ತತ್ತ್ವಜ್ಞಾನದ ಮಟ್ಟ ನೋಡಿ ಚಕಿತರಾಗುತ್ತಾರೆ. ಒಮ್ಮೆ, ಲಿಂಗದೇವ ಪ್ರಸಂಗದ ಕೇಸ್ ನಡೆಸುವ ವಕೀಲ ಜಯರಾಜ್ ಅವರು ಒಂದು ಸಲ ಹುಟ್ಟು ಲಿಂಗಾಯತರಾದ ಓರ್ವ ಹಿರಿಯ ವಕೀಲರನ್ನು ಭೇಟಿ ಮಾಡಿ ಬಂದು ಆಶ್ಚರ್ಯದಿಂದ ಹಲವಾರು ಪ್ರಶ್ನೆ ಕೇಳಿದರು. "ಅವರೊಡನೆ ಮಾತಾಡಿದೆ. ಅವರಿಗೆ ಲಿಂಗಾಯತ ಧರ್ಮದ ಬಗ್ಗೆ ಮೂಲಭೂತ ವಿಚಾರ ಸಹಿತ ತಿಳಿದಿಲ್ಲ." ಎಂದರು. ಆಗ ನಾನು ಹೇಳಿದೆ, "ಎಲ್ಲಾ ಲಿಂಗಾಯತರೂ ವಚನ ಸಾಹಿತ್ಯ ಓದುವುದಿಲ್ಲ, ಎಲ್ಲರಿಗೂ ಧಾರ್ಮಿಕ ತರಬೇತಿ ಇಲ್ಲ. ಬಸವ ಮಂಟಪಕ್ಕೆ ಬರುವವರಿಗೆ ಇಲ್ಲಿ ಸತತವಾದ ಸಂಸ್ಕಾರ ನೀಡುವ ಕಾರಣ, ಸಾಕಷ್ಟು ವಿಷಯ ತಿಳಿದಿರುತ್ತದೆ." ಎಂದು ಹೇಳಬೇಕಾಯಿತು. ಆದಿ ಶರಣರು ಜನರನ್ನು ಹೀಗೆ ವರ್ಗೀಕರಿಸುತ್ತಾರೆ.

1. ತನು ಭಕ್ತ ಮನ ಭಕ್ತ

ಶರೀರದ ಮೇಲೆ ಇಷ್ಟಲಿಂಗ ಲಾಂಛನವಿರುತ್ತದೆ; ಅಂತರಂಗದಲ್ಲೂ ನಿಜ ಜ್ಞಾನವನ್ನು ಅಳವಡಿಸಿಕೊಂಡಿರುತ್ತಾರೆ.

2. ತನು ಭವಿ ಮನ ಭಕ್ತ

ಕೆಲವರು (ಹುಟ್ಟು ಲಿಂಗಾಯತರಲ್ಲ) ತನುವಿನ ಮೇಲೆ ಲಿಂಗಧಾರಣೆ ಇರದು; ಆದರೆ ವಚನ ಸಾಹಿತ್ಯದಲ್ಲಿ ಉಕ್ತವಾಗುವ ಹಲವಾರು ಲಕ್ಷಣಗಳನ್ನು ಅಳವಡಿಸಿಕೊಂಡಿರುತ್ತಾರೆ.

3. ತನು ಭಕ್ತ ಮನ ಭವಿ

ಶರೀರದ ಮೇಲೆ ಹುಟ್ಟು ಲಿಂಗಾಯತರಾದ ಕಾರಣ ಇಷ್ಟಲಿಂಗವಿರುತ್ತದೆ. ಆದರೆ ವಚನ ಧರ್ಮ ಸಂಹಿತೆ ಹೇಳುವ ಯಾವ ಸಲ್ಲಕ್ಷಣವನ್ನೂ ಅಳವಡಿಸಿಕೊಂಡಿರುವುದಿಲ್ಲ.

4. ತನು ಭವಿ ಮನ ಭವಿ

ಹುಟ್ಟಿನಿಂದ ಲಿಂಗಾಯತರಿದ್ದರೂ ಲಾಂಛನ ಧಾರಣೆಯೂ ಇರದು. ಅಂತರಂಗದಲ್ಲಿ ಯಾವ ಸುಜ್ಞಾನ, ಸದ್ಗುಣಗಳೂ ಇರುವುದಿಲ್ಲ.

ಆದ್ದರಿಂದ ಲಿಂಗಾಯತರಲ್ಲಿ ಎರಡು ಪ್ರಕಾರದ ಜನರನ್ನು ಗುರುತಿಸಬಹುದು. ಲಿಂಗಮಾರ್ಗಿ-ಅಂಗಮಾರ್ಗಿ ಎಂದು. ಅದೇ ರೀತಿ ಎರಡು ಪಥಗಳನ್ನು ಗುರುತಿಸಬಹುದು. ಶರಣ ಮಾರ್ಗ-ಕರಣ (ಇಂದ್ರಿಯ) ಮಾರ್ಗ ಎಂದು. ದೇವನೊಬ್ಬ ಎಂದು ನಂಬಿ ಏಕದೇವನಿಷ್ಠೆಯಿಂದ ಸಾಗುವುದು <u>ಶರಣ ಮಾರ್ಗ</u>ವಾದರೆ , ಇಂದ್ರಿಯ ಸುಖಕ್ಕಾಗಿ ದೇವನಿಷ್ಠೆಯನ್ನು ಬಲಿಕೊಡುವುದು <u>ಕರಣ ಮಾರ್ಗ.</u> ಮೊದಲನೆಯವನು <u>ಲಿಂಗ ಮಾರ್ಗಿ</u> ಎರಡನೆಯವನು <u>ಅಂಗಮಾರ್ಗಿ.</u> ಈ ಅಂಗಮಾರ್ಗಿಯು <u>ದೀನ ಮನಸ್ಕ</u>ನಾದರೆ ಲಿಂಗ ಮಾರ್ಗಿಯು <u>ಧೀರ ಮನಸ್ಕ</u>ನಾಗಿರುವನು. ಮೊದಲನೆಯ ಮಾರ್ಗದಲ್ಲಿ ನಡೆವವರ ಸಂಖ್ಯೆ ಬಹಳ, ಶರಣ ಮಾರ್ಗದ ಪಥಿಕರ ಸಂಖ್ಯೆ ವಿರಳ. ಆದರೆ ಇವರು ಧನ್ಯರು !

ದುರ್ಬಲರ ಬಗ್ಗೆ ಧರ್ಮಪಿತರ ಉದಾರ ದೃಷ್ಟಿ

ಡಾ|| ಎಂ. ಚಿದಾನಂದ ಮೂರ್ತಿಯವರು "ಬಸವಣ್ಣನವರು" ಎಂಬ ಒಂದು ಕೃತಿಯಲ್ಲಿ (ಪುಟ 101) ಈ ಕೆಳಗಿನ ವಚನವನ್ನು ಉದಾಹರಿಸುತ್ತಾರೆ.

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ-
ಕೊರಳಲಿ ದೇವರಿರಲಿ - ಅವರ ಲಿಂಗವೆಂಬೆ, ಸಂಗನೆಂಬೆ
ಕೂಡಲ ಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು.

"ಇದು ನಮಗೆ ಆಶ್ಚರ್ಯದ ಸಂಗತಿಯಾಗಿ ತೋರಬಹುದು. ಅವರ ಮನೋಭಾವವನ್ನು ಒಪ್ಪುವುದು ಕಷ್ಟವಾಗಬಹುದು" ಎನ್ನುತ್ತ -

"ಬಸವಣ್ಣನವರು ಭಕ್ತರ ವೇಷದಲ್ಲಿದ್ದರೆ ಸಾಕು ಅಂಥವರನ್ನು ನಂಬಿಬಿಡುತ್ತಿದ್ದರು." ಎಂದು ಚಿ.ಮೂ ಅವರು ಅಭಿಪ್ರಾಯ ನೀಡುತ್ತಾರೆ.

"ಬಸವಣ್ಣನವರು ಪ್ರಧಾನವಾಗಿ ಭಾವಾವೇಶದ ಭಕ್ತರಾದ್ದರಿಂದ ಬಹುಬೇಗ ವೇಷಕ್ಕೆ ಮಾರುಹೋಗುತ್ತಿದ್ದರು. ಆದರೆ ಬುದ್ಧಿಪ್ರಧಾನರೂ ವಾಸ್ತವ ವಾದಿಗಳೂ ಆದ ಚನ್ನಬಸವಣ್ಣ, ಮಡಿವಾಳ ಮಾಚಿದೇವ ಮುಂತಾದವರ ವಿವೇಕ ಅವರನ್ನು ನಿರ್ದೇಶಿಸುತ್ತಿತ್ತು." (ಪುಟ 102) ಎಂದು ಚಿ. ಮೂ ಬರೆಯುತ್ತಾರೆ. ಶ್ರೀ ಮೂರ್ತಿಯವರಿಗೆ ಆಳವಾದ ಮತ್ತು ಮನೋವೈಜ್ಞಾನಿಕ ಚಿಂತನೆಯೇ ಇಲ್ಲವೆನಿಸುತ್ತದೆ. ಒಂದು ಸುಂದರ ಕಲಾಕೃತಿ ನೋಡುವಾಗ Right angle ಮತ್ತು Light angle ಬಹು ಮುಖ್ಯ.

ಧರ್ಮಪಿತ ಬಸವಣ್ಣನವರ ಪಾತ್ರ ಮತ್ತು ಹೊಣೆಗಾರಿಕೆ, ಚನ್ನ ಬಸವಣ್ಣ ಮಡಿವಾಳ ಮಾಚಿದೇವ ಮುಂತಾದವರ ಪಾತ್ರ ಮತ್ತು ಹೊಣೆಗಾರಿಕೆಗಳನ್ನು ಅರ್ಥಮಾಡಿಕೊಳ್ಳುವುದು ಬಲು ಮುಖ್ಯ.

1. ಓರ್ವ ವೈದ್ಯನಿರುತ್ತಾನೆ. ಅಲ್ಲಿಗೊಬ್ಬ ರೋಗಿ ಬರುತ್ತಾನೆ. ಇನ್ನಿತರ ಸಹಾಯಕ ವೈದ್ಯರು, ಆಯಾಗಳು "ಛೀ ಛೀ ಆ ರೋಗಿಗೆ ಪ್ರವೇಶ ಕೊಡಬೇಡಿರಿ. ತೀರಾ ಭಯಂಕರವಾಗಿ ರೋಗಗ್ರಸ್ತನಾಗಿದ್ದಾನೆ." ಎನ್ನುತ್ತಾರೆ. ಆದರೆ ಹಿರಿಯ ವೈದ್ಯ ಹೇಳುತ್ತಾನೆ, "ಆಸ್ಪತ್ರೆ ಇರುವುದೇ ಚಿಕಿತ್ಸೆಗಾಗಿ ನಾವು ಬೇಡ ಎಂದರೆ ಹೇಗೆ ?" ಎನ್ನುತ್ತಾನೆ. ಇಲ್ಲಿ ಈ ಹಿರಿಯ ವೈದ್ಯ ಮೂಢನಲ್ಲ, ಭಾವಾವೇಶದವನಲ್ಲ ಕರ್ತವ್ಯಶೀಲ ಮತ್ತು ಮಾನವೀಯತೆಯಿಂದ ಮಿಡಿಯುತ್ತಿರುವವನು.

2. ಓರ್ವ ತಾಯಿ ಇರುತ್ತಾಳೆ. ಅವಳಿಗಿರುವ 5-6 ಮಕ್ಕಳಲ್ಲಿ ಓರ್ವ ದುರ್ವ್ಯಸನಿ. ಕುಡಿತದ ಚಟ ಇರುವವನು. ಪಾಪ, ಮಗ ಬರುವವರೆಗೆ ತೂಕಡಿಸಿಕೊಂಡು ಎದ್ದಿದ್ದು, ಸರಿ ರಾತ್ರಿಯಲ್ಲಿ ತೂರಾಡುತ್ತ ಬಂದಾಗ ಬಾಗಿಲು ತೆಗೆದು ಕರೆದೊಯ್ದು ತಾಯಿ ಊಟಕ್ಕಿಡುತ್ತಾಳೆ. ಇದನ್ನು ಕಂಡು ಉಳಿದ ಒಳ್ಳೆಯ ಮಕ್ಕಳಿಗೆ ಕೋಪ. "ನಿನ್ನಿಂದಲೇ ಅವನು ಹಾಳಾಗುವುದು; ಬಾಗಿಲು ತೆಗೀಬೇಡ, ಮನೆ ಹೊರಗೆ ಬಿದ್ದಿರಲಿ, ಊಟಕ್ಕಿಡಬೇಡ ಹಸಿವಿನಿಂದ ಬಳಲಲಿ. ಅಂದರೆ ಬುದ್ಧಿ ಬರುತ್ತೆ." ಎನ್ನುವರು ಅವರು. ಆದರೆ ತಾಯಿಯ ಕರುಳು ಕೇಳುವುದೆ ? ಅದೇ ರೀತಿ ಮಾತೃಹೃದಯಿ ಬಸವಣ್ಣನವರು ತಾವು ಪರಮ ಪವಿತ್ರರೂ, ಪರಿಪೂರ್ಣಾತ್ಮರೂ ಆಗಿದ್ದೂ ಸಹ ದುರ್ವ್ಯಸನಿಗಳಿಗಾಗಿ ಮರುಗುವರು.

"ಹಾಗೆ ಕಠೋರವಾಗಬೇಡಿರಿ. ಶತ ಶತಮಾನಗಳ ಕಾಲ ಧರ್ಮಸಂಸ್ಕಾರ ಇಲ್ಲದೆ ಬಳಲಿದ್ದಾರೆ. ಅವರನ್ನು ತಿದ್ದಲು ಯಾರೂ ಯತ್ನಿಸಿಲ್ಲ ಅವಕಾಶ ಕೊಡೋಣ. ಮೊದಲು ಧರ್ಮದೀಕ್ಷೆ ಪಡೆದು ಮನೆಯೊಳಕ್ಕೆ ಬರಲಿ; ಮನೆಯವರಾಗಲಿ. ನಂತರ ಶರಣರ ಸಂಗ, ಗಣ ಮೇಳಾಪದ ಮೂಲಕ ತಿದ್ದೋಣ." ಎನ್ನುತ್ತಾರೆ.

ಹೀಗೆ ಮಾನವೀಯತೆಯಿಂದ ಕೂಡಿದ ವೈದ್ಯರಾಗಿ, ಅಂತಃಕರಣ ಮಿಡಿವ ತಾಯಿಯಾಗಿ ಬಸವಣ್ಣನವರು ನುಡಿದಿದ್ದಾರೇ ವಿನಾ ಭಾವಾವೇಶದಿಂದಲ್ಲ. ಅವರು ಮಾನವ ಸಮಾಜವನ್ನು ಉತ್ಕಟವಾಗಿ ಪ್ರೀತಿಸುವ ಹೃದಯ ವೈಶಾಲ್ಯವನ್ನಿಲ್ಲಿ ಗುರುತಿಸಬೇಕು. ಮಡಿವಾಳ ಮಾಚಿದೇವರು, ಪ್ರಭುದೇವರು, ಚನ್ನಬಸವಣ್ಣ ಮುಂತಾದವರ ಧೋರಣೆ, ದೃಷ್ಟಿಕೋನ ಹೇಗೆಂದರೆ ದೀಕ್ಷಾವಂತರಾದವರು once for all ಸಂಪೂರ್ಣವಾಗಿ ಪರಿವರ್ತನೆ

ಆಗಿಬಿಡಬೇಕು ಎಂದು. ಮನೋಚಿಕಿತ್ಸಕ ಧರ್ಮಪಿತರ ಧೋರಣೆ ಎಂದರೆ, 'ಆ ಸಾಮರ್ಥ್ಯ ಎಲ್ಲರಿಗೂ ಇರದು. ಕೆಲವೇ ಕೆಲವರು ಹಾಗೆ ಬದಲಾಗುವರು. ಬಹುಪಾಲು ಜನಕ್ಕೆ ಭಕ್ತರಾದ ತಕ್ಷಣವೇ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ- ಹೀಗೆ ಎಲ್ಲಾ ಸ್ಥಲಗಳ ಲಕ್ಷಣ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ಸಮಯ ಕೊಡಬೇಕು. "

ಮೆಲ್ಲ ಮೆಲ್ಲನೆ ಭಕ್ತನೆನಿಸಿಕೊಂಬೆ
ಮೆಲ್ಲ ಮೆಲ್ಲನೆ ಮಹೇಶ್ವರನೆನಿಸಿಕೊಂಬೆ
ಮೆಲ್ಲ ಮೆಲ್ಲನೆ ಪ್ರಸಾದಿ ಎನಿಸಿಕೊಂಬೆ
ಮೆಲ್ಲ ಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ
ಮೆಲ್ಲ ಮೆಲ್ಲನೆ ಶರಣನೆನಿಸಿಕೊಂಬೆ
ಮೆಲ್ಲ ಮೆಲ್ಲನೆ ಐಕ್ಯನೆನಿಸಿಕೊಂಬೆ,
ಮೆಲ್ಲ ಮೆಲ್ಲನೆ ಷಟ್‌ಸ್ಥಲವ ಮೀರಿ
ನಿರವಯಸ್ಥಲವನೆಯ್ದುವೆನಯ್ಯಾ ಲಿಂಗದೇವಾ. ಬ.ವ.ದೀ. 1379

ಒಂದೊಂದು ಸ್ಥಲದ ಗುಣಗಳನ್ನು ಅಳವಡಿಸಿಕೊಳ್ಳಲು ಸಮಯಾವಕಾಶ ಕೊಡಬೇಕು ಎನ್ನುತ್ತಾರೆ ಧರ್ಮಪಿತರು. ಆದರೆ ಚನ್ನಬಸವಣ್ಣನವರು ಕೇಳುವರು "ಮೆಲ್ಲಮೆಲ್ಲನೆ ಅಳವಡಿಸಿಕೊಳ್ಳಲು ವ್ಯಕ್ತಿಯ ಆಯುಷ್ಯ ಬಹಳ ದೀರ್ಘವೇನು ? ಅವರೇನು ಮರುಜವಣಿ ತಿಂದು ಅಮರರಾಗಿರುವರೆ ? ಆದ್ದರಿಂದ ಹಿಂದಣದನ್ನು ತಕ್ಷಣವೇ ಕೈಬಿಟ್ಟು ಶರಣ ಮಾರ್ಗ ಹಿಡಿಯುವ ತತ್ತ್ವನಿಷ್ಠೆ ಇರಬೇಕು." ಎಂಬುದು ಚನ್ನಬಸವಣ್ಣನವರ, ಮಾಚಿದೇವರ ವಾದ. ಅವರ ವಾದ ಬುದ್ಧಿವಂತ ಮಕ್ಕಳನ್ನು ಆಯ್ಕೆ ಮಾಡಿ, ಶಾಲೆಗೆ ಹೆಚ್ಚಿನ ರ್‍ಯಾಂಕ್ ಬರುವಂತೆ ಪ್ರಯತ್ನಿಸಬೇಕು ಎಂದಂತೆ; ಧರ್ಮಪಿತರದು ಮಾನವೀಯತೆಯಿಂದ ಮಿಡಿವ ಮನಸ್ಸು, 'ಬರೀ ಬುದ್ಧಿವಂತರನ್ನೇ ಆಯ್ದರೆ ಹೇಗೆ ? ಎಲ್ಲರೂ ಶಿಕ್ಷಿತರಾಗಬೇಕು, ಜಾಣರಾಗಬೇಕು' ಎಂಬ ದೃಷ್ಟಿಕೋನ.

ಆದ್ದರಿಂದ ಇಂದು ಸಹ ನಾವು ಉದಾರವಾದಿಗಳಾಗದೆ ಗತ್ಯಂತರವಿಲ್ಲ. ಸದ್ಯ ಭಕ್ತರಾಗಲಿ, ಭಕ್ತರಾಗಿ ಲಾಂಛನಧಾರಿಗಳಾಗಿರಲಿ; ನಂತರ ಮಹೇಶ್ವರ ಸ್ಥಲದ ಏಕದೇವನಿಷ್ಠೆ, ಪ್ರಸಾದಿ ಸ್ಥಲದ ಚಿತ್ತ ಸಮತೆ, ಪ್ರಾಣಲಿಂಗಿ ಸ್ಥಲದ ಯೋಗಾಭ್ಯಾಸ, ಶರಣ ಸ್ಥಲದ ಶರಣಾಗತಿ, ಐಕ್ಯಸ್ಥಲದ ಲಿಂಗ ಜ್ಞಾನ ಕಲಿಸೋಣ ಎಂದು ಆಲೋಚಿಸಬೇಕು. ಬಹುದೇವತೋಪಾಸಕರಾದ ಮೂಢ ಭಕ್ತರ ಮಾನಸಿಕ ದೌರ್ಬಲ್ಯ ನೋಡಿ ಅನುಕಂಪ ಪಡಬೇಕು, ತಿರಸ್ಕಾರ ತೋರಬಾರದು; ಮೆಲ್ಲನೆ ತಿದ್ದಲೆತ್ನಿಸಬೇಕು. ಚಿಕಿತ್ಸೆ ನೀಡುವ ವೈದ್ಯ ರೋಗಿಯ ರೋಗಾಣುಗಳು ತಗುಲದಂತೆ ಎಚ್ಚರವಹಿಸುವಂತೆ ತಾವು ಅವರ ಪ್ರಭಾವಕ್ಕೆ ಒಳಗಾಗದಂತೆ ಎಚ್ಚರದಿಂದಿರಬೇಕು. ◆

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ, ದೇವನೊಬ್ಬನೇ ಕಾಣಿರೋ,
ಇಬ್ಬರೆಂಬುದು ಹುಸಿ ನೋಡಾ ! ಲಿಂಗದೇವನಲ್ಲದೆ ಇಲ್ಲವೆಂದಿತ್ತು ವೇದ. - ಬ.ವ.ದೀ 544
ವೇದದಲ್ಲಿ ಹೇಳಿದ ಮಾತು " ಏಕಂ ಸತ್ ವಿಪ್ರಾ ಬಹುದಾ ವದಂತಿ "

ಚಿಂತನ ಲಹರಿ : - ಮಾತಾಜಿ

1. ವೈಚಾರಿಕತೆ ಯಾರಿಗೆ ಬೇಡ ?

ಒಂದು ದಿವಸ ಆಲೋಚನೆ ಮಾಡುತ್ತ ಕುಳಿತಿದ್ದೆ. ಹೀಗೊಂದು ವಿಚಾರ ಬಂದಿತು. ವಚನ ಸಾಹಿತ್ಯದಂತಹ ಪ್ರಗತಿಪರ ಸಾಹಿತ್ಯದ ಪಥಿಕರಾಗಬೇಕಾದ ಲಿಂಗಾಯತರೇ ಮೂಢನಂಬಿಕೆ ತುಂಬಿಕೊಂಡಿದ್ದಾರೆ. ಇನ್ನು ಲಿಂಗಾಯತೇತರರು - ಅನೇಕರಿಗೆ ವೈಚಾರಿಕ ಸಂಸ್ಕಾರವೇ ಕಡಿಮೆ; ಅಂಥವರಿಗೆ ಮೂಢನಂಬಿಕೆ ಖಂಡಿಸುವುದರಿಂದ ನೋವಾಗುವುದಲ್ಲವೇ? ನಮ್ಮ ಸಂಸ್ಥೆಗೆ ಹೆಚ್ಚಿನ ಕಾಣಿಕೆ ಕೊಡುವವರಿಗೆ ಕಲ್ಯಾಣ ಕಿರಣದ ಗೌರವ ಪ್ರತಿಯನ್ನು ಉಚಿತವಾಗಿ ಕಳಿಸುತ್ತೇವೆ. ಕಾಣಿಕೆ ಕೊಟ್ಟವರು ಲಿಂಗಾಯತೇತರರಿದ್ದು ಕಲ್ಯಾಣ ಕಿರಣದಲ್ಲಿ ಕಟುವಾದ ವಿಮರ್ಶಾತ್ಮಕ ಲೇಖನ ಬರುತ್ತವೆ. ಇದರಿಂದ ಅಂಥವರು ನೊಂದುಕೊಳ್ಳಬಹುದು. ಆದ್ದರಿಂದ ಲಿಂಗಾಯತೇತರರಿಗೆ ಗೌರವ ಪ್ರತಿ ಕಳಿಸದೆ ಇದ್ದರೆ ಹೇಗೆ?'' ಅಷ್ಟರಲ್ಲಿ ಶರಣ ಶ್ರೀಕಂಠಕುಮಾರ್ ಬಂದರು. ಅಭಿಪ್ರಾಯ ಕೇಳಿದೆ. ಅವರು ಅಂದರು, ''ಬಹಳ ಜನರು ಮೂಢನಂಬಿಕೆಗಳಿಂದ ಮಾನಸಿಕವಾಗಿ ದುರ್ಬಲರಾಗಿರುತ್ತಾರೆ. ಮೊದಲು ನೋವೆನಿಸಿದರೂ ಓದುತ್ತಾ ಓದುತ್ತಾ ವೈಚಾರಿಕ ಪರಿವರ್ತನೆ ಹೊಂದುವರು ; ಕಳಿಸುವುದೇ ಸರಿ....'' ಎಂದರು.

ನನ್ನ ಅಂತರಂಗವೂ ಅದೇ ಹೇಳುತ್ತಿತ್ತು. ''ಧಾರ್ಮಿಕ ಮಾರ್ಗಗಳು ಒಂದು ಬಗೆಯ ಚಿಕಿತ್ಸೆಯಂತೆ. ಉದಾಹರಣೆಗೆ ಐರೋಪ್ಯ ದೇಶದಿಂದ ಬಂದ ಅಲೋಪತಿ, ಮುಸ್ಲಿಂ ರಾಷ್ಟ್ರಗಳಿಂದ ಬಂದ ಯುನಾನಿ, ಭಾರತೀಯ ಮೂಲದ ಆಯುರ್ವೇದ -ಹೀಗೆ. ಅದೇ ರೀತಿ ವೈದಿಕ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಂ, ಲಿಂಗಾಯತ ಇತ್ಯಾದಿ. ಈ ದೇಶದಲ್ಲಿ ವೈದಿಕ ಧರ್ಮ ಉಂಟು ಮಾಡಿರುವ ಸಾಮಾಜಿಕ ರೋಗಗಳಾದ ಜಾತೀಯತೆ, ಅಸ್ಪೃಶ್ಯತೆ, ಬಹುದೇವತೋಪಾಸನೆ, ಮೂಢನಂಬಿಕೆ ಇವುಗಳನ್ನು ತೊಲಗಿಸಲು ಕ್ರಾಂತಿಯೋಗಿ ಬಸವಣ್ಣನವರು ಒಂದು ಧಾರ್ಮಿಕ ಚಿಕಿತ್ಸಾ ಪದ್ಧತಿ ಕೊಟ್ಟಿದ್ದಾರೆ. ಆದ್ದರಿಂದ ಇಂಥ ಚಿಕಿತ್ಸೆ ಇದೆ, ಪ್ರಯೋಗಿಸಿ ಎಂದು ಜನರಿಗೆ ಅವರು ಲಿಂಗಾಯತರೇ ಇರಲಿ, ಲಿಂಗಾಯತೇತರರೇ ಇರಲಿ ಹೇಳಿದರೆ ಒಳ್ಳೆತೇ ಅಲ್ಲವೇ ? ವಚನ ವಾಙ್ಮಯದ ಔಷಧಿ ಕುಡಿದು ಜನರು ಪ್ರಗತಿಪರ ಚಿಂತಕರಾದರೆ ಅವರ ಭವಿಷ್ಯವೂ ಉತ್ತಮವಾಗುವುದು.'' ಎಂದು ನನ್ನಲ್ಲಿ ನಾನು ನಿರ್ಧರಿಸಿಕೊಂಡೆ. ಹೀಗೆ ಮಾಡದಿದ್ದರೆ ಮರಗಿಡ ಸುತ್ತುವ, ನಾಗರ ಕಲ್ಲಿಗೆ ಹಾಲು ಎರೆಯುವ, ನೀರು ಮುಳುಗಿ ಪವಿತ್ರಾತ್ಮರಾಗುತ್ತೇವೆನ್ನುವ ಮೂಢತನವನ್ನು ಜನರು ಹೇಗೆ ತಾನೇ ಬಿಟ್ಟಾರು?

ಸ್ವಧರ್ಮ

ಕುರುಕ್ಷೇತ್ರದ ಯುದ್ಧ ನಡೆಯುವ ಸಮಯದಲ್ಲಿ ಎರಡು ಪಕ್ಷಗಳ ವೀರರೂ ಸಾಯಂಕಾಲದ ವೇಳೆಯಲ್ಲಿ ಸಂಧ್ಯಾ ವಂದನೆಗೆ ಹೋಗುತ್ತಿದ್ದರು. ಶ್ರೀ ಕೃಷ್ಣನು ಮಾತ್ರ ಯಾರೊಂದಿಗೂ ಹೋಗದೆ ಒಬ್ಬನೇ ಇದ್ದು ಬಿಡುತ್ತಿದ್ದನು.

ಶ್ರೀ ಕೃಷ್ಣನು ಏನು ಮಾಡುವನೋ ನೋಡಬೇಕೆಂದುಕೊಂಡು ಅರ್ಜುನನು ಒಂದು

ದಿನ ಯುದ್ಧ ಮುಗಿದ ಮೇಲೆ ಸಂಧ್ಯಾವಂದನೆಗೆ ಹೋಗದೆ ನಿಂತು ರಹಸ್ಯವಾಗಿ ಜಗನ್ನಾಟಕ ಸೂತ್ರಧಾರಿಯನ್ನು ಗಮನಿಸತೊಡಗಿದನು.

ಯುದ್ಧದ ನಂತರ ಬಳಲಿ ಹೋದ ಕುದುರೆಗಳಿಗೆ ನೀರು ಕುಡಿಸುತ್ತ ಅವುಗಳಿಗೆ ತಿನಿಸು ಹಾಕುತ್ತಾ, ಅನಂತರ ಅವುಗಳ ಶರೀರದಲ್ಲಿ ಅಲ್ಲಲ್ಲಿ ಚುಚ್ಚಿಕೊಂಡ ಬಾಣಗಳನ್ನು ಕಿತ್ತು ತೆಗೆದು ಗಾಯಗಳಿಗೆ ಮದ್ದು ಪೂಸುತ್ತ, ಹೀಗೆ ಕೆಲಸ ಮಾಡಿಕೊಂಡಿದ್ದ ಶ್ರೀಕೃಷ್ಣನನ್ನು ನೋಡಿ ಅರ್ಜುನನಿಗೆ ಆಶ್ಚರ್ಯವಾಗಿ, ''ಇದೇನು ಕೃಷ್ಣಾ, ಈ ಕೆಲಸ ಮಾಡಲಿಕ್ಕೆ ಎಷ್ಟೋ ಸೇವಕರಿರುವಾಗ ಜಗನ್ನಾಥನಾದ ನೀನೇ ಮಾಡುವುದೆಂದರೇನು ?'' ಎಂದು ನೊಂದುಕೊಂಡು ಹೇಳಿದನು.

ಅದಕ್ಕೆ ಶ್ರೀಕೃಷ್ಣನು ನಕ್ಕು ''ನಾನು ರಥ ನಡೆಸುವವನು. ಕುದುರೆಗಳನ್ನು ನೋಡಿಕೊಳ್ಳಬೇಕಾದ್ದು ನನ್ನ ಬಾಧ್ಯತೆ. ಈ ಸ್ವಧರ್ಮ ನಿರ್ವಹಣೆಯಿಂದ ಸಂಧ್ಯಾ ವಂದನೆಯನ್ನು ಮೀರಿಸುವ ಸಂತೃಪ್ತಿ ನನಗಾಗುತ್ತದೆ'' ಎಂದನು.

ಅರ್ಜುನನು ಕೃಷ್ಣನ ಮುಂದೆ ಮಂಡಿಗಾಲೂರಿ ''ಕೃಷ್ಣಾ ! ನಿನ್ನ ಮಹೋನ್ನತ ವ್ಯಕ್ತಿತ್ವವನ್ನು ಗುರುತಿಸಲಾರದ ನನ್ನ ಅವಿವೇಕವನ್ನು ಕ್ಷಮಿಸು'' ಎಂದನು.

ಕೃಪೆ: ಹೊಸ ದಿಗಂತ ದಿ. 8-7-2001. ಸಂಗ್ರಹ : ಶಿವರಾಮ್ ಭಟ್, ಹತ್ತೊಕ್ಲಲು.

ಸೇವೆ ಗೈವವರು ಪೂಜೆ-ಧ್ಯಾನ ತೊರೆಯಬೇಕೆ ?

ಹೊಸ ದಿಗಂತ ಎಂಬ ವೈದಿಕ ವಿಚಾರಧಾರೆಯ ದಿ.8-7-2001ರ ಸಾಪ್ತಾಹಿಕ ಪುರವಣಿಯಲ್ಲಿ ಈ ಒಂದು ಕಥೆ ಬಂದಿದೆ. ಇದನ್ನು ಓದಿದ ತಕ್ಷಣ ಎಂಥವರೂ ತಲೆದೂಗುವಂತಾಗುತ್ತದೆ. ಆದರೆ ವಿಶ್ಲೇಷಣೆ ಮಾಡಿದಾಗ ಈ ವಿಚಾರಧಾರೆ ಎಷ್ಟು ದೋಷಪೂರಿತ ಎನಿಸುತ್ತದೆ.

1. ಶ್ರೀ ಕೃಷ್ಣನನ್ನು ಜಗನ್ನಾಟಕದ ಸೂತ್ರಧಾರಿ ಎಂದು ಈ ಕಥೆಯಲ್ಲೂ ಬಣ್ಣಿಸುವರು; ಮತ್ತು ವೈದಿಕರು, ವೈಷ್ಣವರು ಹೀಗೆ ಸದಾ ಸ್ತೋತ್ರ ಮಾಡುವರು. ಶರೀರಧಾರಿಯಾದ ವ್ಯಕ್ತಿ ಎಷ್ಟೇ ಪ್ರಭಾವಶಾಲಿ ಇದ್ದರೂ ತನ್ನ ನಿಯಂತ್ರಣ ಇರುವವರ ಮೇಲೆ ಪ್ರಭಾವ ಬೀರಬಹುದೇ ವಿನಾ ಎಲ್ಲರ ಮೇಲೆ ಅಲ್ಲ; ಇನ್ನು ಇಡೀ ಜಗತ್ತಿನ ಮೇಲೆ ಸಾಧ್ಯವೇ ಇಲ್ಲ.

2. ಸಂಧ್ಯಾವಂದನೆ ಒಂದು ಧಾರ್ಮಿಕ ವಿಧಿ. ವೈದಿಕ ಧರ್ಮದಲ್ಲಿ ದ್ವಿಜ ವರ್ಣದ ಮೂವರಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಉಪನಯನ, ಜನಿವಾರ ಧಾರಣೆ ಇದೆ. ಹೀಗಾಗಿ ಸಂಧ್ಯಾವಂದನೆ ಇದೆ. ಬೆಳಿಗ್ಗೆ-ಸಂಜೆ ಎರಡೂ ಹೊತ್ತು ಮಾಡುವರು. ಅದೇಕೋ ಅದಕ್ಕೆ ಸಂಧ್ಯಾ (ಸಂಜೆಯ) ವಂದನೆ ಎಂಬ ಹೆಸರಿದೆ. ಗಾಯಿತ್ರಿ ಮಂತ್ರ ಜಪ ಸಂಧ್ಯಾವಂದನೆಯ ಮುಖ್ಯವಿಧಿ ಹಾಗಾದರೆ ಶ್ರೇಷ್ಠ ಪುರುಷರು ಈ ಧಾರ್ಮಿಕ ವಿಧಿ ಬಿಟ್ಟು ಆ ಸಮಯದಲ್ಲಿ ಕೆಲಸ, ಸೇವೆ ಮಾಡಿದರೆ ಶ್ರೇಷ್ಠರೆ ? ಕೆಲಸ ಮಾಡುವ ಕರ್ಮಯೋಗಿಗೆ ಪೂಜೆ - ಧ್ಯಾನ ಬೇಡವೆ ? ಕೆಲಸವು ಉಪಜೀವನದ ಸಂತೃಪ್ತಿಗೆ ಬೇಕಾದ ಅಗತ್ಯವಾದರೆ ಪೂಜೆ-ಧ್ಯಾನದಿಂದ ಆತ್ಮ ಪೋಷಣೆ. ಪೂಜೆ-ಧ್ಯಾನ ಮಾಡದೆ ಕೆಲಸ ಮಾಡುವುದೇ ಶ್ರೇಷ್ಠವಾದರೆ ಬ್ರಹ್ಮೋಪದೇಶ ಏಕೆ

ಬೇಕು ? ಶ್ರೀ ಕೃಷ್ಣನು ನಿಜಯೋಗಿಯಾಗಿದ್ದರೆ ಯುದ್ಧ ಭೂಮಿಯಲ್ಲಿ ಸಹ ಸಮಯಕ್ಕೆ ತಕ್ಕಂತೆ ಪೂಜೆ-ಪ್ರಾರ್ಥನೆ-ಧ್ಯಾನ ಮಾಡಬೇಕಿತ್ತು.

ಶ್ರೀ ಕೃಷ್ಣನು ಚತುರ್ವರ್ಣಗಳಲ್ಲಿ ಯಾವ ವರ್ಣಕ್ಕೆ ಸೇರಿರಬಹುದು ? ಕ್ಷತ್ರಿಯ ವರ್ಣವೋ, ಶೂದ್ರ ವರ್ಣವೋ ? ಏಕೆಂದರೆ ಅನೇಕರು ಯಾದವರು ಕ್ಷತ್ರಿಯರೆಂದು ಹೇಳುತ್ತಾರೆ. ಮತ್ತು ರಾಜರು ಕ್ಷತ್ರಿಯ ವಂಶದವರೇ ಆಗಿರುವುದು ಕಂಡು ಬರುತ್ತದೆ. ಕ್ಷತ್ರಿಯನಾದ ಅರ್ಜುನನಿಗೆ ತನ್ನ ಸೋದರಿ ಸುಭದ್ರೆಯನ್ನು ಮದುವೆ ಮಾಡಿಕೊಡಲಾಗಿತ್ತು. ಒಂದು ವೇಳೆ ಶೂದ್ರರಾಗಿದ್ದರೆ ಸುಭದ್ರೆ-ಅರ್ಜುನರ ವಿವಾಹ ವರ್ಣಾಂತರ ವಿವಾಹವಾಗಿ ಬಿಡುತ್ತಿತ್ತು.

ಇನ್ನು ಗೊಲ್ಲರ ಮನೆಯಲ್ಲಿ ನಂದಗೋಕುಲದಲ್ಲಿ ಬೆಳೆದುದು ನೋಡಿದರೆ ಶೂದ್ರ ಇದ್ದಿರಬಹುದೇ ಎನ್ನಿಸುತ್ತದೆ. ಶೂದ್ರರಿಗೆ ಯಜ್ಞೋಪವೀತಧಾರಣೆ, ಉಪನಯನ ಇಲ್ಲದ್ದರಿಂದಲೂ ಅವರಿಗೆ ಉದ್ಯೋಗ ಮಾಡುವುದೇ ಸಂಧ್ಯಾವಂದನೆ ಜಪ ತಪ ಎಲ್ಲವೂ. ಹೀಗಾಗಿ ಉಳಿದ ಕ್ಷತ್ರಿಯರು ಸಂಧ್ಯಾವಂದನೆಗೆ ಹೋದರೆ ಶೂದ್ರನಾಗಿ ತನ್ನ ಕೆಲಸ ಕಾರ್ಯದಲ್ಲೇ ನಿರತನಾಗಿರಬೇಕಾಗಿತ್ತು. ಕ್ಷತ್ರಿಯನಾದ ಕೃಷ್ಣನು ದ್ವಿಜ ಸಂಸ್ಕಾರ ಪಡೆದಿದ್ದರೆ ಆಗ ಸಂಧ್ಯಾವಂದನೆ ಮಾಡದಿರುವುದು ಗುರುದ್ರೋಹ, ಶಾಸ್ತ್ರ ದ್ರೋಹ, ಕುಲಾಚಾರ ಉಲ್ಲಂಘನೆಯಾಗುವುದಲ್ಲವೆ ?

ಅನುಭವ ಮಂಟಪದಲ್ಲಿ ಬರುವ ಶರಣ ನುಲಿಯ ಚಂದಯ್ಯನವರ ಪ್ರಸಂಗ ಇಲ್ಲಿ ನೆನಪಾಗುತ್ತದೆ. ''ನಾನು ನಿಷ್ಠೆಯಿಂದ ಕಾಯಕ ಮಾಡುತ್ತೇನೆ, ನಿತ್ಯ ಲಿಂಗಪೂಜೆ ಏಕೆ ಬೇಕು ?'' ಎಂದ ಆತನಿಗೆ ಶರಣರು ಚರ್ಚಿಸಿ, ತತ್ತ್ವ ಬೋಧೆ ಮಾಡುವರು. ಮನುಷ್ಯ ಯಾವುದಕ್ಕೆ ಎಷ್ಟು ಬೆಲೆ ಕೊಡಬೇಕೋ ಅಷ್ಟು ಮಾತ್ರ ಕೊಡಬೇಕು. ಶರೀರಕ್ಕೆ ಬೇಕು ಅನ್ನ; ಅದಕ್ಕಾಗಿ ಕಾಯಕ ಮಾಡಬೇಕು. ಮನ-ಬುದ್ಧಿಗಳಿಗೆ ಬೇಕು ಜ್ಞಾನ ಅದಕ್ಕಾಗಿ ಅಧ್ಯಯನ ಮತ್ತು ಶರಣ ಸಂಗಬೇಕು. ಆತ್ಮನಿಗೆ ಬೇಕು ಪೂಜೆ-ಧ್ಯಾನ ಮುಂತಾದ ಮೌಲ್ಯಗಳು. ಎಲ್ಲ ಅನ್ನಾಂಗಗಳಿಂದ ಕೂಡಿದ ಆಹಾರ ಹೇಗೆ ಮನುಷ್ಯನಿಗೆ ಅಗತ್ಯವೋ ಹಾಗೆ ಜೀವನಕ್ಕೆ ಭೌತಿಕ, ನೈತಿಕ, ಅಧ್ಯಾತ್ಮಿಕ ಎಲ್ಲ ಮೌಲ್ಯಗಳೂ ಬೇಕು. ಒಂದಕ್ಕೆ ಮಹತ್ವ ಕೊಟ್ಟು ಇನ್ನೊಂದನ್ನು ಕಡೆಗಣಿಸುವಂತಿಲ್ಲ. ■

ಮಾತಾಜಿ ಎಂಬ ನಾಮ ಧರಿಸಿ
ಬಂದಿಹರು ವಸುಧೆಗೆ ಬಸವನಿಚ್ಛೆಯಂತೆ
ಅಪ್ಪನಂತೆ ತಪ್ಪಿತಸ್ಥರ ಶಿಕ್ಷಿಸುತಿಹರು
ಅವ್ವನಂತೆ ನೊಂದ ಜೀವಿಗಳ ಸಂತೈಸುತಿಹರು
ಮತ್ತೆ ಮತ್ತೆ ಬರರು ಇಂಥ ಮಹಾತ್ಮರು
ಇದೇ ಜನ್ಮದಿ ಪರಿಹರಿಸಿಕೊಳ್ಳಿ ನಿಮ್ಮ ಅನಂತ ಜನ್ಮದ ಕರ್ಮವ
ಲೀಲಾವಿಶೇಷ ಲಿಂಗದೇವನೊಲಿದು
ನಿಂದಿಹನು ಇವರ ಕಾಯದಿ

-ಮಹಾದೇವಿ, ಧಾರವಾಡ

ಬಸವಣ್ಣನ ಪಥವೇ ಚೆಂದ

ಬೀಸುವ ಗಾಳಿ ಚೆಂದ
ಚಲಿಸುವ ಮೋಡ ಚೆಂದ
ಹರಿವ ನೀರು ಚಂದ
ಬಸವಣ್ಣನ ನಡೆಯೇ ಚೆಂದ ಜಗಕ್ಕೆಲ್ಲ

ಹಕ್ಕಿಯ ಹಿಂಡು ಚೆಂದ
ಚಿಲಿಪಿಲಿ ರಾಗ ಚೆಂದ
ಸುರಿವ ಮಳೆಯು ಚೆಂದ
ಬಸವಣ್ಣನ ನುಡಿಯೇ ಚೆಂದ ಜಗಕ್ಕೆಲ್ಲ

ಗುಡ್ಡ ಬೆಟ್ಟಗಳ ಸಾಲು ಚೆಂದ
ಗಿಡಮರಗಳ ಕಾಡು ಚೆಂದ
ಸಾಗರದ ಅಲೆಗಳು ಚೆಂದ
ಬಸವಣ್ಣನ ವ್ಯಕ್ತಿತ್ವವೇ ಚೆಂದ ಜಗಕ್ಕೆಲ್ಲ

ಹೂವಿನ ತೋಟ ಚೆಂದ
ಮಾಡುವ ಪೂಜೆ ಚೆಂದ
ಸದ್ಭಕ್ತರ ಸಂಗ ಚೆಂದ
ಬಸವಣ್ಣನ ಮೂರ್ತಿಯೇ ಚೆಂದ ಜಗಕ್ಕೆಲ್ಲ

ಮಹಾತ್ಮರ ನೋಟ ಚೆಂದ
ಶರಣರ ವಾಣಿ ಚೆಂದ
ಅನುಭಾವ ಗೋಷ್ಠಿ ಚೆಂದ
ಬಸವಣ್ಣನ ದೃಷ್ಟಿಯೇ ಚೆಂದ ಜಗಕ್ಕೆಲ್ಲ

ಬಸವ ಧರ್ಮ ಪೀಠ ಚೆಂದ
ಬಸವ ಭಕ್ತರ ಕೂಟ ಚೆಂದ
ಶರಣರ ಮೂರ್ತಿ ಚೆಂದ
ಬಸವಣ್ಣನ ಪಥವೇ ಚೆಂದ ಜಗಕ್ಕೆಲ್ಲ

-ಶರಣೆ ಶೋಭಾದೇವಿ ಪರಮಾದಿ, ಹುಬ್ಬಳ್ಳಿ

ಅಪೂರ್ವ ವ್ಯಕ್ತಿತ್ವದ ಅಪ್ಪಾಜಿ

ಜಯ ಗುರುದೇವ ಜಯ ಗುರುದೇವಾ
ಜಯ ಜಯ ಲಿಂಗಾನಂದ ಗುರುದೇವ ।ಪ।
ಬಸವನ ಬೆಳಕನು ಧರೆಗೆ ಚೆಲ್ಲುತ
ಜ್ಞಾನದ ಬೆಳಕನು ನೀಡಿದಿರಿ ॥ಅ. ಪ॥

ವಚನಾಮೃತದ ಸವಿಯನು ನೀಡಿ
ಪ್ರವಚನ ಪಿತಾಮಹರೆನಿಸಿದಿರಿ
ಅನುಭಾವಾಮೃತ ಅಡಿಗೆಯ ಮಾಡಿ
ಶರಣರಿಗೆಲ್ಲ ಉಣಿಸಿದಿರಿ ।1।

ಶ್ರೀಗುರು ಬಸವನ ಕರುಣೆಯ ಕಂದ
ಬಸವನ ಬೆಳಕನು ಧರೆಗೆ ತಂದ
ಮೂಢನಂಬಿಕೆ ಜಾತೀಯತೆಯನು
ದಿಟ್ಟ ನಿಲುವಿನಿಂ ನಿಲಿಸಿದಿರಿ ।2।

ಕಂಚಿನ ಕಂಠದ ಮಿಂಚಿನ ನೋಟದ
ಸದ್ಗುರು ಲಿಂಗಾನಂದ ಗುರುದೇವ
ಮೂಢ ಮನಸನು ಅರಳಿಸುವಂಥ
ಪ್ರವಚನ ವೈಖರಿ ಗುರುದೇವ ।3।

ಬಸವನ ತೇಜ ಪ್ರಭುವಿನ ವೈರಾಗ್ಯ
ನಿಮ್ಮಲ್ಲಿ ಕಂಡೆವು ಗುರುದೇವ
ಚನ್ನಬಸವನ ಚಿನ್ಮಯ ನಿಲುವನು
ನಿಮ್ಮಲ್ಲಿ ಕಂಡೆವು ಗುರುದೇವಾ ।4।

ಮಡಿವಾಳನಂತೆ ಮಡಿಯನು ಮಾಡುವ
ಕಾಯಕ ನಿಮ್ಮದು ಗುರುದೇವ
ಮಾಚಿ ತಂದೆಯ ಘಂಟಾನಾದದಂತೆ
ನಿಮ್ಮಯ ವಾಣಿ ಗುರುದೇವ ।5।

ಮಹಿಳಾ ಜಗದ್ಗುರು ಪೀಠವ ಸ್ಥಾಪಿಸಿ
ಸ್ತ್ರೀಯರ ಹಿರಿಮೆಯ ಸಾರಿದಿರಿ
ಬಸವ ತತ್ವದ ಕೀರ್ತಿ ಪತಾಕೆಯ
ಎಲ್ಲೆಡೆ ಹಾರಿಸಿ ಮೆರೆಸಿದಿರಿ ।6।

- ಶಾರದಾ ಬಸವರಾಜ್, ಭದ್ರಾವತಿ

ವಚನ ಕಿರಣ

-ಮಾತೆ ಅಕ್ಕಮಹಾದೇವಿ

1. ಕಾಮದ ಕಳೆಯ ಕಿತ್ತು
ಕ್ರೋಧದ ಹೆಂಟೆಯನೊಡೆದು
ಲೋಭದ ಕಸವ ತೆಗೆದು
ಮೋಹದ ಮುಳ್ಳುಗಳನ್ನಾಯ್ದು
ಮದದ ಕಲ್ಲುಗಳನ್ನೆತ್ತಿ
ಮತ್ಸರದ ಕರಿಕೆಯ ಕಿತ್ತಿ
ಎನ್ನ ಹೃದಯ ಹೊಲವ ಹಸನುಗೊಳಿಸಿ
ಭಕ್ತಿ ಬೀಜವ ಬಿತ್ತಿ ಜ್ಞಾನದ ನೀರನ್ನೆರೆದು
ವೈರಾಗ್ಯದ ಗೊಬ್ಬರವ ಹಾಕಿ
ಸ್ವಾನುಭಾವವೆಂಬ ಫಲವ ನೀಡಿ ಸಲಹಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

2. ಒಳಗೆ ಕಾಮ ; ಮೇಲೆ ವೈರಾಗ್ಯದ ಮುಸುಕು
ಒಳಗೆ ವಿಷಯ ; ಮೇಲೆ ತ್ಯಾಗದ ಸೋಗು
ಒಳಗೆ ಕುಟಿಲತೆ ; ಮೇಲೆ ವಿನಯದ ಕವಚ
ಒಳಗೆ ದ್ವೇಷ ; ಮೇಲೆ ಮಮತೆಯ ತೋರಿಕೆ
ಒಳಗೆ ಕಪಟ ; ಮೇಲೆ ಕರುಣೆಯ ಹೊದಿಕೆ
ಹೀಗೆ ಒಳಗೊಂದು ಹೊರಗೊಂದಾದವರು
ಶರಣ(ವೈರಾಗ್ಯ) ಪಥಕ್ಕೆ ಸಲ್ಲರು, ಮಾತಾಪ್ರಿಯ
ಸಚ್ಚಿದಾನಂದಸಂಥವರನೊಲ್ಲನಯ್ಯಾ

3. ಬೀರುವ ಪುಷ್ಪದ ಪರಿಮಳದಲ್ಲಿ
ನೀನಿಪ್ಪೆಯಯ್ಯಾ
ಅರ್ಪಿಸುವ ಧೂಪದ ಸುವಾಸನೆಯಲ್ಲಿ
ನೀನಿಪ್ಪೆಯಯ್ಯಾ
ಬೆಳಗುವ ದೀಪದ ದೀಪ್ತಿಯಲ್ಲಿ ನೀನಿಪ್ಪೆಯಯ್ಯಾ
ತಾಡಿಪ ಘಂಟೆಯ ನಿನಾದದಲ್ಲಿ
ನೀನಿಪ್ಪೆಯಯ್ಯಾ
ಕಾಣುವ ಲಿಂಗದ ಜ್ಯೋತಿಯ ಪ್ರಭೆಯಲ್ಲಿ
ನೀನಿಪ್ಪೆಯಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

4. ಹರಿಯುವ ನೀರಿನ ಕಲರವದಲ್ಲಿ
ನೀನಡಗಿಪ್ಪೆಯಯ್ಯಾ
ಬೀಸುವ ಗಾಳಿಯ ತಂಪಿನಲ್ಲಿ
ನೀನಡಗಿಪ್ಪೆಯಯ್ಯಾ
ಸೂಸುವ ಹೂವಿನ ಕಂಪಿನಲ್ಲಿ
ನೀನಡಗಿಪ್ಪೆಯಯ್ಯಾ
ಕೂಗುವ ಕೋಗಿಲೆಯ ಗಾನದಲ್ಲಿ
ನೀನಡಗಿಪ್ಪೆಯಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

5. ಹಂಬಲ ಬೇಕು ಗುರುದರ್ಶನಕೆ
ಹಂಬಲ ಬೇಕು ಶರಣರ ಸತ್ಸಂಗಕ್ಕೆ
ಹಂಬಲ ಬೇಕು ದೈವಿ ಕೃಪೆಗೆ
ಹಂಬಲ ಬೇಕು ಗುರು,ಲಿಂಗ,ಜಂಗಮ ಸೇವೆಗೆ
ಹಂಬಲಿಸಿದಲ್ಲದೆ ಆವುದನ್ನೀಯಲಾರನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದನು.

6. ಹುಟ್ಟಿದ್ದೇವೆಂದು ಬದುಕುವುದಲ್ಲ ;
ಮಾನವ ಜನ್ಮದಲ್ಲಿ ಬಂದಿರುವುದೇ
ಶ್ರೇಷ್ಠವೆಂದರಿದು ಬಾಳಬೇಕು.
ಉಂಬುವುದಕ್ಕೆ ಬದುಕಲ್ಲ ;
ಬದುಕುವುದಕ್ಕಾಗಿ ಉಣಬೇಕು.
ಸರಳ ಜೀವನ,
ಉನ್ನತ ವಿಚಾರಗಳನ್ನಿರಿಸಿಕೊಂಡು
ಆದರ್ಶದಿಂದ ಬದುಕುವವನೆ
ಮಾತಾ ಪ್ರಿಯ ಸಚ್ಚಿದಾನಂದನಿಗೆ ಪ್ರಿಯನು.

7. ಪರರ ತಪ್ಪನ್ನು ಎತ್ತಿ ಆಡದಿರುವುದು
ಮಾನವ ಗುಣ,
ಪರರ ತಪ್ಪನ್ನು ಎತ್ತಿ ಆಡುತ್ತಾ
ನಿಂದಿಸಿ ಟೀಕಿಸುವುದು ಅಸುರಿ ಗುಣ,
ಪರರ ತಪ್ಪನ್ನು ಮನ್ನಿಸಿ ತಿದ್ದಿ ಮುನ್ನಡೆಸುವುದೇ
ಮಹಾತ್ಮರ ಗುಣವಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

8. ತಪ್ಪು ಮಾಡುವುದು ಮಾನವನ ಗುಣ,
ಮಾಡಿದ ತಪ್ಪನ್ನು ಒಪ್ಪಿಕೊಂಡು
ತಿದ್ದಿಕೊಂಡು ಮುನ್ನಡೆವುದೇ ಮಹಾತ್ಮರ ಗುಣ,
ಮಾಡಿದ ತಪ್ಪನ್ನು ಒಪ್ಪದೆ ಇನ್ನೊಬ್ಬರ
ಮೇಲೆಸಗುವುದು ಅಸುರಿ ಗುಣವಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

ಕಲ್ಯಾಣ ಕಿರಣ

ಪ್ರತಿ ತಿಂಗಳ ಪ್ರಾರಂಭದಲ್ಲಿ
ಬರುವುದು ಕಲ್ಯಾಣ ಕಿರಣ
ನಮಿಸುವೆನು ನಾನು ಮನದಲ್ಲೆ
ಮಾತಾಜಿಯವರ ಚರಣ . 1

ಓದಲು ಬರುವ ಭಕ್ತರಿಗೆ
ಬಸವ ತತ್ತ್ವ ತಿಳಿಯಲು ಅದುವೆ ದರ್ಪಣ
ಶರಣರ ಸಮಸ್ಯೆಗೆ ಸಮಾಧಾನ
ನೀಡುವುದೀ ಕಲ್ಯಾಣ ಕಿರಣ. 2

ಕಲ್ಯಾಣ ಕಿರಣ ಎಂಬ ಹೊತ್ತಿಗೆಯಿಂದ
ಸಿಗುವುದು ನಮಗೆ ಪ್ರೇರಣೆ
ಪ್ರತಿನಿತ್ಯ ಮಾಡುವೆ ನಾ ಮರೆಯದೆ
ಗುರು ಬಸವನ ಸ್ಮರಣೆ 3

ಆಧ್ಯಾತ್ಮ ಚಿಂತನ ಬೆಳೆಸಿತು
ಎನ್ನಲ್ಲಿ ಕಲ್ಯಾಣ ಕಿರಣ
ಬೇಕು ಎನಿಸಿತು ಜೀವನದಲ್ಲಿ
ಎನಗೂ ಲಿಂಗದೇವನ ಧ್ಯಾನ 4

ಶರಣರ ಹೃದಯದಿಂದ
ಹೊರಹೊಮ್ಮಿತ್ತು ಈ ಕಲ್ಯಾಣ ಕಿರಣ
ಕಲ್ಯಾಣ ಕಿರಣ ಓದುವ ಎಲ್ಲಾ
ಶರಣರಿಗೆ ಎನ್ನ ಅನಂತ ಶರಣು 5

- ಕು. ಮಹೇಶ್ವರಿ ಪಾಟೀಲ, ಧನಾಶ್ರೀ

ವಚನ ಕಿರಣ

ಅನುಭಾವವೆಂಬ ಅಮೃತ ಫಲವ
ಅಟ್ಟುಂಡದಲ್ಲದೆ ಅರಿಯಲಾಗದು
ಬಸವ ಧರ್ಮವ, ಅರಿತ
ಧರ್ಮದ ಮರ್ಮವನು
ಆಚರಣೆಯಲಿ ತರದೆ
ಸಿದ್ಧಿಸದು ಲಿಂಗಾನುಭಾವ.
ಈ ಅರಿವು ಆಚಾರ ಅನುಭಾವವುಳ್ಳ
ಶರಣರ ಸಂಗದಲ್ಲಿ ಇರುವಂತೆ
ಕರುಣಿಸಾ ಬಸವಪ್ರಿಯ ಲಿಂಗದೇವಾ.


-ಮಾತಾತನಯ

ಬಲ್ಲವರಿಂದ ತಿಳಿದುದು ಬಹಳ
ತಿಳಿದು ನಡೆದುದು ಅತಿ ವಿರಳ
ನಡೆದವನಿಗೆ ಇರುವದು
ಮುಕ್ತಿಯ ಮಾರ್ಗ ಅತಿ ಸರಳ
ಕಡೆಯಲ್ಲಿ ಸಿಗುವ ಮುಕ್ತಿಗಿಂತಲೂ
ಭವದಲ್ಲಿ ಇದ್ದೂ ಇಲ್ಲದಂತೆ
ಭವದಿಂದ ಮುಕ್ತಿ ದೊರಕಿಸುಕೊಳ್ಳುವಂತಹ
ಪಥವ ತೋರಿದ ಧರ್ಮಪಿತ ಬಸವ ಗುರುವಿನ
ಅವಿರತ ಸ್ಮರಣೆಯಲ್ಲಿಟ್ಟು ಎನ್ನ ಬದುಕಿಸಾ
ತಂದೆ ಬಸವ ಪ್ರಿಯ ಲಿಂಗದೇವಾ

-ಮಾತಾತನಯ

ಜಗವೆಂಬ ಹೊಲದಲ್ಲಿ
ಪೂಜ್ಯ ಲಿಂಗಾನಂದರೆಂಬ ರೈತರು
ಪ್ರವಚನವೆಂಬ ಕುರ್ಚಿಗೆ ಹಿಡಿದು
ಮೂಢನಂಬಿಕೆಯ ಕಳೆಯ ಕಿತ್ತು
ವಚನವೆಂಬ ಬೀಜ ಬಿತ್ತಲು
ಸತ್‌ಫಲವೆಂಬ ಬಸವ ಭಕ್ತರು ಬಂದರು.
ಇಂತಹ ಫಲವ ನೋಡಲು ಇಲ್ಲದಾದರು
ಪೂಜ್ಯ ಲಿಂಗಾನಂದರು, ನಮ್ಮ ದುರ್ದೈವವೋ
ಬಸವ ಲಿಂಗ ಲೀಲೆಯೋ ತಿಳಿಯದಂತಾಗಿದೆ.

- ಎಸ್. ಎಂ. ನಟರಾಜ, ಹಟ್ಟೊಳ್ಳಿ



ಬಾಳಿನ ಸಾರ್ಥಕತೆ

ಬಾಗಿಲ ಮುಂದೆ ಬಾಳೆ ಬಿತ್ತುವುದಯ್ಯಾ
ಬಾಳೆ ಗೊನೆಯಾಗದ ಮುನ್ನ ಕೂಡಿಕೊಳ್ಳಿ ಲಿಂಗದೇವನ ।

- ಬ.ವ.ದೀ 1029

ಧರ್ಮಪಿತರ ಈ ವಚನ ಏನೆಂದು ಹರಸುತ್ತಿದೆ ? ''ಬಾಳೆ ಗೊನೆಯಾಗದ ಮುನ್ನ ಕೂಡಿಕೊಳ್ಳಿ ಲಿಂಗದೇವನ'' ಎಂದು ಉಪದೇಶಿಸುತ್ತಾ ನಮ್ಮನ್ನೆಲ್ಲ ಅವಸರಪಡಿಸುತ್ತಿದೆಯಲ್ಲವೇ ? ಗುರು-ಹಿರಿಯರಿಗೆ ನಮಸ್ಕರಿಸಿದಾಗ ''ನೂರು ವರ್ಷ ಸುಖವಾಗಿ ಬಾಳಿರಿ'' ಎಂದು ಹರಸುವುದುಂಟು. ಆದರೆ ಈ ವಚನ ಹಾಗನ್ನುತ್ತಿಲ್ಲ! ಏಕೆಂದರೆ ಬಾಳೆಗಿಡದ ಆಯುಷ್ಯ ಒಂದು ವರ್ಷ ಮಾತ್ರ. ಅಷ್ಟರೊಳಗೆ ಅದು ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಬೇಕು. ಗಿಡ ಹಾಕಿದ ಒಂದು ವರ್ಷಕ್ಕೆ ಗೊನೆ ಕೊಟ್ಟಮೇಲೆ ಅದು ಜಗತ್ತಿನಿಂದ ನಿರ್ಗಮಿಸುತ್ತದೆ. ಆದರೆ ಇಲ್ಲಿ ''ಎಷ್ಟು ದಿನ ಬದುಕಿದರು ಎಂಬುದಕ್ಕಿಂತ ಹೇಗೆ ಬದುಕಿದರು ಎಂಬುದು ಬಹಳ ಮುಖ್ಯ.'' ಅದಕ್ಕೆ ಅಲ್ಲವೆ ''ಬಾಳೆಗೆ ಒಂದೇ ಗೊನೆ; ಬಾಳುವವನಿಗೆ ಒಂದೇ ಮಾತು'' ಎಂಬ ಗಾದೆ ರೂಢಿಗೆ ಬಂದಿರುವುದು. ಆದರೆ ಇಲ್ಲಿ ಅಪ್ಪನವರು ''ಗೊನೆಯಾಗದ ಮುನ್ನ'' ಎಂದು ಬೇರೆ ಹೇಳುತ್ತಿದ್ದಾರೆ. ಹಾಗಿದ್ದರೆ ಇದರರ್ಥ ಏನಿರಬಹುದು ?!

ಸಾಮಾನ್ಯವಾಗಿ ಮನೆಗಳಲ್ಲಿ ಹಿರಿಯರು ಹೇಳುವುದುಂಟು. ಪ್ರತಿಯೊಂದು ಮನೆಯಲ್ಲೂ ಕನಿಷ್ಠ ಐದಾರು ಗಿಡಗಳನ್ನಾದರೂ ಕಡ್ಡಾಯವಾಗಿ ಬೆಳೆಸಬೇಕು. ಅವು ಯಾವುವೆಂದರೆ ಬಾಳೆ, ನುಗ್ಗೆ, ತುಳಸಿ, ಕರಿಬೇವು, ತೆಂಗು, ನಿಂಬೆ....ಇತ್ಯಾದಿ. ಇವುಗಳನ್ನು ಏಕೆ ಬೆಳೆಸಬೇಕೆಂದರೆ ದಿನನಿತ್ಯದ ಉಪಯೋಗಕ್ಕೆ, ಅಡುಗೆಗೆ, ಆರೋಗ್ಯಕ್ಕೆ ಇವು ಬೇಕೇ ಬೇಕು. ಅಲ್ಲದೆ ಈ ಗಿಡಗಳು ಹೆಚ್ಚು ವಿಸ್ತಾರವಾದ ಜಾಗಗಳನ್ನು ಕೇಳುವುದಿಲ್ಲ ಮತ್ತು ಅತಿಯಾಗಿ ಕೊಂಬೆ ರೆಂಬೆಗಳನ್ನು ಚಾಚುತ್ತಾ ಬೆಳೆಯುವುದಿಲ್ಲ. ಆದರೆ ಇತ್ತೀಚಿನ ಜನರಲ್ಲಿ ಪರಿಸರ ಪ್ರಜ್ಞೆ ಮತ್ತು ಪ್ರೇಮ ಕಡಿಮೆಯಾಗಿ ಎಷ್ಟು ಜಾಗವಿದ್ದರೂ ಕಟ್ಟಡಗಳನ್ನು ಎಬ್ಬಿಸಿ, ಬಾಡಿಗೆಗೆ ಕೊಡುವ ಹವ್ಯಾಸ ಬೆಳೆಯುತ್ತಿದೆ. ಅದಿರಲಿ, ಈಗ ಬಾಳೆಗಿಡದ ವಿಷಯಕ್ಕೆ ಬರೋಣ.

ಬಾಳೆಗಿಡ ನೋಡಲು ಸಾತ್ವಿಕ, ಸಹಜ ಸುಂದರ, ಗಂಭೀರವಾಗಿದ್ದರೂ ಅದು ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಧಾರ್ಮಿಕ ಸಮಾರಂಭಗಳಲ್ಲಿ ಪೂಜೆಗೆ ಬಾಳೆಹಣ್ಣು, ಊಟಕ್ಕೆ ಬಾಳೆ ಎಲೆ, ಅಲಂಕಾರಕ್ಕೆ ಬಾಳೆ ಕಂಬ, ನೈವೇದ್ಯ ಹಂಚಲು ಎಲೆಗಳಿಂದ ತಯಾರಾದ ದೊನ್ನೆ-ಇವು ಬೇಕೇ ಬೇಕು. ಈಗಿನ ಪ್ಲಾಸ್ಟಿಕ್ ಯುಗದಲ್ಲಿ ಬಾಳೆ ಎಲೆಗಳ ಉಪಯೋಗ ಹಿಂದಕ್ಕೆ ಸರಿದಿದ್ದರೂ ಹಬ್ಬ-ಹುಣ್ಣಿಮೆಗಳಲ್ಲಿ ಅದರ ಮಹತ್ವ ಕಡಿಮೆಯಾಗಿಲ್ಲ. ಇನ್ನು ಆರೋಗ್ಯದ ದೃಷ್ಟಿಯಿಂದ ಹೇಳುವುದಾದರೆ ಬಲಿತ ಬಾಳೆಕಂಬದ ತಿರುಳು ಬಹಳ ಒಳ್ಳೆಯದು. ಮೂತ್ರಪಿಂಡದಲ್ಲಿ ಕೃತಕವಾಗಿ ಸೃಷ್ಟಿಯಾಗುವ ಕಲ್ಲನ್ನು ಆಪರೇಷನ್ ಇಲ್ಲದೆ ಕರಗಿಸುವುದರಲ್ಲಿ ಇದರ ಪಾತ್ರ ಅತ್ಯಂತ ಮಹತ್ವದ್ದು ಎಂದು ವೈದ್ಯರು ಸಲಹೆ ಮಾಡುತ್ತಾರೆ. ಹೀಗೆ ಬಾಳೆಗಿಡ ಬಹೂಪಯೋಗಿ ಸಸ್ಯವಾಗಿದೆ. ಇದುವರೆಗೂ ಕೇವಲ ಧಾರ್ಮಿಕ, ಆರ್ಥಿಕ, ಔಷಧೀಯ

ಮೌಲ್ಯಗಳಿಂದ ಮಾತ್ರ ಶೋಭಿಸುತ್ತಿದ್ದ ಈ ಬಾಳೇಗಿಡ ಧರ್ಮಪಿತ ಬಸವಣ್ಣನವರು ಬಂದ ಮೇಲೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಮೌಲ್ಯಗಳೆಂಬ ಎರಡು ಚಿನ್ನದ ಗರಿಗಳನ್ನು ತನ್ನ ಕಿರೀಟಕ್ಕೆ ಸಿಕ್ಕಿಸಿಕೊಂಡಿತು! ಅಷ್ಟೆ ಅಲ್ಲ, ಅಪ್ಪನವರ ಕೃಪೆಯಿಂದ ಬಹುಕಾಲದಿಂದ ತನ್ನ ಮೇಲಿದ್ದ ಕಳಂಕವನ್ನು ತೊಡೆದುಕೊಂಡು ಪರಿಶುದ್ಧವಾಯಿತು!!. ವಚನ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವನ್ನು ಗಟ್ಟಿಯಾಗಿಸಿಕೊಂಡಿತು !!!

ಬಾಳೆಯನ್ನು ಕುರಿತು ಒಂದು ಭಯಮಿಶ್ರಿತ ಅಜ್ಞಾನಯುಕ್ತ ಮೂಢನಂಬಿಕೆ ಪ್ರಚಾರದಲ್ಲಿದೆ. ಅದೇನೆಂದರೆ ''ಬಾಗಿಲ ಮುಂದೆ ಅಥವ ಮನೆಯ ಮುಂದೆ ಬಾಳೆಗಿಡಗಳನ್ನು ನೆಡಬಾರದು. ಆಕಸ್ಮಾತ್ ನೆಟ್ಟರೂ ಅದು ಗೊನೆ ಬಿಡುವುದರೊಳಗೆ ಆ ಮನೆಯಲ್ಲಿ ಯಾರಾದರೂ ಸಾಯುತ್ತಾರೆ.'' ಆದ್ದರಿಂದ ಬಾಳೆಯನ್ನು ನೆಡಲು ಪ್ರಶಸ್ತವಾದ ಜಾಗ ಯಾವುದೆಂದರೆ ಮನೆಯ ಹಿಂದಿರುವ ಹಿತ್ತಿಲು.

ಧರ್ಮಪಿತರು ಈ ವಚನದಲ್ಲಿ ಈ ನಂಬಿಕೆಯನ್ನು ಖಂಡಿಸುತ್ತಾ ''ಬಾಗಿಲ ಮುಂದೆ ಬಾಳೆ ಬಿತ್ತುವುದಯ್ಯಾ'' ಎಂದು ಧೈರ್ಯ ತುಂಬುತ್ತಿದ್ದಾರೆ; ಅಷ್ಟೆ ಅಲ್ಲ, ಅದರ ಮಹಾನ್ ಸಂದೇಶವನ್ನು ಜಗತ್ತಿಗೆ ಸಾರುತ್ತಿದ್ದಾರೆ.

ಪ್ರಕೃತಿ ಬಾಳ ಪಥದರ್ಶಿ ! ನಶ್ವರ-ಕ್ಷಣಿಕವಾದ ಇಹದ ಬಾಳನ್ನು ಮೃತ್ಯು ಬರುವ ಮುನ್ನವೇ ಲೋಕಕಲ್ಯಾಣಕ್ಕಾಗಿ ಸವೆಸಿ ಪರಕ್ಕೂ ಸಲ್ಲುವಂತೆ ಸಾರ್ಥಕಪಡಿಸಿಕೊಳ್ಳಬೇಕು ಎಂಬುದರ ಸಂಕೇತ ಈ ಬಾಳೆಗಿಡ ಎನ್ನುತ್ತಾರೆ ಅಪ್ಪನವರು, ತಮ್ಮ ವಚನಗಳಲ್ಲಿ. ದುರಾಸೆಯಿಂದಲೋ, ಅಜ್ಞಾನದಿಂದಲೋ ಒಂದು ಗಿಡದಲ್ಲಿ ಒಂದಕ್ಕಿಂತ ಹೆಚ್ಚು ಗೊನೆಗಳು ಬೇಕೆಂದು ಬೇಡಿದರೆ ಅದು ಕೊಡುವುದಿಲ್ಲ. ಅದೇ ರೀತಿ ''ನಾನು ಇನ್ನು ಸಾಧಿಸುವುದು/ಸಾಧಿಸಬೇಕಾದ್ದು(?) ಬಹಳಷ್ಟಿದೆ. ನನ್ನ ಆಯುಷ್ಯ ಹೆಚ್ಚಲಿ'' ಎಂದು ಮೊರೆಯಿಟ್ಟರೆ ಆಯುಷ್ಯ ಹೆಚ್ಚುವುದಿಲ್ಲ ಮತ್ತೊಂದು ಗೊನೆಗಾಗಿ ನೀವು ಬೇರೊಂದು ಸಸಿಯನ್ನೇ ನೆಡಬೇಕು. ಹಾಗೆಂದು ಸಸಿಯನ್ನು ನೆಟ್ಟು ತಾನೇ ಬೆಳೆಯಲಿ ಎಂದು ಸುಮ್ಮನಿದ್ದರಾಯಿತೆ ? ಒಳ್ಳೆಯ ಸತ್ಫಲವನ್ನು ಬಯಸುವವನು ಹಾಗಿರಲು ಬರುವುದಿಲ್ಲ. ನೀವು ಬಾಳೆಯ ತೋಟವನ್ನು ನೋಡಿದ್ದೀರಾ ? ಅನುಭವಿಯೂ, ಜವಾಬ್ದಾರಿಯುಳ್ಳ ಕೃಷಿಕನೋರ್ವ ತಾನು ನೆಟ್ಟಿರುವ ಬಾಳೆ ಸಸಿಗಳನ್ನು ಉಳಿದ ಬೆಳೆಗಳಿಗಿಂತಲೂ ಹೆಚ್ಚಾಗಿ, ಬಹಳಷ್ಟು ಎಚ್ಚರಿಕೆಯಿಂದ ಕಾಯುತ್ತಾನೆ, ಪೋಷಿಸುತ್ತಾನೆ, ಸಕಾಲಕ್ಕೆ ನೀರು,.ಗೊಬ್ಬರ, ಔಷಧಿ ಕೊಟ್ಟು ರಕ್ಷಿಸುತ್ತಾನೆ. ಏಕೆಂದರೆ ಅವು ಇನ್ನು ಪುಟ್ಟಸಸಿಯಾಗಿರುವಾಗ ಜೋರಾಗಿ ಗಾಳಿ ಬೀಸಿ ಎಲೆಗಳಿಗೆ ಧಕ್ಕೆಯಾಗಬಾರದೆಂದು ಎತ್ತರದ ಬೇಲಿ ಹಾಕುತ್ತಾನೆ. ದನ, ಮಂಗಗಳು ಎಳೆ ಎಲೆಗಳನ್ನು ತಿನ್ನಬಾರದೆಂದು ಹಗಲು-ರಾತ್ರಿ ಕಾಯುತ್ತಾನೆ. ಸ್ವಲ್ಪ ಬೆಳೆದು ದೊಡ್ಡದಾದ ಮೇಲೆ ಗೊನೆ ಬಿಡುವ ಮೊದಲು ಅದರ ಬುಡದಲ್ಲಿ ಪದೇ ಪದೇ ಮೇಲೇಳುತ್ತಿರುವ ಬಾಳೆಮರಿಯ ಮೊಳಕೆಗಳನ್ನು ವಿಶೇಷ ಎಚ್ಚರಿಕೆಯಿಂದ ಗಮನಿಸುತ್ತಾ ಅದರ ನೆಲೆಯನ್ನೇ ನಾಶಮಾಡುತ್ತಾನೆ. ಏಕೆಂದರೆ ಪ್ರಾರಂಭದಲ್ಲೇ ಮೊಳಕೆಗಳನ್ನು ಬೆಳೆಯಗೊಟ್ಟರೆ ತಾಯಿಗಿಡದ ಸತ್ವವನ್ನೆಲ್ಲ ತಾವೇ ಹೀರಿಕೊಂಡು ಬೆಳೆದು ಮುಂದೆ ಒಳ್ಳೆಯ ಸತ್ವಯುತವಾದ

ಫಲ ಬರುವುದಿಲ್ಲ ಎಂಬ ಕಾರಣಕ್ಕಾಗಿ ಹೀಗೆ ಮಾಡುತ್ತಾನೆ. ಈ ಮೊಳಕೆಗಳನ್ನು ನಾಶಮಾಡದಿದ್ದರೆ, ಅವು ಸರಿಯಾಗಿ ಬೆಳೆಯುವುದಿಲ್ಲ ಜತೆಗೆ ತಾಯಿಗಿಡವನ್ನು ಬೆಳೆಯಗೊಡದೆ ಕೊನೆಯಲ್ಲಿ ಎಲ್ಲವೂ ದುರ್ಬಲವಾಗಿ ಕೃಶವಾದ ಫಲವನ್ನೇ ಕೊಡುವವು. ಆದ್ದರಿಂದ ಸದೃಢವಾದ ತಾಯಿಗಿಡ ಗೊನೆ ತಳ್ಳಿದ ನಂತರವೇ ರೈತ ಅದರ ಬುಡದಲ್ಲಿ ಮತ್ತೊಂದು ಗಿಡ ಬರಲು ಅವಕಾಶ ಮಾಡಿಕೊಡುತ್ತಾನೆ.

ಹಾಗೆಯೇ ಜವಾಬ್ದಾರಿಯಿಂದ ಗುರುವೊಬ್ಬ ಸತ್ಪಥದಲ್ಲಿ ಸಾಗುತ್ತಾ ಆಧ್ಯಾತ್ಮ ಸಾಧನೆ ಮಾಡಿ ಗುರಿ ಮುಟ್ಟಬೇಕೆಂಬ ಸಾಧಕನಿಗೆ, ದೀಕ್ಷೆ ಕೊಟ್ಟು ಸುಮ್ಮನಿರುವುದಿಲ್ಲ. ಶಿಷ್ಯನ ಚಲನವಲನ, ನಡೆ-ನುಡಿಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಾನೆ. ಶಿಲ್ಪಿಯು ಒಂದು ಸುಂದರವಾದ ರೂಪುರೇಷೆ ಹಾಕಿಕೊಂಡು ಮೂರ್ತಿಯನ್ನು ಕಟೆಯುವಂತೆ, ಶಿಷ್ಯನ ತಪ್ಪು ಒಪ್ಪುಗಳನ್ನು ಸಕಾಲಕ್ಕೆ ತಿದ್ದಿ ತೀಡಿ ಸರಿಪಡಿಸುತ್ತಾನೆ. ಶಿಷ್ಯನ ಮನದಲ್ಲಿ ಆಗಾಗ ಏಳಬಹುದಾದ ಅರಿಷಡ್ವರ್ಗ, ಸಪ್ತವ್ಯಸನ, ಅಷ್ಟಮದಗಳೆಂಬ ಬಾಳೆಸಸಿಗಳನ್ನು ಪ್ರಾರಂಭದಲ್ಲೇ ಚಿವುಟಿ ಹಾಕಿ, ಅವನ ನಿಜವಾದ ವ್ಯಕ್ತಿತ್ವ ಬೆಳೆಯಲು, ಬೆಳಗಲು, ವಿಕಸಿಸಲು ಸಹಕರಿಸುತ್ತಾನೆ. ಈ ವಿಷಯದಲ್ಲಿ ಗುರು ಅಲಕ್ಷ್ಯ ತೋರಿದರೆ ಸಾಧಕನಲ್ಲಿರುವ ಸಂಕಲ್ಪ, ಆಧ್ಯಾತ್ಮದ ಹಂಬಲ ಎಂಬ ತಾಯಿಗಿಡದ ಸುತ್ತ ದುರ್ಗುಣಗಳು, ದುಶ್ಚಟಗಳು ಹುಟ್ಟಿ ಮೂಲ ಸತ್ವವನ್ನೇ ನುಂಗಿ ಬೆಳೆದು ವ್ಯಕ್ತಿತ್ವವನ್ನು ಕುಬ್ಜಗೊಳಿಸುತ್ತವೆ.

ಗುರು-ಶಿಷ್ಯ(ಅನುಯಾಯಿಗಳಿಂದ ಕೂಡಿದ ಸಮಾಜ)ರ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಂಬಂಧವನ್ನು ಪ್ರತಿಬಿಂಬಿಸುವುದರೊಂದಿಗೆ, ಗುರುವಿನ ಸತ್ಸಂಕಲ್ಪವನ್ನು ಅರಿಯದೆ ಬಾಳಪಥದಲ್ಲಿ ಯಾವುದೇ ರೀತಿಯಲ್ಲೂ ಸಹಕರಿಸದ ಶಿಷ್ಯರಿಗೂ ಈ ವಚನದಲ್ಲಿ ಎಚ್ಚರಿಕೆ ಮತ್ತು ಹಿತೋಪದೇಶವಿದೆ.

ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇ ಬೇಕು.
ದಕ್ಕ ನುಂಗಿದಂತೆ ಬೆರೆತುಕೊಂಡಿರಬೇಡ
ಬೀಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದಡೆ
ಬೇಡಿದ ಪದವಿಯನೀವ ಲಿಂಗದೇವ. ಬ.ವ.ದೀ.191

ಮೊದಲು ಸಾಮಾಜಿಕ ಸಂಬಂಧವನ್ನು ನೋಡೋಣ. ಇಲ್ಲಿ ''ಜಂಗಮ'' ಎಂದರೆ ಸಮಾಜ ಎಂಬರ್ಥದಲ್ಲಿ ಬಳಸಿಕೊಂಡು ಪೂಜ್ಯ ಶ್ರೀ ಬಸವಾತ್ಮಜೆಯವರ ಮಾತಿನಲ್ಲಿ ಹೇಳುವುದಾದರೆ ''ಬಸವ ತತ್ತ್ವದ ಪ್ರಕಾರ ಲಿಂಗಕೃಪೆ ಸಾಧಿಸಬೇಕೆನ್ನುವವನು ಜಂಗಮ(ಸಮೂಹ) ಸೇವೆ ಮಾಡಲೇಬೇಕು. ಜಗದ ಸೇವೆ ಮಾಡಲಿಚ್ಛಿಸದೆ ಕೇವಲ ದೇವರ ಪೂಜೆಯಲ್ಲೇ ಮೈಮರೆಯಬೇಕೆನ್ನುವವನು ನಿಜವಾದ ಆಧ್ಯಾತ್ಮವನ್ನು ಸಾಧಿಸಲಾರ ! ಏಕೆಂದರೆ ಲಿಂಗ ಪೂಜೆ ಬಹು ಸುಲಭ; ಜಂಗಮ ಸೇವೆ ಬಹು ಕಠಿಣ. ದೇವನಿಗೆ ತುಸು ಕೊರತೆಯಾದರೂ, ಕೊಟ್ಟಿದ್ದರಲ್ಲಿ ತೃಪ್ತಿಪಟ್ಟು, ಕೊಡದ್ದರ ಬಗ್ಗೆ ಚಿಂತಿಸನು. ಆದರೆ ಸಮಾಜ ಸೇವೆಯ ಪರಿ ಹಾಗಲ್ಲ. ತನ್ನ ತನು-ಮನ-ಧನ ಎಲ್ಲವನ್ನೂ ಅರ್ಪಿಸಿ ದುಡಿಯುವುದರ ಜೊತೆಗೆ

ಮತ್ತು ಜನರಿಂದ ಅಪವಾದ ಹೊರಬೇಕು. ಆದೇ ರೀತಿ ಮನೆಯ ಹಿತ್ತಲಿನಲ್ಲಿರುವ, ಭೂಮಿಯ ತಗ್ಗಿನಲ್ಲಿರುವ(ಬಾಳೆ) ಗಿಡಗಳು ಯಾರ ಕಣ್ಣಿಗೂ ಬೀಳದು ಮತ್ತು ಅವಕ್ಕೆ ಗಾಳಿಯ ಏಟು ಕಡಿಮೆ. ಆದರೆ ಬಾಗಿಲ ಮುಂದಿರುವ, ಗುಡ್ಡದ ಮೇಲಿರುವ ಗಿಡಗಳು ಎಲ್ಲರ ಕಣ್ಣಿಗೂ ಬೀಳುವುದಲ್ಲದೆ, ಗಾಳಿಯ ಹೊಡೆತವನ್ನು ಹೆಚ್ಚು ತಿನ್ನಬೇಕಾಗುವುದು. ಹಾಗೇ ಧರ್ಮಪ್ರಚಾರಕರೂ, ಸಮಾಜ ಸುಧಾರಕರೂ ನಿಸ್ಪೃಹ ಸೇವೆಯೊಡನೆ ನಿಂದೆಗಳನ್ನು ಸ್ವೀಕರಿಸಲು ಸಿದ್ಧರಿರಬೇಕು. ಆದ್ದರಿಂದ ಇಂಥ ಅಸಾಮಾನ್ಯವಾದ ಆತ್ಮಬಲ, ಧೈರ್ಯ, ಸದೃಢ ಮನಸ್ಸು ಇದ್ದವರು ಮಾತ್ರ ನಿಸ್ವಾರ್ಥ ಸೇವೆ, ತ್ಯಾಗದ ಸಂಕೇತವಾದ ಬಾಳೆಯನ್ನು ಬಾಗಿಲ ಮುಂದೆ ಬಿತ್ತಲಿ.'' ಎನ್ನುತ್ತಾರೆ.

ಇನ್ನು ''ಜಂಗಮ'' ಅಂದರೆ ಗುರು ಎಂಬರ್ಥಕ್ಕೆ ಅನ್ವಯಿಸಿ ಆಧ್ಯಾತ್ಮಿಕ ಸಂಬಂಧವನ್ನು ವಿವರಿಸುವುದಾದರೆ: ಸದ್ಗುರುವಿನ ಮಾರ್ಗದರ್ಶನದಲ್ಲಿ ಗುರಿ ಮುಟ್ಟಬೇಕೆಂಬ ಹಂಬಲವುಳ್ಳ ಸಾಧಕನಿಗೆ ಗುರುವಿನಲ್ಲಿ ಅಚಲವಾದ ನಂಬಿಕೆ, ನಮ್ರತೆಯಿಂದ ಕೂಡಿದ ಭಯಭಕ್ತಿ, ಸಾಧನೆಯಲ್ಲಿ ಸತತವಾದ ಶ್ರದ್ಧೆ-ಇವು ಇರಬೇಕಾದುದು ಅತಿ ಮುಖ್ಯ. ''ಹಡಿಕೆಗೆ ಮೆಚ್ಚಿದ ಸೊಣಗ ಅಮೃತದ ರುಚಿಯ ಬಲ್ಲುದೆ ?'' ಎಂಬಂತೆ ಸುಲಭವಾಗಿ ಜೀರ್ಣವಾಗದ ಗಟ್ಟಿಯಾದ ದಕ್ಕ (ಮೂಳೆ)ವನ್ನು, ಅದರ ರುಚಿಗೆ ಮನಸೋತು ತಿನ್ನಲು ಕಷ್ಟವಾಗುತ್ತಿದ್ದರೂ ಬಿಡದೆ, ಕಡಿದೂ, ಕಡಿದೂ, ತಿಂದೂ ತಿಂದೂ ನಾಯಿ ಕೊನೆಗೆ ಅಜೀರ್ಣವಾಗಿ ಮಂಕುಬಡಿದಂತೆ ಸೆಟೆದುಕೊಂಡು ಮಲಗಿಬಿಡುತ್ತದೆ. ಆಗ ಅದರ ಒಡೆಯನೇ ಎದುರಿಗೆ ಬಂದರೂ, ಇದು ನಿಷ್ಠೆಗೆ, ನಮ್ರತೆಗೆ ಹೆಸರಾದ ಪ್ರಾಣಿಯಾಗಿದ್ದರೂ, ಯಾವುದೇ ಪ್ರತಿಕ್ರಿಯೆ ತೋರಿಸದೆ ಉದ್ಧಟತನ ಪ್ರದರ್ಶಿಸುತ್ತದೆ. ಹಾಗೆಯೇ ಶಿಷ್ಯನು ಗುರುಗಳ ಮಾತಿಗೆ ಬೆಲೆ ಕೊಡದೆ, ತನ್ನ ದಾರಿಗೆ ವಿರುದ್ಧವಾಗಿ, ಸ್ವಾರ್ಥಕ್ಕೆ ಬಲಿಯಾಗಿ ಪದೇ ಪದೇ ಎಡಹುವ ಶಿಷ್ಯರು ಎಂದಿಗೂ ಗುರಿ ಮುಟ್ಟುವುದಿಲ್ಲ. ಸಾಧನೆಯ ಹಾದಿಯಲ್ಲಿ ಗುರುವಿನ ಮಹತ್ವವನ್ನು ಅರಿತುಕೊಂಡು, ಕೊನೆವರೆಗೂ, ಕೊನೆವಾಳೆಯಂತೆ ತಗ್ಗಿ ಬಗ್ಗಿ ನಡೆಯುತ್ತಾ ಜ್ಞಾನಾರ್ಜನೆ-ಸೇವೆ ಮಾಡಿದಾಗ ಮಾತ್ರ ಆ ಶಿಷ್ಯ ಹಂತ ಹಂತವಾಗಿ ಮೇಲೇರಬಲ್ಲ. ಹೀಗೆ ತಯಾರಾದ ಶಿಷ್ಯನ ವ್ಯಕ್ತಿತ್ವ ಹೇಗಿರುತ್ತದೆ ಎಂದರೆ ಅದಕ್ಕೆ ಈ ವಚನ ಉತ್ತರ ಹೇಳುತ್ತಿದೆ.

ಮಾಡುವ ಭಕ್ತನ ಕಾಯ ಬಾಳೆಕಂಬದಂತಿರಬೇಕು.
ಮೆಲ್ಲ ಮೆಲ್ಲನೆ ಹೊರೆಯೆತ್ತಿ ನೋಡಿದಡೆ ಒಳಗೆ
ಕೆಚ್ಚಿಲ್ಲದಿರಬೇಕು
ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು ! ಬ.ವ.ದೀ.520

ಇಲ್ಲಿ ಧರ್ಮಪಿತರು ಹೇಳುತ್ತಿದ್ದಾರೆ ''ಜೀವನದಲ್ಲಿ ಮಹತ್ವಪೂರ್ಣವಾದ ಸಾಧನೆ ಮಾಡಬೇಕು'' ಎನ್ನುವ ಭಕ್ತ ಅಥವ ಸಾಧಕನ ಕಾಯ ಬಾಳೆಕಂಬದಂತಿರಬೇಕು. ಚೆನ್ನಾಗಿ ಬಲಿತ ಬಾಳೆ ಕಂಬವನ್ನು ಕತ್ತರಿಸಿ ಪದರ ಪದರಗಳನ್ನು ಬಿಡಿಸಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಳಭಾಗವೆಲ್ಲ ಪೊಳ್ಳಾಗಿರುವುದು ಕಂಡು ಬರುತ್ತದೆ. ಅದರಂತೆ ಸತ್ಯದ ಹಂಬಲವಿರುವ ಸಾಧಕನು ಶರೀರದಲ್ಲಿರುವ ಆಣವ ಮಲ, ಮಾಯಾ ಮಲ, ಕಾರ್ಮಿಕ ಮಲಗಳನ್ನು

ಕಳೆದುಕೊಂಡಿರಬೇಕು. ಮನಸ್ಸಿನ ಪದರಗಳನ್ನು ಬಿಡಿಸಿ ನೋಡಿದಾಗ ಅಲ್ಲಿ ''ನಾನು'' ಎಂಬ ಅಹಂನ್ನು ಕಳೆದುಕೊಂಡು ಪೊಳ್ಳಾಗಿರಬೇಕು. ಹೀಗೆ ಸದ್ಗುರುವಿನ ಆಶ್ರಯದಲ್ಲಿ ಬೆಳೆದ ಸಾಧಕನು ಪರಿಪಕ್ವ ವ್ಯಕ್ತಿತ್ವ ಪಡೆದು, ಒಬ್ಬ ಆದರ್ಶ ತ್ಯಾಗಿಯಾಗಿ ಸಮಾಜದ ಮುಂದೆ ನಿಲ್ಲುತ್ತಾನೆ. ಇಂಥ ಒಬ್ಬ ತ್ಯಾಗಿ ಒಂದು ಬಾಳೆಗಿಡ ನೂರಾರು ಹಣ್ಣಿರುವ ಸತ್ವಭರಿತ ಗೊನೆಯನ್ನು ಕೊಡುವಂತೆ ಒಂದು ಸದೃಢವಾದ ಜನಾಂಗವನ್ನು ನಿರ್ಮಾಣ ಮಾಡಬಲ್ಲ; ಅಷ್ಟೇ ಅಲ್ಲ, ತನ್ನಂಥ ನೂರಾರು ತ್ಯಾಗಿಗಳನ್ನು ಸೃಜಿಸಬಲ್ಲ ! ಏಕೆ ಸೋಜಿಗವೇ ?!

ಹನ್ನೆರಡನೆಯ ಶತಮಾನದಲ್ಲಿ, ಅನುಭವ ಮಂಟಪ ಎಂಬ ಬಾಳೆತೋಟದಲ್ಲಿ, ಬಸವಣ್ಣ ಎಂಬ ಕೃಷಿಕರು, ಏಳುನೂರ ಎಪ್ಪತ್ತು ಅಮರಗಣಂಗಳು ಎಂಬ ಜೀವನ್ಮುಕ್ತರಾದ ಬಾಳೆಗೊನೆಗಳನ್ನು ಜಗತ್ತಿಗೆ ಕೊಟ್ಟಿಲ್ಲವೆ ?!

ಇನ್ನು ಕ್ಷಣಕ್ಷಣಕ್ಕೂ, ದಿನದಿನಕ್ಕೂ ಹೋರಾಡುತ್ತಲೇ ಬದುಕಬೇಕಾದ ಜೀವನದ ರಣರಂಗದಲ್ಲಿ, ಸತ್ಯಕ್ಕೆ ಬೆನ್ನು ತೋರಿಸಿ ಓಡಿಹೋಗುವ ಪಲಾಯನವಾದಿಗಳನ್ನು, ಜೀವಗಳ್ಳರನ್ನು, ಹೇಡಿಗಳನ್ನು ಈ ವಚನ ಹೇಗೆ ಇರಿಯುತ್ತಿದೆ ನೋಡಿರಿ !

ಚೇಳಿಂಗೆ ಬಸುರಾಯಿತ್ತೆ ಕಡೆ
ಬಾಳೆಗೆ ಫಲವಾಯಿತ್ತೆ ಕಡೆ ನೋಡಾ !
ರಣ ರಂಗದಲ್ಲಿ ಕಾದುವ ಓಲೆಕಾರನಿಗೆ ಓಸರಿಸಿತ್ತೆ ಕಡೆ
ಮಾಡುವ ಭಕ್ತರಿಗೆ ಮನಹೀನವಾದಡೆ
ಅದೇ ಕಡೆ ಲಿಂಗದೇವಾ ! ಬ.ವ.ದೀ.663

ಚೇಳು ಒಂದು ಕ್ಷುದ್ರ ಜಂತು. ಅದರಿಂದ ಲೋಕಕ್ಕೆ ಹೆಚ್ಚಿನ ಉಪಕಾರವಾಗಲಿ, ಹಾನಿಯಾಗಲಿ ಇಲ್ಲ. ಆದರೂ ಚಿಂತೆಯಿಲ್ಲ. ಶತ್ರುಗಳಿಂದ ತನಗೆ ಅಪಾಯವಿದೆ ಎಂಬ ಅರಿವಾದಾಗ ಒಂಟಿಯಾಗಿದ್ದರೂ ಹೆದರದೆ ತನ್ನ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯ ಅದಕ್ಕಿದೆ. ತನ್ನ ವಿಷಪೂರಿತವಾದ ಕೊಂಡಿಯಿಂದ ಶತ್ರು ಎಷ್ಟೇ ಪ್ರಬಲನಿರಲಿ ಕುಟುಕಿ, ಹೆದರಿಸುತ್ತಾ ಬದುಕಲು ಹೋರಾಡುತ್ತದೆ. ಇಂಥವರ ಸಂಖ್ಯೆ ಒಬ್ಬರಿದ್ದರೂ ಸಾಕು ಎನ್ನುತ್ತಾರೆ ಅಪ್ಪನವರು. ಈ ಆತ್ಮಬಲದಿಂದಲೇ ಅದು ತನ್ನ ಜೀವವನ್ನು ತೆತ್ತಾದರೂ, ಮತ್ತೊಂದು ಜೀವಕ್ಕೆ ಜನ್ಮಕೊಟ್ಟು ಕಣ್ಮರೆಯಾಗುತ್ತದೆ. ಪಾಪ, ಆ ಮರಿ ತಬ್ಬಲಿಯಾದರು ಹೆದರದೆ ಬದುಕುವ, ಅದರ ಛಲಕ್ಕೆ ನಾವು ತಲೆಬಾಗಲೇಬೇಕು !! ಅದರಿಂದಲೇ ಚೇಳಿಂಗೆ ಬಸುರಾಯಿತ್ತೆ ಕಡೆ ಎಂಬ ಮಾತು ರೂಢಿಗೆ ಬಂದಿರುವುದು. ಅದೇ ಪತಂಗಗಳನ್ನು ನೋಡಿರಿ. ಒಮ್ಮೆಗೆ ನೂರಾರು ಸಂಖ್ಯೆಯಲ್ಲಿ ಮೊಟ್ಟೆಯಿಟ್ಟು ಮರಿಗಳನ್ನು ಹಡೆಯುತ್ತದೆ. ಆದರೆ ಏನು ಪ್ರಯೋಜನ ? ದೀಪದ ಮುಂದೆ ಅಷ್ಟು ಮರಿಗಳು ತರಗೆಲೆಗಳಂತೆ ಉದುರಿ ಬಿಡುತ್ತವೆ !! ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರದ ಇಂಥವರು ಸಾವಿರ ಸಂಖ್ಯೆಯಲ್ಲಿ ಇದ್ದರೆಷ್ಟು ?! ಬಿಟ್ಟರೆಷ್ಟು ?!

ಅದೇ ರೀತಿ ಬಾಳೆಯೂ ಸಹ. ಚೇಳಾಗಲಿ, ಬಾಳೆಯಾಗಲಿ, ನಿಸ್ವಾರ್ಥತೆ, ತ್ಯಾಗದ, ಆತ್ಮರಕ್ಷಣೆಯ ಪಾಠವನ್ನು ಕಲಿಯಲು, ಯಾವ ಶಾಲೆ ಕಾಲೇಜುಗಳಿಗೆ ಹೋಗಿವೆ ? ಯಾವ

ಸಾಹಿತ್ಯ ಓದಿವೆ ? ಯಾವ ಗುರುವಿನ ಬಳಿ ಜ್ಞಾನಾರ್ಜನೆ ಮಾಡಿವೆ ? ಆದರೆ ಗುರು, ಸಾಹಿತ್ಯ, ಜ್ಞಾನ, ಬುದ್ಧಿಯಿರುವ ಮಾನವನು ಚೇಳು, ಬಾಳೆಗಿಂತಲೂ ಕಡೆಯಾಗಿ ಬದುಕುತ್ತಿರುವುದು ನಾಚಿಕೆಗೇಡಿನ ಸಂಗತಿಯಲ್ಲವೆ ?

ಚೇಳು ಆತ್ಮರಕ್ಷಣೆಗೆ, ತ್ಯಾಗಕ್ಕೆ ಹೆಸರಾದರೆ, ಬಾಳೆ ಇದಕ್ಕೂ ಒಂದು ತೂಕ ಹೆಚ್ಚೆಂದೇ ಹೇಳಬೇಕು. ನಿಸ್ವಾರ್ಥ, ತ್ಯಾಗ, ನಮ್ರತೆ, ಸಾತ್ವಿಕತೆಯಿಂದ ಕೂಡಿ ಜಗತ್ತಿಗೆ ಮಾದರಿಯಾಗಿದೆ. ಅದು ಹೇಗೆ ? ನೋಡಿ ತನ್ನ ಪಾಲಿಗೆ ಮಾನವೀಯವಾಗಿ ಸಿಗಬೇಕಾಗಿದ್ದ ಕಾಳಜಿ, ಮಾನ್ಯತೆ, ನೀರು, ಗೊಬ್ಬರ ಸಿಗದಿದ್ದರೂ ಅದೇನು ನೊಂದುಕೊಳ್ಳುವುದಿಲ್ಲ. ಹಾಗೆಂದೂ ಬಂಜೆಯಾಗಿ ಜಗತ್ತಿನಿಂದ ನಿರ್ಗಮಿಸುವುದಿಲ್ಲ. ಹೋಗುವಾಗ ತಾನು ಕೃಶವಾಗಿದ್ದರೂ, ಲೆಕ್ಕಿಸದೆ ಶಕ್ತ್ಯಾನುಸಾರ 10-20 ಹಣ್ಣುಗಳಿರುವ ಪುಟ್ಟ ಗೊನೆಯನ್ನಾದರೂ ಕೊಟ್ಟು ಹೋಗುತ್ತದೆ. ತನ್ಮೂಲಕ ಲೋಕದ ಋಣವನ್ನು ತೀರಿಸುತ್ತದೆ. ಆದರೆ ಹುಟ್ಟಿ ಬಂದ ಮೇಲೆ ತಾಯಿ ತಂದೆ, ಭೂಮಿ; ಗುರು, ಧರ್ಮ, ಸಮಾಜದ ಋಣ ತೀರಿಸಬೇಕು ಎಂಬ ಪ್ರಜ್ಞೆ ಎಷ್ಟು ಜನರಿಗಿದೆ ? ನಮ್ಮ ಸುತ್ತ ಮುತ್ತ ಸಕಲ ಸೌಲಭ್ಯಗಳನ್ನು ಅನುಭವಿಸುತ್ತಿದ್ದರೂ, ಜಡವಾಗಿ, ನಿಷ್ಪ್ರಯೋಜಕರಾಗಿ, ಪರಾವಲಂಬಿಗಳಾಗಿ, ಸ್ವಾರ್ಥಿಗಳಾಗಿ ಎಷ್ಟು ಜನ ತಮ್ಮ ಬದುಕನ್ನು ಕಳೆಯುತ್ತಿಲ್ಲ ? ಇಂಥವರು ಬಾಳೆ ಮತ್ತು ಚೇಳಿನ ಜೀವನವನ್ನು ನೋಡಿಯಾದರೂ, ತ್ಯಾಗಿಗಳಾಗಿ, ವೀರರಾಗಿ, ಲೋಕಕಲ್ಯಾಣಕ್ಕಾಗಿ ಬದುಕುವುದನ್ನು ಕಲಿಯಬೇಕು. ಧರ್ಮಪಿತರು ಈ ತತ್ತ್ವವನ್ನು ಮನಗಾಣಿಸಲಿಕ್ಕಾಗಿಯೇ ನಮ್ಮ ಮುಂದೆ ಒಂದು ದೃಷ್ಟಾಂತವನ್ನಿಟ್ಟಿದ್ದಾರೆ. ''ರಣರಂಗದಲ್ಲಿ ಕಾದುವ ಓಲೆಗಾರನಿಗೆ ಓಸರಿಸಿತ್ತೆ ಕಡೆ.'' ಅಂದರೆ ಯುದ್ಧ ಸಂಭವಿಸಿದೆ ಎಂದು ಭಾವಿಸಿಕೊಳ್ಳಿ. ಭಯಂಕರ ಹೋರಾಟ ಪ್ರಾರಂಭವಾಗಿದೆ. ಸೋಲು-ಗೆಲುವು, ಹಿನ್ನಡೆ ಮುನ್ನಡೆಗಳನ್ನು ಕುರಿತಾದ ವಸ್ತುನಿಷ್ಠ ಪ್ರಾಮಾಣಿಕವಾದ ವರದಿಯನ್ನು ದಿನದಿನವೂ ಸಲ್ಲಿಸಲಿ ಎಂದು ಓರ್ವ ಓಲೆಕಾರನನ್ನು ನೇಮಿಸಲಾಗಿದೆ. ಇವನು ಸಲ್ಲಿಸಲಿರುವ ವರದಿಯ ಆಧಾರದ ಮೇಲೆ ಮುಂದಿನ ಯೋಜನೆಗಳನ್ನು ರೂಪಿಸಬೇಕು. ಆದರೆ, ಇಲ್ಲಿ ಇವನಿಗೆ ''ಕತ್ತಿ ಹಿಡಿದು ನೇರವಾಗಿ ಕಾದಾಡಲು ತಿಳಿಸಿಲ್ಲ.'' ಎಂಬುದು ಗಮನಾರ್ಹ. ಇಂಥ ಗುರುತರವಾದ ಜವಾಬ್ದಾರಿ ಹೊತ್ತವನು ಯುದ್ಧವನ್ನು ಗಮನಿಸುತ್ತಾ, ಪರಿಶೀಲಿಸುತ್ತ ವರದಿ ತಯಾರಿಸಬೇಕು. ಆಕಸ್ಮಾತ್ ಇಂಥ ವ್ಯಕ್ತಿ ಪುಕ್ಕಲು ಸ್ವಭಾವದವನಾಗಿದ್ದು ಯುದ್ಧವನ್ನು ಕಂಡು ಹಿಮ್ಮೆಟ್ಟಿದರೆ, ಅವನಿಂದ ಇನ್ನು ಮುಂದೆ ಯಾವ ಘನ ಕಾರ್ಯ ಸಾಧನೆಯಾದೀತು ?! ಅದೇ ರೀತಿ ಸತ್ಯವನ್ನು ನಂಬಲು, ಪ್ರೀತಿಸಲು, ಆರಾಧಿಸಲು ಹೆದರುವ ಭಕ್ತನಿಂದ ಮುಂದೆ ಏನನ್ನು ನಿರೀಕ್ಷಿಸಬಹುದು ? ಇಂಥವರು ಸತ್ಯಪಥದಲ್ಲಿ ಬಹುಬೇಗ ನಂಬಿಕೆ, ವಿಶ್ವಾಸ ಕಳೆದುಕೊಂಡು ಮೂಲೆಗುಂಪಾಗುತ್ತಾರೆ.

ಮಾನವ ಜನ್ಮ ಬಹು ಅಮೂಲ್ಯವಾದುದು. ಇದನ್ನು ವ್ಯರ್ಥಗೊಳಿಸದೆ, ಸನ್ಮಾರ್ಗದಲ್ಲಿ ಸಾಗುತ್ತಾ ಜೀವನವನ್ನು ಪೂಜ್ಯವಾಗಿ ಮಾಡಿಕೊಳ್ಳಬೇಕು. ನಿಜ, ಆದರೆ ಕೆಲವು ಜನ ಪುರಾಣ ವೈರಾಗ್ಯಕ್ಕೆ ಮನಸೋತು, ಕ್ಷಣಿಕ ಭಾವಾವೇಶಕ್ಕೆ ಒಳಗಾಗಿ, ನಂಬಿಸಿ ನಂತರ ಲೋಕದ ಪ್ರಲೋಭನೆಗಳಿಗೆ ಸಿಕ್ಕಿ ದಾರಿತಪ್ಪಿದವರನ್ನು ಈ ವಚನ ಪ್ರಶ್ನಿಸುತ್ತಿದೆ; ಎಚ್ಚರಿಸುತ್ತಿದೆ.

ಒಡೆದ ಹಂಚು ಮರಳಿ ಮಡಕೆಯಾಗಬಲ್ಲುದೆ ?
ಕೆಟ್ಟ ವ್ರತಗೇಡಿ ಭಕ್ತನಾಗಬಲ್ಲನೆ ?
ಬಾಳೆಗೆ ಫಲವೇ ಕಡೆ; ಚೇಳಿಂಗೆ ಗರ್ಭವೆ ಕಡೆ
ಕೂಳು ಮಾರೆಡೆಯುಂಟು
ಸೀರೆ ಮಾರೆಡೆಯುಂಟು
ಭಕ್ತಿ ಮಾರೆಡೆಯುಂಟೆ ? ಲಿಂಗದೇವಾ ಬ.ವ.ದೀ. 1106

ಒಂದು ಸಾರಿ ಚೆನ್ನಾಗಿ ಬೆಂದು ಪಕ್ವವಾದ ಮಡಕೆ, ಅಜಾಗರೂಕತೆಯಿಂದ ಒಡೆದು ಚೂರಾದರೆ ಮತ್ತೆ ಅವುಗಳನ್ನು ಮೊದಲಿನಂತೆ ಕೂಡಿಸಿ ಮಡಕೆ ಮಾಡಿ ಉಪಯೋಗಿಸಲು ಬರುವುದೇ ? ಇಲ್ಲ. ಅದೇ ರೀತಿ ಹಿಡಿದ ನೇಮವನ್ನು ಸಾಧಿಸುವ ಸಂಕಲ್ಪವಿಲ್ಲದವನು ಭಕ್ತನಾಗಬಲ್ಲನೆ ? ಎಂದಿಗೂ ಸಾಧ್ಯವಿಲ್ಲ. ಬದುಕುವುದಕ್ಕಾಗಿ ಉಣ್ಣುವುದು, ಉಡುವುದೇ ಮುಖ್ಯವೆಂದು ಭಾವಿಸಬೇಡಿ. ಏಕೆಂದರೆ ಪ್ರಾಣ ಉಳಿಸಲು ಬೇಕಾದ ಕೂಳು(ಮಾರಾಟಕ್ಕೆ ಸಿಗುವ ಅನ್ನ) ನ್ನು ಹಣ ಕೊಟ್ಟು ಪಡೆಯಲು ಬರುತ್ತದೆ. ಇನ್ನು ಮಾನ ಉಳಿಸಿಕೊಳ್ಳಲು ಬೇಕಾಗುವ ವಸ್ತ್ರವನ್ನು ದುಡ್ಡು ಕೊಟ್ಟರೆ ಅಂಗಡಿಯಲ್ಲಿ ಸಿಗುತ್ತದೆ. ಆದರೆ ಹೃದಯದಲ್ಲಿ ಹುಟ್ಟಿ ಬೆಳೆಯಬೇಕಾದ ''ಭಕ್ತಿ'' ಎಂಬ ಗುಣರತ್ನವನ್ನು ಮಾರುವವರು, ಕೊಳ್ಳುವವರು ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೆ ? ಅದಂತೂ ಸಾಧ್ಯವೇ ಇಲ್ಲ. ಏಕೆಂದರೆ ಬದುಕಿಗೆ ಶಕ್ತಿಯನ್ನು ಒದಗಿಸುವ ಇಂಥ ಭಕ್ತಿಯನ್ನು, ಅದರಲ್ಲೂ ವಚನ ಸಾಹಿತ್ಯ ಬೋಧಿಸುವ ಸದ್ಭಕ್ತಿಯನ್ನು ಗುರುವಿನ ಉಪದೇಶ, ಶರಣರ ಸತ್ಸಂಗ ಮತ್ತು ಸಾಹಿತ್ಯ ರಸ ಸ್ವಾದನೆಯಿಂದ ಮಾತ್ರ ಬಿತ್ತಿ ಬೆಳೆಸಲು ಸಾಧ್ಯ. ಅಂದಾಗ ನಾವು ಎಂದಿಗೂ ಇವುಗಳಿಂದ ದೂರ ಸರಿಯಬಾರದು.

ಇನ್ನು ಬಾಳೆಗಿಡವು ಗೊನೆ ತಳ್ಳಿದಾಗ, ಅದು ಮತ್ತೊಬ್ಬರ ಪಾಲಾಗುವುದನ್ನು ತಪ್ಪಿಸಲು ಇನ್ನು ಮುಂದೆ ಹೆಚ್ಚು ಗಮನವಿಟ್ಟು ಕಾಯಬೇಕಾಗುತ್ತದೆ. ಏಕೆಂದರೆ ಇದು ಇತರ ಹಣ್ಣುಗಳಂತೆ ಬಿಡಿ ಬಿಡಿಯಾಗಿ ಕದಿಯುವಂಥದ್ದಲ್ಲ. ಒಂದೇ ಪ್ರಯತ್ನಕ್ಕೆ ನೂರಾರು ಹಣ್ಣು ಸಿಗುತ್ತದೆ. ಇದರಿಂದ ಕಳ್ಳನಿಗೆ ದ್ವಿಗುಣ ಲಾಭ. ''ನಿಮಿಷದ ಉದಾಸೀನ ಕೆಡಿಸಿತ್ತು'' ಎಂಬಂತೆ ಸ್ವಲ್ಪ ಅಜಾಗರೂಕತೆ ವಹಿಸಿದರೂ ಸಾಕು, ವರ್ಷದಿಂದ ಪಟ್ಟ ಶ್ರಮವೆಲ್ಲ ವ್ಯರ್ಥವಾಗುತ್ತದೆ. ಅದರಂತೆ ಧರ್ಮಗುರುಗಳು, ಜನನಾಯಕರು ತಮ್ಮ ಜನಾಂಗವನ್ನು ಸರಿಯಾಗಿ ಎಚ್ಚರಿಕೆಯಿಂದ ಕಾಯದಿದ್ದರೆ, ರಕ್ಷಿಸದಿದ್ದರೆ ಅನ್ಯಧರ್ಮಗಳ ಪ್ರಭಾವಕ್ಕೆ, ಆಮಿಷಕ್ಕೆ ಒಳಗಾಗಿ ಗುಂಪು ಗುಂಪಾಗಿ ಮತಾಂತರ ಹೊಂದುತ್ತಾರೆ. ಇತ್ತೀಚೆಗೆ ಈ ರೀತಿ ಆಗುತ್ತಿರುವುದು ಹಿಂದು ಸಮಾಜದ ದೌರ್ಬಲ್ಯವಲ್ಲವೆ ? ಅದಕ್ಕಾಗಿ ಹಿಂದಿಗಿಂತಲೂ ಗಿಡ ಗೊನೆ ತಳ್ಳಿದ ಮೇಲೆ ಹೆಚ್ಚು ನಿಗಾ ಇಡಬೇಕು!!

ಧರ್ಮ ಬಂಧುಗಳೇ, ಇದುವರೆಗೂ ತಾವುಗಳೆಲ್ಲ ಬಾಳೆಗಿಡದ ಜೀವನ ಚರಿತ್ರೆಯನ್ನು ಕೇಳಿದಿರಲ್ಲವೆ ? ಆದರ್ಶ ಶಿಕ್ಷಕನೊಬ್ಬನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಬಾಳೆಯನ್ನು ಇನ್ನು ಮುಂದೆ ತಾವು ಎಲ್ಲಿ ಬಿತ್ತುತ್ತೀರಿ ? ಮನೆಯ ಹಿಂದೆಯೋ ಮುಂದೆಯೋ

? ಶಾಲೆಯಲ್ಲಿ ಪಾಠ ಹೇಳುವ ಶಿಕ್ಷಕನು ಮಕ್ಕಳ ಮುಂದೆ ನಿಂತು ಪಾಠ ಮಾಡುತ್ತಾನೋ ಅಥವ ಹಿಂದಿನಿಂದಲೋ ? ಯೋಚಿಸಿ ನಿರ್ಧರಿಸಿರಿ. ಧರ್ಮಪಿತರ ಆದೇಶದಂತೆ ನಡೆದುಕೊಳ್ಳಿರಿ ಆದರೂ ಹಾಗೇಕೆ ಚಿಂತಾಕ್ರಾಂತರಾಗಿದ್ದೀರಿ ?! ಓಹೋ ! ಮನೆಯಲ್ಲಿ ಜಾಗ ಇಲ್ಲವೆ ? ಚಿಂತಿಸಬೇಡಿ. ಏಕೆಂದರೆ ಇಲ್ಲಿ ನೋಡಿ, ಪ್ರವಚನದ ವೇದಿಕೆಯಿಂದ ವಾಙ್ಮಯ ತಪಸ್ವಿ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ನಿಮಗೆ ಈ ರೀತಿ ಕರೆ ಕೊಡುತ್ತಿದ್ದಾರೆ. ''ಪ್ರತಿಯೊಬ್ಬರೂ ಮೂರು ಮಕ್ಕಳನ್ನು ಹಡೆಯಿರಿ. ಅವುಗಳಲ್ಲಿ ಒಂದನ್ನು ನೀವಿಟ್ಟುಕೊಳ್ಳಿರಿ. ಒಂದನ್ನು ದೇಶ ರಕ್ಷಣೆಗೆ ಮತ್ತೊಂದನ್ನು ಧರ್ಮಪ್ರಚಾರಕ್ಕೆಂದು ಕೊಡಿರಿ. ಅಥವಾ ನಿಮಗೆ ಒಂದೇ ಮಗು ಇದ್ದರೆ ನೀವೇ ಇರಿಸಿಕೊಳ್ಳಿರಿ; ಎರಡಿದ್ದರೆ ಒಂದನ್ನು ದೇಶ ರಕ್ಷಣೆಗೆ ಕೊಡಿರಿ. ಒಂದು ವೇಳೆ ಮಕ್ಕಳೇ ಇಲ್ಲದಿದ್ದರೆ ನೀವೇ ಧರ್ಮಪ್ರಸಾರಕ್ಕೆ ನಿಂತುಕೊಳ್ಳಿರಿ.''

ಅಂದಂತೆ ಗೃಹಸ್ಥರಾದ ಶರಣ ಬಂಧುಗಳೇ ಇನ್ನು ಮುಂದೆ ತಮ್ಮ ಮಕ್ಕಳನ್ನು ಹೇಗೆ ಬೆಳೆಸುತ್ತೀರಿ ? ಅಂದರೆ ಮನೆಯ ಮುಂದಿನ ಬಾಳೆಗಿಡಗಳಂತೆ ದೇಶ ಮತ್ತು ಧರ್ಮರಕ್ಷಣೆಗಾಗಿ ಬೆಳೆಸುವಿರೋ ಅಥವ ತಮ್ಮ ಆಸ್ತಿ ಪಾಸ್ತಿ ರಕ್ಷಣೆಗೆ ಮುಪ್ಪಿನ ಕಾಲಕ್ಕೆ ಇರಲಿ ಎಂದು ಮನೆಯ ಹಿಂದಿರುವ ಬಾಳೆಗಿಡಗಳಂತೆ ಬೆಳೆಸುವಿರೋ ? ಆಯ್ಕೆ ನಿಮ್ಮದು !

ಲಿಂಗಾಯತ ಧರ್ಮದ ಮಠಾಧೀಶರೇ; ನೀವು ನಿಮ್ಮ ಶಿಷ್ಯರನ್ನು ಹೇಗೆ ತರಬೇತುಗೊಳಿಸುವಿರಿ ? ಅಂದರೆ ನಿಮ್ಮ ಶಾಲೆ ಕಾಲೇಜು ಮಠ ಪೀಠಗಳ ಆಸ್ತಿ ನೋಡಿಕೊಳ್ಳುವಂತೆ ಮಠದ ಹಿಂದಿನ ಬಾಳೆಗಿಡಗಳಾಗಿ ತರಬೇತುಗೊಳಿಸುವಿರೋ ಅಥವ ಧರ್ಮಪ್ರಸಾರಕ್ಕೆ, ಸಮಾಜ ಸೇವೆಗೆಂದು ಮಠದ ಮುಂದಿನ ಬಾಳೆಗಿಡಗಳಂತೆ ಶಿಕ್ಷಣ ಕೊಡಿಸುತ್ತೀರೋ ?!

ಓ! ಆಧ್ಯಾತ್ಮ ಸೋದರ-ಸೋದರಿಯರೇ ಜೀವನದ ವ್ಯರ್ಥ ಕ್ಷಣಗಳನ್ನು ಎಣಿಸುತ್ತಾ ಅದೆಲ್ಲಿ ಬಚ್ಚಿಟ್ಟುಕೊಂಡಿದ್ದೀರಿ ? ನಿಮ್ಮ ಹಂಬಲವನ್ನು ಮುಂದಿನ ಕ್ಷಣಗಳಿಗೆ, ದಿನಗಳಿಗೆ, ಜನ್ಮಗಳಿಗೆ ಮುಂದೂಡದೆ ಬೇಗ ಹೊರಗೆ ಬನ್ನಿರಿ. ಏಕೆಂದರೆ ಬಸವಯೋಗಿ ಶ್ರೀ ಸಿದ್ಧರಾಮೇಶ್ವರರಂತೆ ನಾವು ನಮ್ಮ ಬದುಕಿನ ಬಾಳೆ ಫಲವಾಗದ ಮುನ್ನ; ಎಲೆಗೆ ಬೇಲಿ ತಾಗಿ ಹರಿದು ಹೋಗದ ಮುನ್ನ ಈಗಲೇ ಬಸವ ಪಾದವನ್ನು ಗಟ್ಟಿಯಾಗಿ ಹಿಡಿದುಕೊಂಡು ಯಶೋವಂತರಾಗೋಣ.

ಬಾಳೆಗೆ ಫಲವಾಗದ ಮುನ್ನ ಬಾಳುವೆಯ ಮಾಳ್ಪರೇ ಶರಣ.
ಬಾಳೆಯ ಎಲೆಗೆ ಬೇಲಿ ತಾಗದ ಮುನ್ನ
ಭಾಲಲೋಚನನ ಅಕ್ಷದಲ್ಲಿ ತಂದಡೆ ಮಹಾಶರಣ
ಇದು ಕಾರಣ, ಬಾಳೆಗೆ ಫಲವಿಲ್ಲ, ಎಲೆಗೆ ಬೇಲಿ ಬಗದಿಲ್ಲ
ಇದು ಕಾರಣ ಬಸವನಂಘ್ರಿಯ ನೋಡಿ
ಯಶೋವಂತನಾದೆ ಕಪಿಲಸಿದ್ಧಮಲ್ಲಿಕಾರ್ಜುನ.

ಸಿ.ವ-131.

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ

ಬೆಂಗಳೂರಿನಲ್ಲಿ 806ನೆಯ ಬಸವ ಪಂಚಮಿ

''12ನೆಯ ಶತಮಾನದ ಸಮಾಜ ಸುಧಾರಕರಾದ ಬಸವಣ್ಣನವರು ಜೀವಿಸಿದ್ದು 36ವರ್ಷಗಳಲ್ಲ, 63ವರ್ಷ. ಕೆಲವರು ಸಾಹಿತಿಗಳು, ಸಂಶೋಧಕರು 36ವರ್ಷ ಎಂದು ಪ್ರತಿಪಾದಿಸುವುದು ತಪ್ಪು. ಅನುಭವ ಮಂಟಪ ನಡೆದುದು 27ವರ್ಷ, ಬಸವಣ್ಣನವರು ಕಲ್ಯಾಣ ನಗರದಲ್ಲಿ ವಾಸವಾಗಿದ್ದುದು 36ವರ್ಷ ಎಂಬುದಕ್ಕೆ ಬಸವಣ್ಣನವರ ವಚನಗಳಲ್ಲೇ ಆಧಾರವಿದೆ. ವಿಕ್ರಮನಾಮ ಸಂವತ್ಸರದಲ್ಲಿ ಕಲ್ಯಾಣಕ್ಕೆ ಆಗಮಿಸಿದ ಬಸವಣ್ಣನವರು ನಳನಾಮ ಸಂವತ್ಸರದವರೆಗೆ ಕಲ್ಯಾಣದಲ್ಲಿ ಕಾರ್ಯ ಮಾಡಿದರು. ಈ ವಿಚಾರವನ್ನು ಕಾಲಜ್ಞಾನ ವಚನಗಳು ಸಹ ಪುಷ್ಟೀಕರಿಸುತ್ತವೆ. ಆದ್ದರಿಂದ ಬಸವಣ್ಣನವರು ಬದುಕಿದ್ದು ಸುಮಾರು 62ವರ್ಷ 3 ತಿಂಗಳು 2 ದಿವಸಗಳ ಕಾಲ ಎಂಬುದನ್ನು ಎಲ್ಲರೂ ಮನದಟ್ಟು ಮಾಡಿಕೊಳ್ಳುವುದು ಸೂಕ್ತ.'' ಎಂದು ಇಂದು ನಡೆದ ಬಸವಣ್ಣನವರ 806ನೆಯ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮದಲ್ಲಿ ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತ ನುಡಿದರು.

''ಬಸವಣ್ಣನವರು ಶ್ರೇಷ್ಠ ಸಮಾಜ ಸುಧಾರಕರು ಹೇಗೋ ಹಾಗೆ ಅಪ್ರತಿಮ ಯೋಗಿಗಳು ಸಹ. ಅವರು ಯೋಗ ತಂತ್ರವನ್ನು ಅನುಸರಿಸಿ ಇಚ್ಛಾಮರಣಿಗಳಾಗಿ ದೇವರಲ್ಲಿ ಒಂದಾದರು. ಆತ್ಮ-ಕಥೆಗಳಂತೆ ಇರುವ ವಚನಗಳಲ್ಲಿ ಇದೆಲ್ಲವೂ ಸ್ಪಷ್ಟವಾಗಿ ನಿರೂಪಣೆಯಾಗಿದ್ದರೂ ಇದನ್ನು ಅರಿಯದೆ ಕೆಲವರು ಬಸವಣ್ಣನವರ ಕೊಲೆಯಾಯಿತು ಎಂದೆಲ್ಲ ಜವಾಬ್ದಾರಿ, ಚಿಂತನೆ ಇಲ್ಲದೆ ಬರೆಯುತ್ತಾರೆ, ಭಾಷಣ ಮಾಡುತ್ತಾರೆ. ಇದು ನಿಜಕ್ಕೂ ವಿಷಾದನೀಯ.'' ಎಂದು ಮಾತೆ ಮಹಾದೇವಿಯವರು ನುಡಿದರು.

ಸಾಮೂಹಿಕ ಪೂಜೆಯೊಡನೆ ಪ್ರಾರಂಭವಾದ ಬಸವ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮವನ್ನು ಅಮೆರಿಕಾದ ಸಂಶೋಧಕ ವಿದ್ವಾಂಸರಾದ ಬ್ರಾಡ್ ಬೀಮನ್ ಅವರು ದೀಪೋಜ್ವಲನ ಮಾಡುವ ಮೂಲಕ ಉದ್ಘಾಟಿಸಿ, ''ಭಾರತ ದೇಶದ ಚರಿತ್ರೆಯಲ್ಲಿ ಮಾತ್ರವಲ್ಲ ವಿಶ್ವದ ಇತಿಹಾಸದಲ್ಲಿಯೇ ಬಸವಣ್ಣನವರು ಸಮತಾವಾದವನ್ನು ಬೋಧಿಸುವುದರಲ್ಲಿ ಮೊಟ್ಟ ಮೊದಲಿಗರು. ಐರೋಪ್ಯ ದೇಶಗಳಲ್ಲಿ ಮಹತ್ತರವಾದ ಆರ್ಥಿಕ ಪರಿವರ್ತನೆ ತಂದ ಕಾರ್ಲ್ ಮಾರ್ಕ್ಸ್‌ಗೂ ಪೂರ್ವದಲ್ಲಿಯೇ ಬಸವಣ್ಣನವರು ಆರ್ಥಿಕ ಕ್ರಾಂತಿ ಮಾತ್ರವಲ್ಲ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನು ತಂದರು. ಹೀಗಾಗಿ ನಾನು ವಿಶೇಷ ಆಸಕ್ತಿಯೊಡನೆ ವಚನ ಸಾಹಿತ್ಯದ ಅಧ್ಯಯನವನ್ನು ಮಾಡುತ್ತಿದ್ದೇನೆ.'' ಎಂದು ಬ್ರಾಡ್ ಬೀಮನ್ ನುಡಿದರು.

ಬೆಂಗಳೂರು ವಿಶ್ವ ವಿದ್ಯಾಲಯದ ನಿವೃತ್ತ ಉಪಕುಲಪತಿಗಳು, ಪ್ರಗತಿಪರ ಚಿಂತಕರೂ ಆದ ಡಾ॥ ಹೆಚ್. ನರಸಿಂಹಯ್ಯನವರು ''ದೃಷ್ಟಾಂತ ಸರಸಿ'' ಎಂಬ ಹಿಂದಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡುತ್ತ, ''ಬಸವಣ್ಣನವರು 800ವರ್ಷಗಳ ಹಿಂದೆಯೇ ಜಾತೀಯತೆ, ಮೂಢನಂಬಿಕೆ, ದೇವರ ಹೆಸರಿನಲ್ಲಿ ಶೋಷಣೆ ಮುಂತಾದವುಗಳನ್ನು ವಿರೋಧಿಸಿದರು. 21ನೆಯ ಶತಮಾನದಲ್ಲಿ ವಿದ್ಯಾವಂತರು ಸಹಿತ ಅಳವಡಿಸಿಕೊಳ್ಳಲಾಗದ ಪರಿಸ್ಥಿತಿ ಇರುವಾಗ

12ನೆಯ ಶತಮಾನದಲ್ಲಿಯೇ ಪ್ರಗತಿಪರ ವಿಚಾರಧಾರೆ ಪ್ರತಿಪಾದಿಸಿದರು ಮಾತ್ರವಲ್ಲ ಅದೇ ರೀತಿ ಚಿಂತನೆ ಮಾಡುವ ಅಸಂಖ್ಯಾತರನ್ನು ತರಬೇತಿಗೊಳಿಸಿದುದು ಆಶ್ಚರ್ಯದ ಸಂಗತಿ.'' ಎಂದು ಮಾತನಾಡಿದರು. ಪೂಜ್ಯ ಮಾತಾಜಿಯವರು ಕನ್ನಡದಲ್ಲಿ ಬರೆದ ಜನಪ್ರಿಯ ಕೃತಿ ದೃಷ್ಟಾಂತ ಸರಸಿಯನ್ನು ಹಿಂದಿಗೆ ಅನುವಾದ ಮಾಡಿದ ಶರಣ. ಸಿ.ಸದಾಶಿವಯ್ಯ ಅವರನ್ನು ಸನ್ಮಾನಿಸಲಾಯಿತು.


ಜೈನ್ ವೃತ್ತಿಪರ ಸಂಸ್ಥೆಯ ನಿರ್ದೇಶಕರಾದ ಡಿ. ಪಿ. ಪ್ರಕಾಶ್ ಅವರು '' ಅಲ್ಲಮ ಪ್ರಭು ವಚನಗಳು'' ಕೃತಿಯನ್ನು ಬಿಡುಗಡೆ ಮಾಡಿ ವಚನ ಸಾಹಿತ್ಯವು ತಂದ ಕ್ರಾಂತಿ ಭಾರತ ದೇಶದಲ್ಲಿ ಒಂದು ಮೈಲಿಗಲ್ಲು. ಸಾಮಾನ್ಯವಾಗಿ ಯೋಗಿಗಳು ಅಂತರ್ಮುಖಿಗಳು, ಸಮಾಜ ಸುಧಾರಕರು ಬಹಿರ್ಮುಖಿಗಳು. ಆದರೆ ವಚನಕಾರರನ್ನು ನೋಡಿದಾಗ ಈ ದ್ವಂದ್ವಗಳು ಜೊತೆಗೂಡಿದ್ದು ಒಂದು ವಿಶೇಷ, ಅವರು ಅಂತರಂಗ ಶುದ್ಧಿಯನ್ನು ಮಾಡಿಕೊಂಡಂತೆ ಬಹಿರಂಗ ಶುದ್ಧಿ ಮತ್ತು ಸಮಾಜ ಪರಿವರ್ತನೆಗೂ ಅಷ್ಟೇ ಮಹತ್ವ ನೀಡಿದರು'' ಎಂದು ನುಡಿದರು. ಡಾ|| ಎಂ.ಸಿ. ಮೋದಿಯವರು ಗಣಗೀತೆಗಳು ಪುಸ್ತಕವನ್ನು ಬಿಡುಗಡೆ ಮಾಡಿದರು.

''ಅಲ್ಲಮ ಪ್ರಭು ವಚನಗಳು'' ಪುಸ್ತಕ ಪ್ರಕಟಣೆಗೆ 10,000/- ರೂಪಾಯಿಗಳ ಧನ ಸಹಾಯ ಮಾಡಿದ ಶರಣೆ: ಎಂ.ಎಸ್.ಜಯಮ್ಮ ಅವರನ್ನು ಗಣ ಗೀತೆಗಳು ; ಶರಣಾಲಯ-ಗದ್ದುಗೆ ಪೂಜೆಯ ವಿಧಿ ವಿಧಾನ ಪುಸ್ತಕಗಳಿಗೆ ತಲಾ 5000 ಧನ ಸಹಾಯ ಮಾಡಿದ ಹಟ್ಟಿಹಳ್ಳಿಯ ಶರಣ. ಹೆಚ್.ಎನ್.ನಂಜುಂಡಯ್ಯ ಮತ್ತು ಶರಣ. ಹೆಚ್.ಎನ್. ಚಿಕ್ಕಬಸಪ್ಪ ಅವರನ್ನು ಸತ್ಕರಿಸಲಾಯಿತು.

ಕುಮಾರಿ: ವೀಣಾ ಬಸವರಾಜಯ್ಯ ಅವರಿಂದ ''ಬಸವನೆ ಶರಣು ನಿನಗೆ'' ಎಂಬ ಚನ್ನಬಸವಣ್ಣನವರ ಬಸವ ಸ್ತುತಿಯು ನೃತ್ಯಾಭಿನಯದ ಮೂಲಕ ಪ್ರದರ್ಶಿಸಲ್ಪಟ್ಟಿತು. ಆರಂಭದಲ್ಲಿ ಶರಣ. ವಿ. ಟಿ. ರಾಯರೆಡ್ಡಿಯವರು ಧ್ವಜಾರೋಹಣ ಮಾಡಿದರು. ಶರಣ. ಪುಟ್ಟರುದ್ರಪ್ಪ ಸ್ವಾಗತಿಸಿದರು. ಶರಣ. ಬಿ.ಜಯದೇವ್ ಅವರು ಮಾಲಾರ್ಪಣೆ ಮಾಡಿದರು.

ಚಿಂತನ ಗೋಷ್ಠಿ

ಮಧ್ಯಾಹ್ನದ ಗಣ ಪ್ರಸಾದ (ಊಟ)ದ ಬಳಿಕ ಚಿಂತನಗೋಷ್ಠಿಯು ಪ್ರಾರಂಭವಾಯಿತು. ಆದಿ ಪ್ರಮಥರ ಪೂಜೆಯ ನಂತರ ಶರಣೆ. ದೇವಿಕಾ ಶರಣಪ್ಪನವರು ಸ್ವಾಗತ ಭಾಷಣ ಮಾಡಿದರು. ಸುಧಾ ನಾಗರಾಜ್ ತಂಡದ ಆರಾಧನಾ ನಾಟ್ಯ ಶಾಲೆಯ ಮಕ್ಕಳು ''ಶರಣು ಶರಣು ಎನ್ನ ಗುರುವೆ'' ಎಂಬ ಬಸವ ಸ್ತುತಿಯನ್ನು ಸಾಮೂಹಿಕವಾಗಿ ನೃತ್ಯದ ಮೂಲಕ ಪ್ರದರ್ಶಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶರಣೆ. ಪ್ರಮೀಳಾ ನೇಸರ್ಗಿಯವರು Gems of Basavanna ಎಂಬ ಆಂಗ್ಲ ಕೃತಿಯನ್ನು ಬಿಡುಗಡೆ ಮಾಡಿದರು. ಹೆಚ್. ಎ. ಶರಣಪ್ಪನವರು, ಜೈರಾಜ್ ವಕೀಲರು ಬಸವಣ್ಣನವರ ಸಾಧನೆ ಸಂದೇಶ ಕುರಿತು ಉಪನ್ಯಾಸ ಮಾಡಿದರು. ಜೈನ್ ವೃತ್ತಿಪರ ಸಂಸ್ಥೆಯ ನಿರ್ದೇಶಕರಾದ ಶರಣ. ಡಿ.ಪಿ.ಪ್ರಕಾಶ್ ಅವರು ''Gems of Basavanna ಬಿಡುಗಡೆಯಾಗುತ್ತಿರುವುದು ಬಹಳ ಸಾಂಕೇತಿಕ, 21ನೆಯ



ಬೆಂಗಳೂರಿನಲ್ಲಿ ದಿ. 25-7-2001ರಂದು ನಡೆದ 806ನೆಯ ಬಸವ ಲಿಂಗೈಕ್ಯ ಸಂಸ್ಮರಣೆ
ಎಡದಿಂದ ಬಲಕ್ಕೆ ಡಾ|| ಎಂ.ಸಿ. ಮೋದಿ, ಅಮೇರಿಕಾದ ಬ್ರಾಡ್ ಬೀಮನ್, ಡಿ.ಪಿ.ಪ್ರಕಾಶ್
ಡಾ|| ಹೆಚ್. ನರಸಿಂಹಯ, ಪೂಜ್ಯ ಮಾತಾಜಿ, ಆಂಡ್ರೂ .., ವಿ.ಟಿ. ರಾಯರೆಡಿ

ಶತಮಾನದಿಂದ ಬಸವ ಧರ್ಮವು ವಿಸ್ತಾರವಾಗಿ ಪ್ರಚಾರಗೊಳ್ಳುಳುವುದೆಂಬುದರ ಮುನ್ಸೂಚನೆ'' ಎಂದು ನುಡಿದು ಕೃತಿಯ ವಿಮರ್ಶೆ ಮಾಡಿದರು.

ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ವೀರಣ್ಣ ಕೊರ್ಲ್ಹಳ್ಳಿ ಅವರು ಲಿಂಗಾಯತ ಧರ್ಮ ಕೈಪಿಡಿಯ ನೂತನ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ನಡೆದ ಮತ್ತೊಂದು ವಿಶೇಷ ಪ್ರಸಂಗವೆಂದರೆ ಗಣಾಚಾರ ದಳದವರ ಪ್ರತಿಜ್ಞಾ ಸ್ವೀಕಾರ. ವಚನ ಸಾಹಿತ್ಯವು ಪ್ರತಿಪಾದಿಸುವ ಲಿಂಗಾಯತ ಧರ್ಮದ ಉಳಿವು, ಬೆಳವಿಗೆಗಾಗಿ ಮತ್ತು ಸಂರಕ್ಷಣೆಗಾಗಿ ರೂಪುಗೊಂಡ ಗಣಾಚಾರ ದಳಕ್ಕೆ ಸೇರ್ಪಡೆಯಾದ 20ಜನ ಯುವಕರು ಧರ್ಮಪ್ರಚಾರಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವುದಾಗಿ ಪ್ರತಿಜ್ಞಾಬದ್ಧರಾದರು. ಪೂಜ್ಯ ಮಾತಾಜಿಯವರು ಪ್ರತಿಜ್ಞಾವಿಧಿ ಬೋಧಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶರಣ. ಪುಟ್ಟರುದ್ರಪ್ಪನವರು ''ಪೂಜ್ಯ ಮಾತಾಜಿಯವರಲ್ಲಿರುವ ಪ್ರತಿಭೆಯೇ ಅವರ ಬಗ್ಗೆ ಅನೇಕ ಮಠಾಧೀಶರು-ಸಾಹಿತಿಗಳಿಗೆ ದ್ವೇಷ-ಮತ್ಸರ ಉಂಟಾಗಲು ಕಾರಣ. ಕೆಲವರಿಗೆ ಮಾತನಾಡುವ ಕಲೆ ಇರುತ್ತದೆ ಬರೆಯುವ ಕಲೆ ಇರದ್ದು, ಇನ್ನು ಕೆಲವರಿಗೆ ಬರೆಯುವ ಕಲೆ ಇರುತ್ತದೆ, ಮಾತನಾಡುವುದು ಇರದು. ಇವು ಇದ್ದರೂ ಸಂಘಟನಾ ಶಕ್ತಿ ಕೆಲವರಿಗೆ ಇರದು. ಈ ಮೂರೂ ಪ್ರತಿಭೆಯಿಂದ ಕೂಡಿರುವ ಮಾತಾಜಿಯವರು ಆತ್ಮವಿಶ್ವಾಸದಿಂದ ಸತ್ಯವನ್ನು ಪ್ರತಿಪಾದಿಸಬಲ್ಲರು.'' ಎಂದು ನುಡಿದರು. ಶರಣ. ಎಸ್.ಎನ್. ನೀಲಕಂಠ ಅವರು ಅತಿಥಿಗಳಿಗೆ ಮಾಲಾರ್ಪಣೆ ಮಾಡಿದರು. ಸೃಷ್ಟಿಕರ್ತನ 108 ಸ್ತುತಿಯನ್ನು ಸಾಮೂಹಿಕವಾಗಿ ಘೋಡಲಾಯಿತು. ಮಂಗಲದೊಡನೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

- ವರದಿ: ರಮೇಶ್ ಲಿಂಗಾಯತ (ತಳ್ಳಿ)

ಮಾತೆ ಗಂಗಾದೇವಿಯವರ ಮಂಗಲ

ಜಯ ಜಯ ಗಂಗಾ ಮಾತಾಜಿ ಜಯತು ಜಗದ್ಗುರು ಮಾತಾಜಿ
ಮಂಗಲ ಮೂರುತಿ ಮಾತಾಜಿ ಪಾವನ ಮೂರುತಿ ಶುಭಜ್ಯೋತಿ ॥ ಪ ॥

ಕಲ್ಯಾಣ ನಾಡಿನ ಚಿತ್ಕಳೆಯೆ ಶರಣ ತತ್ತ್ವದ ಪುಣ್ಯಪ್ರಭೆ
ಬಸವ ಧರ್ಮದ ಸಂದೇಶ ಸಾರಲು ಸಂಚರಿಸುತ್ತಿಹ ಗುರುಮಾತೆ ॥ 1 ॥

ಗುರು ಲಿಂಗಾನಂದರ ಕರ ಕಮಲದಲಿ ದೀಕ್ಷೆಯ ಹೊಂದಿದ ದಿವ್ಯಸುತೆ
ಗುರು ಮಾತಾಜಿಯ ಪಾವನ ಹಸ್ತದಿ ಜಂಗಮವಾಗಿಹ ಮಂಗಳೆಯೆ ॥ 2 ॥

ಗುರು ಬಸವೇಶನ ಕರುಣೆಯ ಕಂದ ಬಸವ ಭಕ್ತರ ಪರಮಾನಂದ
ಅಕ್ಕಮಹಾದೇವಿಯ ಸ್ತ್ರೀಗುರು ಪೀಠವ ಏರಿದ ದ್ವಿತೀಯ ಜಗದ್ಗುರುವೆ ॥ 3 ॥

ಮಮತಾ ಸಹಿತ ಮೃದುಹೃದಯೆ ಪ್ರವಚನದಲ್ಲಿ ಪರಿಣತರೆ
ಮಹಾದೇವಿ ಮಾತೆಯ ಮಾನಸ ಪುತ್ರಿ ವಿಸ್ತರಿಸುತ್ತಿಹೆ ಬಸವನ ಕೀರ್ತಿ ॥ 4 ॥

ಅಮೋಘವಾದ ಹೊಸ ಪುಸ್ತಕಗಳ ಬಿಡುಗಡೆ

806ನೆಯ ಬಸವ ಪಂಚಮಿಯ ದಿವಸ ದಿ.25-7-2001 ರಂದು ಬೆಂಗಳೂರಿನ ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆಯಾದ ಪುಸ್ತಕಗಳು

1. **GEMS OF BASAVANNA**
ಧರ್ಮಪಿತ ಬಸವಣ್ಣನವರ ವಚನಗಳ 32 ವಚನಗಳ ಭಾಷಾಂತರ ಮತ್ತು ಅದಕ್ಕೆ ಆಂಗ್ಲ ಭಾಷೆಯಲ್ಲಿ ವ್ಯಾಖ್ಯಾನ. ಲೇಖಕರು: ಪೂಜ್ಯ ಮಾತಾಜಿಯವರು ಮತ್ತು ಬೆಲ್ಜಿಯಂ ದೇಶದ ಜೇನ್ ಲೆಷರ್ಟ್, 1/8 ಡೆಮ್ಮಿ ಆಕಾರ, 80 ಪುಟಗಳು. ಬೆಲೆ: 25 ರೂಪಾಯಿ, ಅಂಚೆ ವೆಚ್ಚ ಪ್ರತ್ಯೇಕ

2. **ಅಲ್ಲಮಪ್ರಭುದೇವರ ವಚನಗಳು. ಲೇಖಕರು : ಪೂಜ್ಯ ಮಾತಾಜಿ**
ಅಲ್ಲಮಪ್ರಭುದೇವರ ಸಂಕ್ಷಿಪ್ತ ಪರಿಚಯ, 108 ವಚನಗಳು-ಭಾವಾರ್ಥ ಸಹಿತವಾಗಿ. ಪುಟಗಳು 172, 1/16th ಡೆಮ್ಮಿ ಆಕಾರ. ಬೆಲೆ : 18/-ರೂಪಾಯಿ, ಅಂಚೆ ವೆಚ್ಚ ಪ್ರತ್ಯೇಕ

3. **ಶರಣಾಲಯ-ಗದ್ದುಗೆ ಪೂಜೆಯ ವಿಧಿ-ವಿಧಾನ. ಲೇಖಕರು : ಪೂಜ್ಯ ಮಾತಾಜಿ**
ಲಿಂಗಾಯತ ಧರ್ಮದ ಪ್ರಕಾರ ಬಸವಾಲಯ-ಬಸವ ಮಂಟಪ, ಶರಣಾಲಯ (ಗದ್ದುಗೆ) ಹೇಗಿರಬೇಕು ? ಶರಣರು, ಬಸವ ಪಥಿಕರಾದ ಯೋಗಿಗಳ ಗದ್ದುಗೆಗಳನ್ನು ಹೇಗೆ ಪೂಜಿಸಬೇಕು ? ರುದ್ರಾಭಿಷೇಕದಲ್ಲಿ ಬರುವ ತಾತ್ತ್ವಿಕ ದೋಷಗಳು ಏನು ? ಇದು ಹೇಗೆ ಇಷ್ಟಲಿಂಗ ಪೂಜೆಗೂ ಸರಿ ಹೊಂದದು ಎಂಬ ವಿಮರ್ಶೆಯನ್ನು ಹೊಂದಿದೆ. ಸೃಷ್ಟಿಕರ್ತನ 108 ನಾಮಾವಳಿಗಳಿಂದ ಕೂಡಿರುವ ಈ ಪುಸ್ತಕ ಎಲ್ಲರಿಗೂ ಅತ್ಯಂತ ಉಪಯುಕ್ತ. ಪ್ರತಿಯೊಬ್ಬ ಲಿಂಗಾಯತನೂ ಈ ಪುಸ್ತಕ ಖರೀದಿಸಿ ಸೃಷ್ಟಿಕರ್ತ ಲಿಂಗದೇವನ ನಾಮಾವಳಿಯನ್ನು ಕಲಿಯುವುದಲ್ಲದೆ ನಿಮ್ಮ ಊರಲ್ಲಿ, ಹತ್ತಿರದಲ್ಲಿ ಇರುವ ಗದ್ದುಗೆಗಳ ಸ್ವಾಮಿಗಳಿಗೆ, ಅರ್ಚಕರಿಗೆ ಪುಸ್ತಕವನ್ನು ಉಚಿತವಾಗಿ ಕೊಡಬೇಕು. 1/8th ಕ್ರೌನ್ ಆಕಾರ, 120 ಪುಟಗಳು, ಬೆಲೆ :- 25/-, ಅಂಚೆ ವೆಚ್ಚ ಪ್ರತ್ಯೇಕ

4. **ಗಣಗೀತೆಗಳು** : ಪೂಜ್ಯ ಮಾತಾಜಿಯವರು ಬರೆದ ಪ್ರಯೋಗಶೀಲ ಉಪಯುಕ್ತ ಹಾಡುಗಳ ಸಂಗ್ರಹ. ಹುಟ್ಟಿನಿಂದ ಸಾವಿನವರೆಗೆ ಮಾನವನು ಅನೇಕ ಧಾರ್ಮಿಕ ಸಂಸ್ಕಾರಗಳಿಗೆ ಒಳಗಾಗುತ್ತಾನೆ. ಹುಟ್ಟುಹಬ್ಬ-ಹುಟ್ಟು ಹಬ್ಬದ ವಾರ್ಷಿಕೋತ್ಸವ, ಮದುವೆ-ಮದುವೆಯ ವಾರ್ಷಿಕೋತ್ಸವ, ಲಿಂಗೈಕ್ಯ ಸಂಸ್ಕಾರ-ಲಿಂಗೈಕ್ಯ ಸಂಸ್ಮರಣೆ ಈ ಎಲ್ಲ ಸಂದರ್ಭದಲ್ಲಿ ಹಾಡಲು ಬರುವ ಹಾಡುಗಳನ್ನು ಈ ಕೃತಿಯು ಒಳಗೊಂಡಿದೆ. ಹೆಣ್ಣುಮಕ್ಕಳಿಗೆ ವಿಶೇಷ ಸಂದರ್ಭ(ಸೀಮಂತ) ದಲ್ಲಿ ಉಡಿ ತುಂಬುವುದು, ಮದುವೆಯ ಸಮಯದಲ್ಲಿ ಅರಿಷಿನ-ಎಣ್ಣೆ ವಧುವರರಿಗೆ ಹಚ್ಚುವುದು ಮುಂತಾದ ಸನ್ನಿವೇಶದಲ್ಲಿ ಹಾಡಲು ಬರುವ ಗೀತೆಗಳು ಇಲ್ಲಿವೆ. ಶಾಲೆಗಳಲ್ಲಿ ಪ್ರಾರ್ಥನೆ ಮಾಡಿಸಲು ಬರುವ ಹಾಡುಗಳು ಇವೆ. 1/8th ಕ್ರೌನ್ ಆಕಾರ, ಪುಟ 80, ಬೆಲೆ :18/-, ಅಂಚೆ ವೆಚ್ಚ ಪ್ರತ್ಯೇಕ

ವಿ.ಸೂ : ಈ ನಾಲ್ಕು ಪುಸ್ತಕಗಳನ್ನೂ ಒಂದೇ ಸಲಕ್ಕೆ ಖರೀದಿಸಿದರೆ ಅಂಚೆ ವೆಚ್ಚ ಉಚಿತ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 71ನೆಯ ಜಯಂತಿ ಉತ್ಸವ ಮತ್ತು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಣೆ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರು ಬಿಜಾಪುರ ಜಿಲ್ಲೆಯ ಮನಗೂಳಿ ಗ್ರಾಮದಲ್ಲಿ ಶರಣ ದಂಪತಿಗಳಾದ ಮಲ್ಲಪ್ಪ ಕಪ್ಪರದ ಮತ್ತು ಕಲ್ಲಮ್ಮರ ಮಗನಾಗಿ (15-9-1931)ಜನಿಸಿ, ಸಂಗಮೇಶ ಎಂಬ ನಾಮಕರಣ ಹೊಂದಿ, ಬಿ.ಎ.ಆನರ್ಸ್ ಪದವೀಧರರಾಗಿ, ನಂತರ ಬಸವ ತತ್ವ ಪ್ರಚಾರಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ದಿ. 19-11-1956ರಂದು ಬಸವ ಪ್ರೇರಣೆಯಿಂದ ಜ್ಞಾನ ಸನ್ಯಾಸವನ್ನು ಸ್ವೀಕರಿಸಿ, ಲಿಂಗಾನಂದ ಸ್ವಾಮಿಗಳೆಂಬ ಅಭಿಧಾನವನ್ನು ಹೊಂದಿದರು. ನಾಡಿನಾದ್ಯಂತ ಸಂಚರಿಸಿ ಅಪೂರ್ವವಾಗಿ ಬಸವ ತತ್ವ ಪ್ರಚಾರವನ್ನು ಮಾಢಿದರು. ಇಂತಹ ಪೂಜ್ಯರು ಧರ್ಮ ಜಾಗೃತಿ ಮತ್ತು ಸಮಾಜ ಸಂಘಟನೆಗಾಗಿ ರಾಷ್ಟ್ರೀಯ ಬಸವ ದಳ ಎಂಬ ಸಂಘವನ್ನು ಹುಟ್ಟುಹಾಕಿದರು. ಅದಕ್ಕಾಗಿ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ಜಯಂತಿಯನ್ನು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬವನ್ನಾಗಿ ಆಚರಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಎಲ್ಲ ರಾಷ್ಟ್ರೀಯ ಬಸವ ದಳಗಳ ಶಾಖೆಗಳವರು ಗಣೇಶ ಚತುರ್ಥಿಯಂದು ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ ಆಚರಿಸುವ ಪರಿಪಾಠವನ್ನು ಇಟ್ಟುಕೊಳ್ಳಬೇಕು. ಈ ವರ್ಷದ ಗಣೇಶ ಚೌತಿಯು 22-8-2001 ರಂದು ಒದಗಿಬಂದಿದ್ದು ಅಂದು ತಪ್ಪದೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 44ನೆಯ ವರ್ಧಂತಿ

ಬೀದರ್ ಜಿಲ್ಲೆಯ ಚಟ್ನಳ್ಳಿ ಗ್ರಾಮದ ಶರಣ. ಮಾಣಿಕಪ್ಪ ಬೆಣ್ಣೆ ಮತ್ತು ಶರಣೆ. ಭಾಗೀರಥಮ್ಮನವರ ಸುಪುತ್ರಿಯಾಗಿ 1958ರ ಸೆಪ್ಟೆಂಬರ್ 16ರಂದು ಜನಿಸಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ತಮ್ಮ 15ನೆಯ ವಯಸ್ಸಿಗೆ 1973ರಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಆಶ್ರಯಕ್ಕೆ ಬಂದರು. ಶ್ರದ್ಧಾವಂತ ಸಾಧಕಿಯಾಗಿ ಗುರುಗಳ ಸೇವೆಗೈಯುತ್ತಲೇ ಉತ್ತಮ ಜ್ಞಾನಿಯಾಗಿ, ವಾಗ್ಮಿಯಾಗಿ ರೂಪುಗೊಂಡರು. ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ಕರ್ನಾಟಕದಾದ್ಯಂತ ಮಾತ್ರವಲ್ಲ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ಸಹ ಪ್ರವಚನ ಮಾಡಿಬಂದಿದ್ದಾರೆ. ಹಿಂದಿಯನ್ನು ಕಲಿತು ದೆಹಲಿಯ ವಿವಿಧ ಬಡಾವಣೆಗಳಲ್ಲಿ ಪ್ರವಚನ ಮಾಡಿ ಬಂದಿರುವುದೇ ಅಲ್ಲದೆ ದೆಹಲಿ ಮತ್ತು ಮುಂಬೈಯ ಬಸವ ಧರ್ಮ ಸಮ್ಮೇಳನಗಳ ಯಶಸ್ಸಿನಲ್ಲಿ ಪೂಜ್ಯ ಮಾತೆ ಗಂಗಾದೇವಿಯವರದೇ ಪ್ರಮುಖ ಪಾತ್ರ. ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಎರಡನೆಯ ಅಧಿಕಾರಿಯಾಗಿ ದಿ. 14-4-1996ರಂದು ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಅಪೂರ್ವ ವಾಗ್ಮಿಯಾಗಿ, ಸಂಘಟಕರಾಗಿ, ಕ್ರಾಂತಿಕಾರಿ ಧರ್ಮ ಪ್ರಚಾರಕರಾಗಿ ಕೀರ್ತಿ ವಿಶೇಷಿತರಾಗಿದ್ದಾರೆ. ದಿ. 22-8-2001ರಂದು 43 ವರ್ಷ ಪೂರೈಸಿ 44ಕ್ಕೆ ಪಾದಾರ್ಪಣೆ ಮಾಡುತ್ತಲಿದ್ದಾರೆ.

☹ಸಮಸ್ಯೆ ? - ಸಮಾಧಾನ !☺

ತ್ರಿವೇಣಿ ಗಂಗಾಧರ, ಆಣೇಕಟ್ಟೆ, -ನಮ್ಮೂರಲ್ಲಿ ಒಂದು ಬಸವಣ್ಣನ ಗುಡಿ ಇದೆ. ಇದು ನಾಲ್ಕು ಕಾಲು ಎರಡು ಕೋಡಿನ ನಂದೀಶ್ವರನ ಗುಡಿ ಎಂದು ಊರಿನ ಅನೇಕರ ವಾದ. ಇಲ್ಲ ಇದು ಧರ್ಮಗುರು ಕಲ್ಯಾಣದ ಬಸವಣ್ಣನವರ ಗುಡಿ ಎಂದು ನನ್ನ ವಾದ. ಯಾವುದು ಸರಿ ?

★ ನಿಮ್ಮ ವಾದವೇ ಸರಿ. ಲಿಂಗಾಯತ ಸಮಾಜ ಇರುವಲ್ಲಿ, ಲಿಂಗಾಯತ ಪೂಜಾರಿಗಳು ಇರುವಲ್ಲಿ ಇರುವ ಬಸವಣ್ಣನ ಗುಡಿಗಳು ಕಲ್ಯಾಣದ ಬಸವಣ್ಣನ ಗುಡಿಗಳೇ. ಕಲ್ಯಾಣ ಕ್ರಾಂತಿಯ ನಂತರ ಲಿಂಗಾಯತ ಸಮಾಜದ ಶರಣರು ದಿಕ್ಕಾಪಾಲಾಗಿ ಚದುರಿದರು. ಸ್ವಲ್ಪಕಾಲದ ನಂತರ ಅಲ್ಲಲ್ಲೇ ಸ್ಥಿರವಾಗಿ ನೆಲೆಸಿದರು. ಆಗ ಅವರಿಗೆ ಸಮುದಾಯ ಕೇಂದ್ರಗಳು ಬೇಕಾದವು. ಲಿಂಗಾಯತ ಧರ್ಮದ ಸಮುದಾಯ ಕೇಂದ್ರ(Community Centres)ಗಳೇ ಬಸವಣ್ಣನ ಗುಡಿಗಳು. ಎಂಥಾ ಕುಗ್ರಾಮವಿರಲಿ, ಲಿಂಗಾಯತ ಸಮಾಜವಿದ್ದಲ್ಲಿ ಬಸವಣ್ಣನ ಗುಡಿಗಳಿವೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಮಧ್ಯ ಪ್ರದೇಶ ಮುಂತಾದಲ್ಲೆಲ್ಲ. ಮುಂಬೈಯಲ್ಲಿ ಡೋಹಾರ ಕಕ್ಕಯ್ಯನ ಅನುಯಾಯಿಗಳು ಅಂದರೆ ಲಿಂಗಾಯತ ಡೋಹಾರರು ಇರುವಲ್ಲಿ ಸಹ ಬಸವಣ್ಣನ ಗುಡಿ ಕಂಡು ನಮಗೆ ಅಚ್ಚರಿಯಾಯಿತು.

"ಹಿಂದಿನವರು ಕಲ್ಯಾಣದ ಬಸವಣ್ಣನಿಗೆ ಗುಡಿ ಕಟ್ಟಿದ್ದರೆ ಅಲ್ಲಿ ನಂದಿಯ ಮೂರ್ತಿ ಏಕಿರುತ್ತಿತ್ತು?" ಎಂದು ಧರ್ಮಗುರು ಬಸವಣ್ಣನವರ ತತ್ತ್ವ ಇಷ್ಟಪಡದ ಕೆಲವರು ವಾದಿಸಬಹುದು.

1. ಧರ್ಮಗುರು ಬಸವಣ್ಣನವರು ಮೂರ್ತಿಪೂಜೆಯನ್ನು ಒಪ್ಪದೆ, ಮೂರ್ತಿ ಪೂಜೆ ನಿಷೇಧಿಸಿ ಕಟ್ಟಪ್ಪಣೆ ಮಾಡಿದ್ದರಿಂದ ಅನುಯಾಯಿಗಳು ಬಸವಣ್ಣನವರ ಮೂರ್ತಿ ಇಡದೆ, ಅವರನ್ನು ಧರ್ಮವೃಷಭ ಎಂದು ಸಂಕೇತಿಸಿ ನಂದಿಯನ್ನು ಇಟ್ಟಿದ್ದಾರೆ.

Symbolism ಎಂಬ ಕುರುಹೀಕರಣ ಎಲ್ಲ ಧರ್ಮಗಳಲ್ಲೂ ಉಂಟು. ಬುದ್ಧನನ್ನು ಜಿಂಕೆ ಎಂದು, ಏಸುಕ್ರಿಸ್ತನನ್ನು ಕುರಿಮರಿ ಎಂದು ಕುರುಹುಗೊಳಿಸಲಾಗಿದೆ. ಆ ದೃಷ್ಟಿಯಿಂದ ಸಾತ್ವಿಕ ಪ್ರಾಣಿಯೂ, ನಿಷ್ಠಾವಂತ ಕಾಯಕ ಜೀವಿಯೂ, ಉಪಯುಕ್ತ ಪ್ರಾಣಿಯೂ, ಮಾನವನ, ಮುಖ್ಯವಾಗಿ ರೈತನ ಬೆನ್ನೆಲುಬಾದ ಎತ್ತಿನ ಆಕಾರದಲ್ಲಿ ಬಸವಣ್ಣನವರನ್ನು ಕುರುಹುಗೊಳಿಸಿರುವುದರಲ್ಲಿ ಹಿಂದಿನವರು ಚಿಂತನೆ ಮಾಡುವವರೇ ಆಗಿದ್ದಾರೆ ಎನ್ನಿಸುವುದು.

2. ಭಾರತೀಯರು ಶಿವನನ್ನು, ಅವನ ವಾಹನ ನಂದಿಯನ್ನು ಗೌರವ ಭಕ್ತಿಯಿಂದ ಕಾಣುವುದಲ್ಲದೆ ಬಹಳ ಪ್ರೀತಿಸುವರು. ಹರಪ್ಪಾ-ಮೊಹೆಂಜೋದಾರೋ ಸಂಸ್ಕೃತಿಯಲ್ಲಿ ವೃಷಭ ಮುದ್ರೆಯೇ ಪ್ರಧಾನ ಎಂಬುದನ್ನು ಎಲ್ಲರೂ ಅರಿತಿದ್ದಾರೆ. ಹೀಗಾಗಿ ಜಾನಪದರಿಗೆ ಅತ್ಯಂತ ಪ್ರೀತಿಯ ವ್ಯಕ್ತಿಯಾದ ಬಸವಣ್ಣನವರನ್ನು ಜಾನಪದರ ಮತ್ತೊಂದು ಪ್ರೀತಿಯ ಪ್ರಾಣಿಯಾದ ನಂದಿಯ ರೂಪದಲ್ಲಿ ಅಪಾರ ಪ್ರೀತಿಯಿಂದ, ಮುಗ್ಧ ಭಕ್ತಿಯಿಂದ ವೃಷಭನ ಅವತಾರ ಎಂದು ಬಸವಣ್ಣನವರನ್ನು ಸಾಕಾರ ಗೊಳಿಸಿರುವ ಸಾಧ್ಯತೆ ಇದೆ.

3. ವೈದಿಕ ಪುರೋಹಿತಶಾಹಿ, ಆಗಮಿಕ ಗುಡಿ ಸಂಸ್ಕೃತಿ ಎರಡನ್ನೂ ನಿಷೇಧಿಸಿ ದೇಹವನ್ನು ದೇವಾಲಯ ಮಾಡಿಕೊಳ್ಳುವ ಶ್ರೀಸಾಮಾನ್ಯನ ಜೀವಂತ ಧರ್ಮವನ್ನು ಬಸವಣ್ಣನವರು ಎತ್ತಿಹಿಡಿದು, ಏಕದೇವೋಪಾಸನೆಯನ್ನು ಇಷ್ಟಲಿಂಗ ಧಾರಣೆಯ ಮೂಲಕ ತಂದರು. ಇದರಿಂದ ತಪ್ತರಾದ ಶೈವರು-ವೈದಿಕರು ಲಿಂಗಾಯತ ಧರ್ಮ, ಸಂಸ್ಕೃತಿ, ಸಾಹಿತ್ಯಕ್ಕೆ ವಿಪರೀತ ಕಿರುಕುಳಕೊಟ್ಟರು. ಇಂಥ ಸನ್ನಿವೇಶದಲ್ಲಿ ಶೈವ ದೇವತೆಯಾದ ನಂದಿನಾಥನ ಅವತಾರವೆಂದು ಬಸವಣ್ಣನವರನ್ನು ಮಾಡಿ, ಶೈವದ ಮುಸುಕಿನಲ್ಲಿ ಲಿಂಗಾಯತ ಧರ್ಮವನ್ನು ರಕ್ಷಿಸಿಕೊಳ್ಳುವ ಒಂದು ಪ್ರಯತ್ನವನ್ನೂ ಲಿಂಗಾಯತರು ಮಾಡಿರಬಹುದು.

ಹಿಂದಿನ ಲಿಂಗಾಯತರು ಅನಿವಾರ್ಯತೆಯಿಂದ ಬಸವಣ್ಣನ ಗುಡಿಗಳಲ್ಲಿ ನಂದಿಯನ್ನು ಇಟ್ಟಿದ್ದರೂ, ಇಂದಿನ ಲಿಂಗಾಯತರ ಅಜ್ಞಾನದಿಂದ ಅದೇ ಪರಿಪಾಠ ಮುಂದುವರೆದಿದೆ. ವಚನ ವಾಙ್ಮಯವು ಬೆಳಕಿಗೆ ಬಂದ ಮೇಲೆ ಬಸವಣ್ಣ, ಚೆನ್ನಬಸವಣ್ಣ ಮುಂತಾದವರು ಮಾನವಾಕಾರದ ಐತಿಹಾಸಿಕ ವ್ಯಕ್ತಿಗಳು, ದಾರ್ಶನಿಕರು ಎಂಬುದು ಮನದಟ್ಟಾಗಿದ್ದರೂ ಉಳವಿ ಚನ್ನಬಸವಣ್ಣನವರ ಗುಡಿಯಲ್ಲಿ ನಂದಿ, ಬಸವ ಕಲ್ಯಾಣದ ಅರಿವಿನ ಮನೆಯಲ್ಲಿ (ಅದು ಬಸವಣ್ಣನವರು ಇಷ್ಟಲಿಂಗಾರ್ಚನೆಗೆ ಕೂರುತ್ತಿದ್ದ ಸ್ಥಳ) ಸಹ ನಂದಿಯೇ ಇತ್ತು. ಒಮ್ಮೆ ನಾವೇ ಆ ನಂದಿಯನ್ನು ತೆಗೆದು ಮಾನವಾಕಾರದ ಅಭಯಮುದ್ರೆಯ ಬಸವಣ್ಣನವರ ಮೂರ್ತಿಯನ್ನು ಅರಿವಿನ ಮನೆಯ ಗದ್ದುಗೆಯ ಮೇಲೆ ಪ್ರತಿಷ್ಠಾಪಿಸಿ ಬಂದೆವು.

1. ಸಾಮಾನ್ಯವಾಗಿ ಪೌರಾಣಿಕ ನಂದಿಗೆ ಗುಡಿಗಳಲ್ಲಿ ಪ್ರಧಾನ ಸ್ಥಾನ ಇರದು. ಶಿವಲಿಂಗದ ಮುಂದೆ ಪ್ರತಿಷ್ಠಾಪಿಸಿರಲಾಗುವುದು. ಕಲ್ಯಾಣದ ಬಸವಣ್ಣನ ಪ್ರತೀಕವಾದ ನಂದಿಗೆ ಪ್ರಧಾನ ಸ್ಥಾನ ಇರುವುದು.
2. ಲಿಂಗಾಯತರ ಪೂಜಾರಿಕೆ ಇರುವ ಬಸವಣ್ಣನ ಗುಡಿ ಕಲ್ಯಾಣದ ಬಸವಣ್ಣನವರಿಗೆ ಸಂಬಂಧಿಸಿದವು; ಬ್ರಾಹ್ಮಣರ ಪೂಜಾರಿಕೆ ಇರುವವು ನಂದಿಗೆ ಸಂಬಂಧಿಸಿದವು.

ಇಲ್ಲಿ ಒಂದು ಮಹತ್ವದ ವಿಷಯ ಹೇಳಬಯಸುವೆನು. ಬೆಂಗಳೂರಿನ ಮೂಲ ಪ್ರಧಾನ ದೇವತೆ ಬೃಹತ್ ನಂದಿ. ಬಸವನ ಗುಡಿ ಬಡಾವಣೆಯಲ್ಲಿ ಬಸವಣ್ಣನ ಗುಡಿ ಎಂಬುದರಲ್ಲಿ ಈ ನಂದಿ ಇದೆ. ಮತೀಯ ಅಸಹನೆ ಬೆಳೆಯುತ್ತಿರುವುದರಿಂದ ಅನೇಕರು ಬಸವಣ್ಣನ ಗುಡಿ ಎನ್ನಲು ಬಯಸದೆ ಬುಲ್ ಟೆಂಪಲ್ ಎನ್ನುತ್ತಾರೆ. ಇದು ಮೊದಲು ಒಂದು ಕಾಲದಲ್ಲಿ ಲಿಂಗಾಯತ ಆಡಳಿತಕ್ಕೆ, ಒಂದು ಲಿಂಗಾಯತ ಮಠಕ್ಕೆ ಸಂಬಂಧಿಸಿದ್ದಾಗಿ ಶಾಸನ ಸಿಕ್ಕಿದ್ದನ್ನು ಡಾ|| ಚಿದಾನಂದ ಮೂರ್ತಿಯವರು ಪ್ರಜಾವಾಣಿಯಲ್ಲಿ ಪ್ರಕಟಿಸಿದ್ದರು. ಕಾಲಾನುಕ್ರಮದಲ್ಲಿ ಆ ಗುಡಿ ಬ್ರಾಹ್ಮಣರ ಪೂಜಾರಿಕೆಗೆ ಹೋಗಿದೆ.

ಒಮ್ಮೆ ನಾನು ಕೂಡಲ ಸಂಗಮದಲ್ಲಿ ವಾಸ್ತವ್ಯ ಮಾಡಿದ್ದಾಗ ಕೆಲವು ಆಂಧ್ರದ ಸಿನಿಮಾ ಮಂದಿ ಬಂದರು. ಆಂಧ್ರ ಸರ್ಕಾರ ಒಂದು ಡಾಕ್ಯುಮೆಂಟರಿ ಫಿಲ್ಮ್ ಮಾಡುತ್ತಿದೆಯೆಂದು, ಶ್ರೀಶೈಲದ ಸನಿಹದಲ್ಲಿರುವ ನಂದ್ಯಾಲದ ಬಳಿಯ ಮಹಾನಂದಿಯು ಕಲ್ಯಾಣದ ಬಸವಣ್ಣನವರ ಪ್ರತೀಕವೆಂದು ಆಖ್ಯಾಯಿಕೆ ಇರುವುದರಿಂದ ಮಹಾನಂದಿ ದೇವಾಲಯದ ದೇವತೆಯ

ಮಹಿಮೆ ಸಾರುವ ಚಿತ್ರದಲ್ಲಿ ಬಸವಣ್ಣನವರ ಬಗ್ಗೆ ಚಿತ್ರಿಸಲು ಇಷ್ಟವಿದೆ ಎಂದು, ಆಂಧ್ರ ಸರ್ಕಾರ ಹೀಗೆ ಮಾಡಲು ಸೂಚಿಸಿದೆ ಎಂದು ಹೇಳಿದಾಗ ನಾನು ಸಾಕಷ್ಟು ಮಾಹಿತಿ ಕೊಟ್ಟೆ. ವಿಷಯ ತಿಳಿದು ನನಗೆ ಅಚ್ಚರಿಯಾಯಿತು.

ಇಂದು ಸಾಕಷ್ಟು ವಚನ ಸಾಹಿತ್ಯದ ಜ್ಞಾನ ಪ್ರಾಪ್ತಿಯಾಗಿರುವ ಕಾರಣ ನಾವು ಧರ್ಮಗುರು ಬಸವಣ್ಣನವರನ್ನು ಎತ್ತಿನ ಆಕಾರದಲ್ಲಿ ಪೂಜಿಸುವುದಕ್ಕಿಂತಲೂ ಮಾನವಾಕಾರದಲ್ಲಿ ಪೂಜಿಸುವುದೇ ಶ್ರೇಯಸ್ಕರ. ಏಕೆಂದರೆ ಪ್ರಾಣಿಯ ಸ್ತರಕ್ಕಿಂತಲೂ ಮಾನವ ಮೇಲ್ ಸ್ತರದವನು 1.ಮೊಟ್ಟಮೊದಲಿಗೆ ಬಸವಣ್ಣನ ಗುಡಿಗಳಲ್ಲೆಲ್ಲ ಐತಿಹಾಸಿಕ ಬಸವಣ್ಣನವರ ಎರಡು ಭಾವಚಿತ್ರಗಳನ್ನು ಹಾಕಬೇಕು.

1. ಗರ್ಭಗುಡಿಯಲ್ಲಿ 2. ಗರ್ಭಗುಡಿಯ ಬಾಗಿಲಿನ ಮೇಲೆ.
2. ನಂದಿ ಮೂರ್ತಿ ತಗೆದು ಅಲ್ಲಿ ಮಾನವಾಕಾರದ-ಅಭಯ ಹಸ್ತದ ಬಸವ ಗುರು ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು.
3. ಒಂದು ವೇಳೆ ಮೂಢ ಭಕ್ತರು ಅಜ್ಞಾನದಿಂದ ನಂದಿಯ ಮೂರ್ತಿಯನ್ನು ತೆಗೆಯಲು ಒಪ್ಪದೆ ವಿರೋಧಿಸಿದರೆ, ಆಗ ಅದನ್ನು ಹಾಗೇ ಬಿಟ್ಟು ಅದರ ಮುಂದೆ ಬಸವಣ್ಣನವರ ಮೂರ್ತಿ ಅಥವಾ ಭಾವಚಿತ್ರವನ್ನಿಡಬೇಕು. ನಿತ್ಯ ಪೂಜೆ, ವಾರದ ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗಾರ್ಚನೆ ಮುಂತಾದ್ದನ್ನು ಮಾಡುತ್ತ ಜನರಿಗೆ ಸಂಸ್ಕಾರ ಕೊಡಬೇಕು.

- **ಶಿವಕುಮಾರ ಡಾಕುಳಗೆ, ರಾಷ್ಟ್ರಕಲ್ಯಾಣ ವಿದ್ಯಾರ್ಥಿಗಣ.** - ಕೆಲವು ವಿರಕ್ತ ಸ್ವಾಮಿಗಳು ಕಾವಿಯ ನಿಲುವಂಗಿ ಧರಿಸುತ್ತಾರೆ. ಪೇಟವೂ ಕಾವಿ ಆದರೆ ಹೆಗಲಿನ ಮೇಲೆ ಹಾಕಿರುವ ಒಂದು ವಸ್ತ್ರ ಮಾತ್ರ ಬಿಳಿಯದಿರುತ್ತದೆ. ಹೀಗೇಕೆ? ಆ ಟವೆಲ್ಲಿಗೆ ಹಾಕಲು ಕಾವಿ ಬಣ್ಣ ಕಮ್ಮಿ ಬಿದ್ದಿರುವುದೆ? ಅಥವಾ ಅದರಲ್ಲೇನಾದರು ವಿಶೇಷ ಅರ್ಥವಿದೆಯೆ?

★ ಬೆಕ್ಕನ್ನು ಪಂಜರದಲ್ಲಿ ಹಾಕಿ ಮದುವೆ ಮಾಡಿದ ಕಥೆ ನಿಮಗೆ ಗೊತ್ತಿದೆಯೆ ?, ಹಳ್ಳಿಯ ಓರ್ವ ಗೌಡರ ಮನೆಯಲ್ಲಿ ಬೆಕ್ಕು ಬಹಳ ಇದ್ದವು. ಎಮ್ಮೆ, ಹಸು ಪುಷ್ಕಳವಾಗಿ ಹಾಲು ಹಿಂಡುತ್ತಿದ್ದವು . ಹೀಗಾಗಿ ಹಾಲಿನ ಕೊರತೆ ಇಲ್ಲದ ಕಾರಣ ಬೆಕ್ಕು ಸಾಕಿದ್ದರು. ಮನೆಯಲ್ಲಿ ಗೌಡರ ಮಗಳ ಮದುವೆ ಏರ್ಪಾಡಾಯಿತು. ತಂದೆ ಮಾಡುವ ಕ್ರಿಯೆಗಳನ್ನೆಲ್ಲ ಮಗ ನೋಡುತ್ತಿದ್ದ. ಆಹ್ವಾನ ಪತ್ರ ಮುದ್ರಣವಾಯಿತು, ನೆಂಟರಿಷ್ಟರಿಗೆ ಹೋದವು. ಚಪ್ಪರ ಸಿದ್ದವಾಯಿತು. ಮನೆಯಲ್ಲಿದ್ದ ಬೆಕ್ಕು ಏನಾದರು ಅನಾಹುತ ಅಮಂಗಲ ಮಾಡಿ ಬಿಟ್ಟಾವೆಂದು ಗೌಡರು ಒಂದು ಕಬ್ಬಿಣದ ಪಂಜರ ಮಾಡಿಸಿ ಬೆಕ್ಕು ಕೂಡಿಹಾಕಿ, ಮಗಳ ಮದುವೆ ಪೂರೈಸಿದರು. ಗೌಡರ ನಂತರ,ಗೌಡರ ಮಗ ಮನೆಯ ಯಜಮಾನನಾದ. ಅವನ ಮಗಳ ಮದುವೆ ಮಾಡಬೇಕಾದಾಗ ತನ್ನ ತಂದೆ ಮಾಡಿದ್ದ ವಿಧಿಗಳನ್ನೆಲ್ಲ ನೆನಪಿಸಿಕೊಂಡ. ಎಲ್ಲಾ ಆಯಿತು, ಆದರೆ ಮನೆಯಲ್ಲಿ ಬೆಕ್ಕುಗಳಿರಲಿಲ್ಲ ಪಕ್ಕದ ಹಳ್ಳಿಗಳಿಂದ ಬೆಕ್ಕು ತರಿಸಿ, ಕಬ್ಬಿಣದ ಪಂಜರ ಮಾಡಿಸಿ ಅವನ್ನು ಕೂಡಿಹಾಕಿ, ನಂತರ ಮಗಳಿಗೆ ತಾಳಿ ಕಟ್ಟಿಸಲು ಪುರೋಹಿತರಿಗೆ

ತಿಳಿಸಿದ. ತಮ್ಮ ಅಪ್ಪ ಮಾಡಿದ್ದನ್ನು ಯಾಂತ್ರಿಕವಾಗಿ ಮಗ ಮಾಡಿದನೇ ಹೊರತು ಅದರ ಅಗತ್ಯತೆ ಕುರಿತು ಆಲೋಚಿಸಲಿಲ್ಲ.ಅಪ್ಪನಿಗೆ ಅದು ಅವಶ್ಯಕತೆಯಾಗಿತ್ತು. ಮಗನದು ಅನವಶ್ಯಕ ಅನುಕರಣೆಯಾಯಿತು.

ಬಹುಶಃ ಯಾರಾದರೂ ಸ್ವಾಮಿಗಳಿಗೆ ಬಿಳಿಯ ವಸ್ತ್ರ (ಟವೆಲ್)ವೊಂದನ್ನು ಕೊಟ್ಟು ಹಾಕ್ಕಳ್ಳಿ ಗುರುಗಳೇ ಎಂದು ಒತ್ತಾಯಿಸಿರಬಹುದು ಅಥವಾ ಬಣ್ಣವು ಇಲ್ಲದ್ದರಿಂದ ಅವಸರದಲ್ಲಿ ಹಾಕಿಕೊಂಡಿರಬಹುದು. ಆದರೆ ಅದನ್ನು ಅವರ ಶಿಷ್ಯರು ಅನುಕರಿಸುವುದು, ಅವರನ್ನು ಓಲೈಸಲು ಇತರರು ಕಾವಿ ಕಪನಿಯ ಮೇಲೆ ಬಿಳಿಯ ವಸ್ತ್ರವೊಂದನ್ನು ಹಾಕಿಕೊಂಡಿರುವುದು ಅಸಂಬದ್ಧವೇ ಸರಿ. ಅಥವಾ ನೀವು ಸಂದೇಹಿಸಿರುವಂತೆ ಏನಾದರೂ ವಿಶೇಷ ಅರ್ಥವಿರಬಹುದು.ಶರಣ ಮಡಿವಾಳ ಮಾಚಿದೇವರು ಹೇಳುತ್ತಾರೆ, " ಭಕ್ತರು ಅರ್ಥಾತ್ ಗೃಹಸ್ಥರು ಧವಳ(ಬಿಳಿಯ)ವಸ್ತ್ರವನ್ನುಡಬೇಕು ವಿರಕ್ತರು ಕಾಷಾಯ ವಸ್ತ್ರವನ್ನುಡಬೇಕು" ಎಂದು. ಬಹುಶಃ ಇವರು ಅರ್ಧಕಾವಿ, ಅರ್ಧಬಿಳಿ ಹಾಕಿ ನಾವು ಅತ್ತಲೂ ಉಂಟು ಇತ್ತಲೂ ಉಂಟು ಎಂದು ಗೂಢವಾಗಿ ಭಕ್ತರಿಗೆ ಹೇಳುತ್ತಿರಬಹುದೆ? ಹಾಗೆ ಧರಿಸುವವರನ್ನೇ ಕೇಳಿ ನೋಡಿರಿ.

ಛಿದ್ರಪ್ಪ ದುರ್ಗಂಧ, ಅಮರಾವತಿ.-ಒಬ್ಬರು ಮಹಾಸ್ವಾಮಿಗಳಿದ್ದಾರೆ. ಅವರ ಆಶ್ರಯದ ಸಂಸ್ಥೆ ತೆರೆದರೆ, ನಡೆಸಿಕೊಂಡು ಹೋದರೆ ಸಾಕಷ್ಟು ಹಣ ಕೊಡುತ್ತಾರೆ. ನೀವು ರಾಷ್ಟ್ರೀಯ ಬಸವ ದಳಗಳ ಶಾಖೆ ತೆರೆದರೆ, ನಡೆಸಿಕೊಂಡು ಹೋದರೆ ಎಷ್ಟು ಹಣ ಕೊಡುತ್ತೀರಿ ? ಮಹಾಸ್ವಾಮಿಗಳಿಂದಾಗಿ ಎಷ್ಟೋ ನಿರುದ್ಯೋಗಿಗಳಿಗೆ ನಾಲ್ಕು ಕಾಸು ಸಿಗುವಂತಾಗುತ್ತದೆ. ಅದಕ್ಕಿಂತ ಜಾಸ್ತಿ ಕೊಟ್ಟರೆ ನೀವು ಹೇಳುವ ಸಂಸ್ಥೆ ನಡೆಸುತ್ತೇವೆ.

★ ನಾವು ನಿರೀಕ್ಷಿಸುವುದು ಸಮರ್ಪಣ ಮನೋಭಾವ, ಸೇವಾಭಾವವನ್ನು. ಒಳ್ಳೆಯ ಕಾರ್ಯಗಳು ಧನಾಧಾರಿತವಾಗಿ ನಡೆಯವು. ಸೇವಾಧಾರಿತವಾಗಿ ನಡೆಯುತ್ತವೆ. ನಿಮ್ಮ ನಿರುದ್ಯೋಗಕ್ಕೆ, ಆರ್ಥಿಕ ಅನಾನುಕೂಲತೆಗೆ ಸಹಕಾರಿಯಾಗುತ್ತಿದ್ದರೆ ಯಾವುದೇ ಉದ್ಯೋಗ ಮಾಡಿರಿ, ಸಂತೋಷ ; ಆದರೆ ದುರ್ಜನರು ಕೊಡುವ ಹಣದ ಆಸೆಗಾಗಿ ಇನ್ನಿತರರ ಒಳ್ಳೆಯ ಕೆಲಸಗಳಿಗೆ ಅಡ್ಡಿ ಮಾಡುವ ಹೀನಮಟ್ಟಕ್ಕೆ ಇಳಿಯಬೇಡಿರಿ. ಪಾಪವು ಒಂದೇ ದಿನಕ್ಕೆ ನಿಮ್ಮನ್ನು ತಿಂದು ಹಾಕದಿದ್ದರೂ ಅದು ಬೆನ್ನು ಹತ್ತಿದ ಬೇತಾಳ ಎಂದರಿತು ವಿಘ್ನ ಸಂತೋಷಿಗಳಾಗದೆ ಇರುವ ಸಂಸ್ಕೃತಿ ಕಲಿಯಿರಿ. ಅದಕ್ಕೇ ಧರ್ಮಪಿತರು ಹೀಗೆ ಹೇಳಿರುವುದು:

ದೂಷಕನವನೊಬ್ಬ ದೇಶವ ಕೊಟ್ಟಡೆ
ಆಸೆ ಮಾಡಿ ಅವನ ಹೊರೆಯಲ್ಲಿರಬೇಡ
ಮಾದಾರ ಶಿವಭಕ್ತನಾದರೆ ಆತನ
ಹೊರೆಯಲ್ಲಿಪ್ಪುದು ಭೃತ್ಯನಾಗಿಪ್ಪುದು ಕರಲೇಸಯ್ಯ
ತೊತ್ತಾಗಿಪ್ಪುದು ಕರಲೇಸಯ್ಯ !
ಕಾಡ ಸೊಪ್ಪು ತಂದು ಓಡಿನಲ್ಲಿ ಹುರಿದಿಟ್ಟುಕೊಂಡು
ಕೂಡಿಕೊಂಡಿಪ್ಪುದು ಲಿಂಗದೇವನ ಶರಣರ. ಬ.ವ.ದೀ 138.

ಚಂದ್ರಿಕಾ ನಟರಾಜ್, ತುಮಕೂರು.- ಚಿತ್ರದುರ್ಗ ಸ್ವಾಮಿಗಳ ಕುಕೃತ್ಯಗಳ ಬಗ್ಗೆ ಕಲ್ಯಾಣ ಕಿರಣದಲ್ಲಿ ಬರೆಯದಿರುವುದೇ ಒಳ್ಳಿತಲ್ಲವೇ ? ಅದಕ್ಕಾಗಿ ಶ್ರೀ ರವಿ ಬೆಳಗೆರೆಯವರ ಹಾಯ್ ಬೆಂಗಳೂರಿನಂತಹ ಪತ್ರಿಕೆಗಳಿರುತ್ತವೆ. ಅವು ಧೈರ್ಯವಾಗಿ ಮಠದ ಕುಕೃತ್ಯದ ಪೂರ್ಣ ವಿವರ ನೀಡುತ್ತವೆ. ಬರೆದು, ಕಲ್ಯಾಣ ಕಿರಣದ ಪಾವಿತ್ರ್ಯ ಕೆಡುವುದು ಬೇಡ ಎಂದು ನಮ್ಮಭಿಪ್ರಾಯ.

★ "ಚೇಳು ಕಡಿದು ಮೂಲೆ ಸೇರಿತು." ಎಂಬಂತೆ ಚಿತ್ರದುರ್ಗ ಬೃಹನ್ಮಠದ ಶ್ರೀಗಳು ನಮ್ಮ ಪ್ರವಚನಕಾರರಿಗೆ ವಿಪರೀತ ಕಿರುಕುಳ ನೀಡುತ್ತ, ಮತ್ತೆ ಸಂಭಾವಿತರಂತೆ ಮಾತನಾಡುವರು. ಸಿದ್ಧಪಡಿಸಿದ ವಾಕ್ಯಗಳು ಪ್ರಮುಖ ಪತ್ರಿಕೆಗಳಲ್ಲಿ ಆದರ್ಶದ ಮಳೆ ಸುರಿಸುವುದು ನೋಡಿದರೆ ಎಂಥಾ ಸಾಧು ಸ್ವಭಾವದವರು ಎಂದು ಮುಗ್ಧರು ತಲೆದೂಗಬೇಕು. ಆದರೆ ಅವರು ಹೇಗೆ ಕುತಂತ್ರ, ದೌರ್ಜನ್ಯ ಮಾಡುತ್ತಾರೆ ಎಂಬುದನ್ನು ಜನರಿಗೆ ತಿಳಿಯಪಡಿಸುವುದಾದರೂ ಇನ್ನೆಂತು ? ಕಡೆಗೆ ನಮ್ಮ ಅಭಿಮಾನಿಗಳು, ಭಕ್ತರಿಗಾದರೂ ತಿಳಿಯಬೇಕಲ್ಲವೆ ? ಇಲ್ಲದಿದ್ದರೆ ಪ್ರಮುಖ ಪತ್ರಿಕೆಗಳಿಗೆ ಅವರು ಕೊಡುವ ಸಿದ್ಧಪಡಿಸಿದ ವರದಿ ನೋಡಿ ಜನರು ಅವರ ಮಾತೇ ಸತ್ಯ ಎಂದು ಭಾವಿಸುತ್ತಾರೆ. ಅವರ ಬಗ್ಗೆ ಹಬ್ಬಿರುವ ವದಂತಿ ಬಹುಮುಖಿಯಾಗಿದೆ. ನಮಗ್ಯಾಕೆ ಅದೆಲ್ಲ ಎಂದು ನಮ್ಮ ಸಂಸ್ಥೆಗೆ ಸಂಬಂಧಿಸಿ ಅವರು ಕೊಡುವ ತೊಂದರೆ ಕುರಿತು ಮಾತ್ರ ಕಲ್ಯಾಣ ಕಿರಣದಲ್ಲಿ ಬರೆಯಲಾಗುತ್ತಿದೆ. ನಮ್ಮದು ಅವರಂತೆ ಆಕ್ರಮಣಕಾರಿ ಧೋರಣೆಯಲ್ಲ ಆತ್ಮ ರಕ್ಷಣೆಯ ಪ್ರಯತ್ನ ಮಾತ್ರ.

★ ಚಿತ್ರದುರ್ಗದ ಬೃಹನ್ಮಠವು ಸಾಲದ ಸುಳಿಯಲ್ಲಿ ಸಿಕ್ಕಿದ್ದು, ಅದರ ಆಸ್ತಿ-ಪಾಸ್ತಿಗಳನ್ನೆಲ್ಲ ಒಂದೊಂದಾಗಿ ಆಡಳಿತಾಧಿಕಾರಿಗಳು ಮಾರುತ್ತಿದ್ದಾರೆ ಎಂದು ವದಂತಿ ಹಬ್ಬಿದೆ. ಈ ಬಗ್ಗೆ ಒಂದು ವಾರ ಪತ್ರಿಕೆಯಲ್ಲೂ ಅಗ್ರಲೇಖನ ಮುದ್ರಣಗೊಂಡಿದೆ. ಇದು ದಿಟವೋ ಸಟೆಯೋ, ನಿಮ್ಮ ಅಭಿಪ್ರಾಯವೇನು ?

★ ಸದ್ಯದಲ್ಲಿ ಸಾಲದಲ್ಲಿ ಸಿಕ್ಕಿದೆಯೋ ಇಲ್ಲವೊ ; ಕೆಲವರು ಮಠದ ಆಸ್ತಿಗಳನ್ನು ಮಾರಿ ವೈಯಕ್ತಿಕವಾಗಿ ಆಸ್ತಿ ಪಾಸ್ತಿ ಮಾಡಿಕೊಂಡು ಗಟ್ಟಿಯಾಗುತ್ತಿದ್ದಾರೆ ಎಂಬ ವದಂತಿಯೂ ನಮ್ಮ ಕಿವಿ ತಲ್ಪಿದೆ. ಆದರೆ ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ. ರಾಷ್ಟ್ರೀಯ ಬಸವ ದಳಗಳನ್ನು ಒಡೆದು ತಮ್ಮ ಬಸವ ಕೇಂದ್ರದ ಕಡೆಗೆ ಜನರನ್ನು ಆಕರ್ಷಿಸಲು ಬೃಹನ್ಮಠದವರು ಹಣ ಚೆಲ್ಲಿದ ರೀತಿ, ಅದೂ ಮುಖ್ಯವಾಗಿ ಬೀದರ ಜಿಲ್ಲೆಯಲ್ಲಿ ಮತ್ತು ಧಾರವಾಡ-ಹುಬ್ಬಳ್ಳಿಗಳಲ್ಲಿ ನಡೆಯುತ್ತಿದ್ದ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನ ನಿಲ್ಲಿಸಲು ಅವರು ಹಣ ಖರ್ಚು ಮಾಡಿದ ಪರಿ ನೋಡಿ ನಾನಂತೂ ಸ್ತಂಭೀಭೂತಳಾಗಿದ್ದೇನೆ. ಅವರಿಗೆ ಇಷ್ಟು ದುಂದು ವೆಚ್ಚ ಮಾಡಲು ಹಣ ಎಲ್ಲಿಂದ ಬರುತ್ತದೆ ಎಂದು ಚಕಿತಳಾಗಿದ್ದೇನೆ. ಸ್ವಾಮಿಗಳು ಈಗಲಾದರೂ ತಿಳುವಳಿಕೆ ಹೊಂದುವುದು ಒಳ್ಳಿತು. ಹೊಲಸು ಬಿದ್ದಲ್ಲಿ ನೊಣಗಳು ಬರುತ್ತವೆಯೇ ವಿನಾ ಜೇನ್ನೊಣಗಳಲ್ಲ; ಹಾಗೆ ಹಣ ಚೆಲ್ಲಿ ಒಳ್ಳೆಯ ಜನರನ್ನು ಆಕರ್ಷಿಸಲು ಸಾಧ್ಯವಿಲ್ಲ. ಈವರೆಗೆ ತಾವು ಮಾಡಿರುವ ಕುಕಾರ್ಯಗಳ ಬಗ್ಗೆ ಪಶ್ಚಾತ್ತಾಪ ಪಟ್ಟು ಪ್ರಾಮಾಣಿಕವಾಗಿ ಒಳ್ಳೆಯ ಕೆಲಸ

ಮಾಡಿದರೆ ಅವರು ಹಣ ಗಳಿಸಲಾಗದಿದ್ದರೂ ಸಾತ್ವಿಕ ಜನರನ್ನು ಗಳಿಸಿಕೊಳ್ಳಬಲ್ಲವರಾಗುತ್ತಾರೆ ಎಂದು ಹೇಳಬಯಸುತ್ತೇನೆ.

ಹೆಸರು-------------. - ತಿರುಪತಿ ತಿಮ್ಮಪ್ಪನಿಗೆ ಹರಸಿಕೊಂಡು ತಲೆಕೂದಲು ಕೊಡುವ, ಅದೂ ಸ್ತ್ರೀ-ಪುರುಷ ಎಂಬ ಭೇದವಿಲ್ಲದೆ ಬೋಳಾಗುವ ವಿಚಿತ್ರ ಪದ್ಧತಿ ಇದೆ. ಇದು ಏಕೆ ಬಂದಿರಬಹುದು ?

★ ಬರೀ ಅಸಂಬದ್ಧ ಕಥೆಗಳನ್ನು ಜನರು ಹೇಳುವರು. ಇಷ್ಟೇ ಅಲ್ಲ ಹೀಗೊಂದು ಆಖ್ಯಾಯಿಕೆ ಇದೆ. ತಿರುಪತಿ ವೆಂಕಟೇಶ್ವರ ಮೂಲತಃ ವೀರಭದ್ರನ ಮೂರ್ತಿ. ವೈಷ್ಣವ ಆಚಾರ್ಯರೊಬ್ಬರ ಕಾಲದಲ್ಲಿ ಅದು ಬದಲಾವಣೆ ಹೊಂದಿತು. ಅದಕ್ಕೇ ವೀರಭದ್ರನ ಲಕ್ಷಣಗಳು ಕಾಣಬಾರದೆಂದು ವೆಂಕಟೇಶ್ವರನಿಗೆ ಅಕರಾಳ ವಿಕರಾಳವಾಗಿ ನಾಮ ಬಡಿಯುವುದು ಎಂದು ಕೆಲವರ ವಾದ.

ಅದೇನೇ ಇರಲಿ. ನನ್ನ ಊಹೆ ಅವರೇ ಹೇಳುವ ಕಥೆಯ ಪ್ರಕಾರ ಹೀಗಿದೆ. ವೆಂಕಟಪ್ಪ (ತಿಮ್ಮಪ್ಪ) ಎಂಬಾತ ಪಾಳೆಯಗಾರ. ಆತ ಓರ್ವ ಕನ್ಯೆಯನ್ನು(ಪದ್ಮಾವತಿ)ಪ್ರೀತಿಸಿದ. ಆ ಕನ್ಯೆಯ ತಂದೆ ವಿಪರೀತ ಕನ್ಯಾಶುಲ್ಕ (ಹಿಂದಿನ ಕಾಲದಲ್ಲಿ ದ್ರಾವಿಡ ಸಮಾಜದಲ್ಲಿ ವರದಕ್ಷಿಣೆ ಬದಲು ಹೆಣ್ಣಿನ ತಂದೆಗೇ ಕನ್ಯಾಶುಲ್ಕ ಕೊಟ್ಟು ಮದುವೆ ಮಾಡಿಕೊಳ್ಳಬೇಕಿತ್ತು.) ಕೇಳಿದಾಗ ಓರ್ವ ಶ್ರೀಮಂತ (ಕುಬೇರ)ನಿಂದ ಸಾಲ ಮಾಡಿ, ಕನ್ಯಾಶುಲ್ಕ ತೆತ್ತು ಮದುವೆಯಾದ. ಸಾಲದ ಹಣಕ್ಕಾಗಿ ಜನರನ್ನು ಪೀಡಿಸತೊಡಗಿದ. ಪಾಪ ! ಆ ಸಾಲವನ್ನು ಈಗಿನ ಮೂಢಭಕ್ತರು ಸ್ವಯಂ ಪ್ರೇರಣೆಯಿಂದ ಕಾಣಿಕೆ ಸುರಿದು ತೀರಿಸುತ್ತಿರುವರು.

ಅದಿರಲಿ, ಇದಕ್ಕೂ ತಲೆ ಕೂದಲು ಕೊಡುವುದಕ್ಕೂ ಏನು ಸಂಬಂಧ ? ಪ್ರಶ್ನೆ ಹಾಗೆಯೇ ಉಳಿಯಿತಲ್ಲ ಎಂದು ಅವಸರಿಸಬೇಡಿರಿ. ಆ ಸಾಲ ತೀರಿಸಲು ಆ ವೆಂಕಟಪ್ಪ ತನ್ನ ಪಾಳೆಯ ಪಟ್ಟಿನ ಜನರಿಂದ ಒತ್ತಾಯದಿಂದ ತಲೆಗಂದಾಯ ವಸೂಲಿ ಮಾಡುತ್ತಿದ್ದ. ಜನರು ಕೊಟ್ಟುಕೊಟ್ಟು ಬೇಸತ್ತು "ಒಮ್ಮೆ ಕಾಣಿಕೆ ನೀಡಿಧಾಗ ಕೂದಲು ಕೊಡುತ್ತೇವೆ ಅದೇ ಗುರುತು. ಆ ಕೂದಲು ಸ್ವಲ್ಪ ಉದ್ದ ಬೆಳೆಯುವವರೆಗಾದರು ಸಮಯ ಕೊಡಿರಿ." ಎಂದು ಕಾಣಿಕೆ ನೀಡಿದ ಗುರುತಾಗಿ ಅವರು ತಲೆ ಬೋಳಿಸಿಕೊಳ್ಳುತ್ತಿದ್ದಿರಬಹುದು. ಕಾಲಾನಂತರದಲ್ಲಿ ಇದೇ ಒಂದು ಸಂಪ್ರದಾಯವಾಗಿ ಬಿಟ್ಟಂತೆ ತೋರುತ್ತದೆ. ದೇವರಿಗೆ ತಲೆಗೂದಲು ಕೊಡುವ ಮೂಢರ ಸಂಖ್ಯೆ ಬೆಳೆಯುತ್ತಲಿದೆ. ಉದ್ದುದ್ದ 3 ನಾಮ ಹಾಕುವುದನ್ನು ಬೆರಳು ಹಿಡಿದು ತೋರಿಸಿ ಅವನು ತಿರುಪತಿ ನಾಮ ಹಾಕಿದ ಅಂದರೆ ಮೋಸ ಮಾಡಿದ ಎಂದು ಇಂದೂ ವ್ಯಂಗ್ಯವಾಡುವುದು ದಟ್ಟವಾಗಿ ರೂಢಿಯಲ್ಲಿದೆ. ಇದರಿಂದ ತಿಳಿಯುವುದೇನೆಂದರೆ ವೆಂಕಟಪ್ಪನ ಸಹಚರರು ಜನರನ್ನು ಹಿಡಿದು ಒತ್ತಾಯದಿಂದ ದುಡ್ಡು ಕಿತ್ತಾಗ ಅವರುಗಳ ತಲೆ ಬೋಳಿಸಿ, ನಾಮವನ್ನು ಹಾಕಿ ಕಳಿಸುತ್ತಿದ್ದರು. ಅಂಥವರನ್ನು ನೋಡಿ ಇತರರು ತಿರುಪತಿಗ್ಹೋಗಿ ತಲೆ ಬೋಳಿಸಿಕೊಂಡು, ನಾಮ ಹಾಕಿಕೊಂಡು ಬಂದ ಎನ್ನುತ್ತಿದ್ದರು. ಈ ಮೂಢರ ದೇಶದಲ್ಲಿ ಅದೀಗ ಒಂದು ಸಂಪ್ರದಾಯವೇ ಆಗಿಬಿಟ್ಟಿದೆ. ಇದು ನಾನು ಊಹಿಸಿರುವ ಕಥೆ. ಇದಕ್ಕೂ ಬೇರೆಯಾದ ಕಥೆ, ವಿವರಣೆ ಇದ್ದರೆ

ವೆಂಕಟೇಶ್ವರನ ಭಕ್ತರು ತಿಳಿಸಿದರೆ ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು.

ಗಂಗಾಧರ್ ಆಣೇಕಟ್ಟೆ, -ನಾವು ನೊಳಂಬರು. ಕೆಲವರು ಸೋಮವಾರ, ಶನಿವಾರ ಎರಡೂ ಆಚರಿಸುವರು. 'ನಾವು ತಿರುಪತಿ ತಿಮ್ಮಪ್ಪನ ಒಕ್ಕಲು ಎಂದು ಶನಿವಾರ ಆಚರಿಸಿ, ನಾಮ ಸಹ ಇಟ್ಟುಕೊಳ್ಳುವರು. ಸೋಮವಾರ ಸಿದ್ಧರಾಮೇಶ್ವರರ ವಾರವೆಂದು ಆಚರಿಸುವರು. ಹೀಗೇಕೆ ?

★ ನೊಳಂಬರು ಒಂದು ರಾಜಮನೆತನಕ್ಕೆ ಸೇರಿದ ಜನರು. ಅನೇಕ ಬುಡಕಟ್ಟು, ಬಣ, ಜಾತಿ ಗುಂಪುಗಳಿರುವಂತೆ ಇವರೂ ಇರುವಾಗ ಬಸವ ಯೋಗಿ ಸಿದ್ಧರಾಮೇಶ್ವರರ ಪ್ರಭಾವದಿಂದ ಇಷ್ಟಲಿಂಗದೀಕ್ಷೆ ಪಡೆದು ಲಿಂಗಾಯತರಾದರು. ದೀಕ್ಷೆ ಆದ ಮೇಲೆ "ಹಿಂದಿನದನ್ನು ತೊರೆದು ನಿಜ ಧರ್ಮ ಹಿಡಿಯಬೇಕು." -ಸ್ವತಃ ಸಿದ್ಧರಾಮೇಶ್ವರರೇ ಬಹುದೇವತೋಪಾಸನೆ ತೊರೆದು ಏಕಲಿಂಗ ನಿಷ್ಠಾಪರರಾದರು. ಕ್ರೈಸ್ತ ಪಾದ್ರಿ, ಮುಸಲೀಮ್ ಮೌಲ್ವಿಗಳು ತಮ್ಮ ಚರ್ಚ್, ಮಸೀದಿಗಳಲ್ಲಿ ತರಬೇತಿ ಕೊಟ್ಟಂತೆ ಲಿಂಗಾಯತ ಮಠಾಧೀಶರು ಲಿಂಗಾಯತರಿಗೆ ತರಬೇತಿ ಕೊಡಲಿಲ್ಲದ್ದರಿಂದಲೂ ತಾವೇ ಸ್ವತಃ ವಚನ ಸಾಹಿತ್ಯಕ್ಕೆ ವಿರುದ್ಧವಾದ ಆಚರಣೆಗಳಲ್ಲಿ ತೊಡಗಿರುವುದರಿಂದಲೂ ಲಿಂಗಾಯತರು ತಪ್ಪು ತಪ್ಪು ಆಚರಣೆಗಳಿಂದ ಇಂದು ಸಂಭ್ರಮಿಸುತ್ತಿರುವರು. ದಿನ ನಿತ್ಯ ಕೆಲವು ಮಠಾಧೀಶರಿಂದ ನಾವು ದೂಷಿಸಿಕೊಂಡರೂ ಚಿಂತೆಯಿಲ್ಲ, ನಿಜವಾದ ಸಂಗತಿಗಳನ್ನು ಕಠೋರವಾಗಿ ಹೇಳುತ್ತಿದ್ದೇವೆ.

ಸೋಮಶೇಖರಪ್ಪ, ಯಳನಾಡು.- ಲಿಂಗೈಕ್ಯರ ಶವ ಸಂಸ್ಕಾರದ ಸಮಯದಲ್ಲಿ ಕೆಲವೊಂದು ಆಚರಣೆಗಳಿವೆ. ಇವೆಲ್ಲ ನಮ್ಮ ಧರ್ಮಕ್ಕೆ ಸೂಕ್ತವೇ ? ಎಂಬ ಸಂದೇಹ ಬಂದಿದೆ.

1. ಲಿಂಗೈಕ್ಯರನ್ನು ಸಮಾಧಿ ಮಾಡಿ ಮಣ್ಣು ಏರಿಸಿದ ಮೇಲೆ ಆ ಗುಡ್ಡೆ ಮೇಲೆ ಅಯ್ಯನವರನ್ನು, ಸ್ವಾಮಿಗಳು ಸಿಕ್ಕರೆ ಅವರನ್ನು ನಿಲ್ಲಿಸಿ ಪಾದಪೂಜೆ ಮಾಡಿಸಲಾಗುವುದು. ಆಗ ಪೂಜೆ ಮಾಡುವವರು ಎಡಗೈಯಿಂದ ಪೂಜೆ ಮಾಡುತ್ತಾರೆ, ಬಲಗೈ ಬಳಕೆ ನಿಷಿದ್ಧ. ಏಕೆ ?

2. ಶವವನ್ನು ಸಮಾಧಿ ಮಾಡಲು ಒಯ್ಯುವಾಗ ಯಾರು ಕೆಲವರು ಆರಂಭದಲ್ಲಿ ವಿಮಾನವನ್ನು ಹೊರುವರೋ ಅವರೇ ಕಡೆಯ ತನಕ ಹೊರಬೇಕು. ಬೇರೆಯವರು ಹೊರುವುದಿಲ್ಲ.

3. ದಾರಿಯಲ್ಲಿ 3 ಕಡೆ ಇಳಿಸಿ ಕಲ್ಲುಗಳನ್ನು ಗುಡ್ಡೆಹಾಕಿ ಮೇಲೆ ಅಕ್ಕಿಕಾಳು ಹಾಕಿ, ನೀರು ಸುರಿದು ಮತ್ತೆ ಎತ್ತಿಕೊಂಡು ಸಾಗುವರು.

4. ಮಣ್ಣು ಮುಚ್ಚಿ ಆ ಗುದ್ದಲಿಯ ಕಾವನ್ನು ತೆಗೆದು, ತಿರುಗಾ ಮುರುಗಾ ಹಾಕಿ, ಮೂರು ಸಲ ಗುಡ್ಡೆ ಮೇಲೆ ಅತ್ತಿಂದ ಇತ್ತ ಎಡಗೈಯಲ್ಲಿ ಎಸೆದು ತೆಗೆದುಕೊಳ್ಳುವರು.

4. ದಾರಿಯಲ್ಲಿ ಸಾಗುವಾಗ ತೆಂಗಿನ ಕಾಯಿಯನ್ನು ಪಟಾರನೆ ನೆಲದ ಮೇಲೆ ಒಡೆಯುವರು. ಅದನ್ನು ನಿರ್ಗತಿಕರು ಆರಿಸಿಕೊಂಡು ಹೋಗುವರು. ಮಂಡಕ್ಕಿ ತೂರುವರು. ಯಾರೂ ತೆಗೆದುಕೊಳ್ಳಲು ಸಹ ಬರದಂತೆ ಅವು ಮಣ್ಣಿನಲ್ಲಿ ಬೆರೆಯುತ್ತವೆ. ಅದೇ ರೀತಿ ದುಡ್ಡು ತೂರುವರು.

5. ಗುರುಗಳು, ಮಠಾಧೀಶರನ್ನು ಬೀಳ್ಕೊಡುವಾಗ ಅವರ ವಾಹನಗಳ ಮುಂದೆ ತೆಂಗಿನ ಕಾಯಿ ರಪ್ಪನೆ ಒಡೆದು, ಕರ್ಪುರ ಹಚ್ಚಿ ನೆಲದ ಮೇಲೆ ನಮಸ್ಕಾರ ಮಾಡುವರು.

ಈ ಆಚರಣೆಗಳು ಸರಿಯೆ ?

★ ಬಹಳ ಉಪಯುಕ್ತ ಪ್ರಶ್ನೆ ಕೇಳಿದ್ದೀರಿ. ಗಣ ಧರ್ಮಗಳು ಒಬ್ಬೊಬ್ಬ ಮಹಾಪುರುಷರಿಂದ ರೂಪುಗೊಳ್ಳುವ ಮೊದಲು ಮಾನವ ಸಮಾಜದಲ್ಲಿ ಅನೇಕ ಬುಡಕಟ್ಟು(tribes), ಬಣ (clans), ಜಾತಿ (caste) ಇದ್ದವು. ಇವೆಲ್ಲವೂ ಹುಟ್ಟಿನಿಂದ ಮಾನವ ಮಾನವರನ್ನು ಮೇಲು ಕೀಳೆಂದು ವಿಂಗಡಿಸುವ ಅನಾಗರೀಕ ಪದ್ಧತಿಗಳಾದ್ದರಿಂದ ಧರ್ಮ ಸಂಸ್ಥಾಪಕ ಮಹಾ ಪುರುಷರು ಧರ್ಮದ ನೆರವಿನಿಂದ ಆ ಗುಂಪುಗಳನ್ನು ತಮ್ಮಲ್ಲಿ ಸೆಳೆದುಕೊಂಡರು. ಸದ್ಯದಲ್ಲಿ ಸರಿಯಾದ ತರಬೇತಿ ಕೊಡುತ್ತಿರುವ ಬೌದ್ಧ, ಜೈನ, ಕ್ರೈಸ್ತ, ಮುಸ್ಲಿಂ, ಸಿಖ್ ಧರ್ಮಗಳಲ್ಲಿ ಸೇರ್ಪಡೆಯಾದ ಆ ಬುಡಕಟ್ಟು, ಬಣ, ಜಾತಿಗಳವರು ತಮ್ಮ ಮೂಲಾಚರಣೆ, ಮೂಢ ನಂಬಿಕೆ ಬಿಟ್ಟು ಪ್ರವೇಶಿಸಿದ ಗಣ ಧರ್ಮದ ಆಚರಣೆ ಅಳವಡಿಸಿಕೊಂಡರು. ಲಿಂಗಾಯತ ಧರ್ಮದ ಧಾರ್ಮಿಕ ಸಂಹಿತೆ ವಚನ ಸಾಹಿತ್ಯವಿದ್ದರೂ ಅದು ಕ್ರೋಢೀಕರಣಗೊಂಡ ರೂಪದಲ್ಲಿ ಇಲ್ಲದಿರುವುದರಿಂದಲೂ, ಅದರ ಪ್ರತಿನಿಧಿಗಳಾದ ಮಠಾಧೀಶರು ಪ್ರಾಮಾಣಿಕವಾಗಿ ವಚನ ಸಾಹಿತ್ಯ ಬೋಧನೆ ಮಾಡದೆ ಇರುವುದರಿಂದಲೂ ಲಿಂಗಾಯತರು ವಿಲಕ್ಷಣ ಆಚರಣೆಗಳಲ್ಲಿ ತೊಡಗಿದ್ದಾರೆ.

ಲಿಂಗಾಯತ ಧರ್ಮಕ್ಕೆ ಹೊರತಾದ ಆಚರಣೆಗಳು ಎರಡು ಪ್ರಕಾರ

1. ಶಾಸ್ತ್ರೀಯ ಸಂಪ್ರದಾಯಗಳಾದ ವೈದಿಕ-ಶೈವ ಮಾರ್ಗದಿಂದ ಬಂದವು ಒಂದು ಬಗೆಯಾದರೆ,

2. ಧರ್ಮಾಂತರಗೊಳ್ಳುವ ಪೂರ್ವದಲ್ಲಿ ಇದ್ದ ಬುಡಕಟ್ಟು (tribal practice) ಮತ್ತು ಬಣಾಚರಣೆ(clan practices) ಇನ್ನೊಂದು ಬಗೆ. ಮೊದಲನೆಯವು ಪುರೋಹಿತರ ಸೃಷ್ಟಿಯಾದರೆ ಎರಡನೆಯವು ಅಜ್ಞಾನಿಗಳಾದ ಜನಾಂಗದ ಹಿರಿಯರ ಸೃಷ್ಟಿ.

ಉದಾಹರಣೆಗೆ : ಹೋಮ-ಹವನ, ಗಣಪತಿ ಪೂಜೆ ಮೊದಲನೆಯ ಬಗೆಯಾದರೆ ಪ್ರಾಣವಧೆ, ಎಡಗೈ ಪೂಜೆ, ಗುದ್ದಲಿ 3 ಸಲ ಎಡಗೈಯಿಂದ ಎಸೆಯುವುದು ಇತ್ಯಾದಿ ಎರಡನೆ ಬಗೆ. ನೀಲಗಿರಿ ಜಿಲ್ಲೆಯ ತೋಡ ಎಂಬ ಆದಿ ಬುಡಕಟ್ಟಿನವರ ಬಗ್ಗೆ ಸುಧಾದಲ್ಲಿ ಒಂದು ಲೇಖನ ಬಂದಿತ್ತು. ಈ ಜನ ಶುದ್ಧ ಸಸ್ಯಾಹಾರಿಗಳು. ಎಮ್ಮೆ ಸಾಕಾಣಿಕೆ, ಹಾಲು ಮಾರುವುದು ಕುಲ ಕಸುಬು. ಅವರಲ್ಲಿ ಯಾರಾದರೂ ಸತ್ತಾಗ ಒಂದು ಎಮ್ಮೆಯನ್ನೂ ಸಹ ಕಡಿದು ಸಮಾಧಿಯಲ್ಲಿ ಹಾಕುವರಂತೆ. ಇಲ್ಲಿ ಎಮ್ಮೆ ಹಾಲು ಕುಡಿದು, ಮಾರಿ ಬದುಕುವಂತೆ ಅಲ್ಲೂ ಸತ್ತಾತ ಎಮ್ಮೆ ಹಾಲಿನಿಂದ ಸುಖವಾಗಿರಲಿ ಎಂದು. ಈ ಬುಡಕಟ್ಟು ಆಚರಣೆ ಎಷ್ಟು ಭ್ರಾಂತ್ಯಾತ್ಮಕ ನೋಡಿರಿ. ಆ ಅಜ್ಞಾನಿ ಆದಿವಾಸಿಗಳ ವಿಷಯ ಬಿಡಿರಿ. ಶ್ರೀ ಐ. ಎಂ. ಮಗದುಮ್ ನಿವೃತ್ತ ಚೀಫ್ ಇಂಜಿನಿಯರ್ ತೀರಿಕೊಂಡಾಗ ಅವರ ವಿದ್ಯಾವಂತ, ವಿದೇಶಿ ಸಂದರ್ಶಿತ ಮಕ್ಕಳು ಸಮಾಧಿಯಲ್ಲಿ ಬೆಲೆ ಬಾಳುವ ಗಡಿಯಾರ, ರೇಡಿಯೋ, ಬಂಗಾರದ ಉಂಗುರ ಮುಂತಾದ್ದನ್ನು

ಹಾಕಿದರು.

ನೀವು ಹೇಳಿರುವ ಆಚರಣೆ ಬಣಾಚರಣೆ. ಇವು ಲಿಂಗಾಯತ ಸಮಾಜದಲ್ಲಿ ಎಲ್ಲ ಪ್ರದೇಶಗಳಲ್ಲೂ ಬಳಕೆಯಲ್ಲಿಲ್ಲ. ಆದ್ದರಿಂದ ಇಂದು ವೈಚಾರಿಕತೆಯಿಂದ ವಿಮರ್ಶಿಸಿ, ಲಿಂಗಾಯತ ಧರ್ಮಕ್ಕೆ ಹೊರತಾದ ಆಚರಣೆ ಕೈ ಬಿಡಬೇಕು.

1. ಸಾವಿನ ಬಗ್ಗೆ ವೈದಿಕ ಧರ್ಮದಲ್ಲಿರುವಷ್ಟು ಭಯ, ಭ್ರಾಂತಿ ಲಿಂಗಾಯತ ಧರ್ಮದಲ್ಲಿಲ್ಲ. ಪಂಚಸೂತಕಗಳಲ್ಲೊಂದಾದ ಮರಣ ಸೂತಕ ಆಚರಣೆ ಇಲ್ಲಿಲ್ಲ. ಶರಣರು ಸಾಯುವುದಿಲ್ಲ ಲಿಂಗೈಕ್ಯರಾಗುವರು ಅಂದರೆ ದೇವರಲ್ಲಿಗೆ ಸಾಗುವರು. ಅದಕ್ಕಾಗಿ ಪ್ರತಿಯೊಬ್ಬರೂ ಶವವನ್ನು ಒಯ್ಯುವಾಗ ಸಿದಿಗೆಗೆ ಹೆಗಲು ಕೊಡಬೇಕು. ಓಂ ಶ್ರೀ ಗುರುಬಸವಲಿಂಗಾಯ ನಮಃ ಮಂತ್ರ ಹೇಳುತ್ತ ಹೆಗಲುಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

2. ಶವಯಾತ್ರೆಯಲ್ಲಿ ಕುಡಿಯುವುದು, ಕೇಕೆ ಹಾಕುವುದು, ಕುಣಿದು ಕುಪ್ಪಳಿಸುವುದು ಹಲಗೆ ಬಾರಿಸುವುದು ಸಲ್ಲದು. ಕೇವಲ ಓಂ ಶ್ರೀ ಗುರುಬಸವಲಿಂಗಾಯ ನಮಃ ಮಂತ್ರ ಹೇಳುತ್ತ ಭಕ್ತಿ-ಶಾಂತಿಯಿಂದ ಸಾಗಬೇಕು.

3. ಪಟಾಕಿ ಸುಡಬಾರದು, ಮಂಡಕ್ಕಿ ಮುಂತಾದ್ದು ಎರಚಿ ಮಣ್ಣಲ್ಲಿ ಸೇರಿ ಹೋಗುವಂತೆ ಮಾಡಬಾರದು. ದಾರಿಯಲ್ಲಿ 3 ಬಾರಿ ಇಳಿಸಿ ಕಲ್ಲುಗುಡ್ಡೆ ಹಾಕಿ, ಮೇಲೆ ಅಕ್ಕಿ-ನೀರು ಹಾಕುವುದು ಅರ್ಥರಹಿತ. ಬಹುಶಃ ಮನೆಯಿಂದ ಸ್ಮಶಾನದವರೆಗೆ ಕೆಲವರೇ ಹೊರುವುದರಿಂದ ದಣಿವಾರಿಸಿಕೊಳ್ಳಲು ಹೀಗೆ ಮೂರು ಬಾರಿ ಇಳಿಸುವ ಆಚರಣೆ ರೂಢಿಗೆ ತಂದಿರಬಹುದು.

4. ಶವವನ್ನು ಸ್ಮಶಾನಕ್ಕೆ ಒಯ್ಯಲು ಎತ್ತುವ ಮೊದಲು ಮತ್ತು ಮುಚ್ಚಿದ ಗುಡ್ಡೆ ಮೇಲೆ ನಿಲ್ಲಿಸಿ ಜಂಗಮರ, ಸ್ವಾಮಿಗಳ ಪಾದಪೂಜೆ ಮಾಡುವ ಪದ್ಧತಿ ಇದೆಯಷ್ಟೆ. ಈ ಕಾಲದಲ್ಲಿ ಇದು ಸೂಕ್ತವಲ್ಲ. ಅದಕ್ಕಾಗಿ ಷಟ್ಕೋನ ಸಹಿತ ಬಸವ ಮುದ್ರೆಯನ್ನು ಇಟ್ಟು ಅದಕ್ಕೆ ಪೂಜೆ ಸಲ್ಲಿಸುವುದನ್ನು ನಾವು ಅಳವಡಿಸಿದ್ದು ಬಸವ ಧರ್ಮ ಸಂಸ್ಕಾರ ಪುಸ್ತಕದಲ್ಲಿ ಬರೆಯಲಾಗಿದೆ.

ಈ ಸಮಯದಲ್ಲಿ ಎಡಗೈಯಿಂದ ಪೂಜಿಸುವುದು ಶುದ್ಧಾಂಗ ತಪ್ಪು. ಏಕೆಂದರೆ ಸಾವು ಕೀಳು, ಭಯಾನಕ, ಸೂತಕ ಸಹಿತ. ಅದಕ್ಕಾಗಿ ಬಲಗೈಯಿಂದ ಪೂಜಿಸಬಾರದು. ಎಡಗೈ ಕೀಳು. ಆದ್ದರಿಂದ ಎಡಗೈಯಿಂದ ಪೂಜಿಸಬೇಕು ಎಂಬ ಭ್ರಾಂತಿ ಇಲ್ಲಿದೆ. ನಮಗೆ ಎಡಗೈಯೂ ಪವಿತ್ರವೇ ! ಅದು ನಿತ್ಯವೂ ಇಷ್ಟಲಿಂಗವನ್ನಿಟ್ಟು ಪೂಜಿಸುವ ಗದ್ದುಗೆ ತಾನೆ ? ಗುಡ್ಡೆ ಮೇಲೆ ಜಂಗಮನ ಪಾದೋದಕವನ್ನು ಹಾಕುವುದಕ್ಕಿಂತಲೂ ಬಸವ ಮಂತ್ರ ಹೇಳಿ ಹಸ್ತದಿಂದ ಮಂತ್ರೋದಕ ಮಾಡಿ ಮೊದಲು ತಗ್ಗಿಗೆ, ನಂತರ ಮಣ್ಣಿನ ಗುಡ್ಡೆ ಮೇಲೆ ಓಂ ಶ್ರೀ ಗುರುಬಸವಲಿಂಗಾಯ ನಮಃ ಹೇಳಿ ಸಿಂಪಡಿಸುವುದು ಒಳ್ಳೆಯದು.

ಈ ಸುಧಾರಣೆ ತರುವುದರಿಂದ ಜಂಗಮರ, ಅಥವಾ ಸ್ವಾಮಿಗಳ ಮಹತ್ವವನ್ನು ನಾವು ಕಳೆಯುತ್ತಿದ್ದೇವೆಂಬ ಕೋಪ, ಭ್ರಾಂತಿ ಕೆಲವು ಜನರಲ್ಲಿದೆ. ಈ ಎಲ್ಲ ಕ್ರಿಯೆಗಳನ್ನು ಮಾಡಲು ಕ್ರಿಯಾ ಮೂರ್ತಿಯ ಅಗತ್ಯವಿದ್ದೇ ಇದೆ ಎಂದಾಗ ಅವರ ಮಹತ್ವ ಕಡಿಮೆಯಾಗದು.

ಕೆಲವೊಮ್ಮೆ ಕ್ರಿಯಾಮೂರ್ತಿಗಳಿಗಿಂತಲೂ ಲಿಂಗೈಕ್ಯರೇ ಜ್ಞಾನಿಗಳು, ನಿಜ ಶರಣರು ಆಗಿದ್ದರೆ ಅವರ ತಲೆಯ ಮೇಲೆ ಕಾಲಿಟ್ಟು ಪೂಜಿಸಿಕೊಳ್ಳಲ್ಪಡುವುದು ತೀರಾ ಹಾಸ್ಯಾಸ್ಪದವೆನಿಸುತ್ತದೆ.

ಇನ್ನು ಮಣ್ಣು ಮುಚ್ಚಿದ ಮೇಲೆ ಗುದ್ದಲಿ ಕಾವು ತೆಗೆದು ತಿರುಗಾ ಮುರುಗಾ ಹಾಕುವುದು, ಮೂರು ಸಲ ಸಮಾಧಿ ಮೇಲೆ ಹಾಯಿಸುವುದು ಎಲ್ಲ ಯಾವುದೇ ಅರ್ಥವಿಲ್ಲದೆ ಹೇಗೋ ಬಂದಿರುವ ಆಚರಣೆ. ಮರಣ ದಂಡನೆ ವಿಧಿಸಿ ಸಹಿ ಮಾಡಿದ ಪೆನ್ನು, ಲೇಖನಿಯನ್ನು ಮುರಿದು ಹಾಕುವಂತೆ. ಏಕೆಂದರೆ ಈ ಪೆನ್ನು ಮತ್ತೊಮ್ಮೆ ಮತ್ತೊಬ್ಬರಿಗೆ ಮರಣದಂಡನೆ ವಿಧಿಸುವುದಕ್ಕೆ ಕಾರಣವಾಗಬಾರದು ಎಂಬ ನಂಬಿಕೆಯಿದೆ. ಇದೆಲ್ಲ ಹುಚ್ಚಾಟವೇ ಸರಿ. ಇಂಥ ಆಚರಣೆಗೆ ಯಾವ ಅರ್ಥವೂ ಇಲ್ಲ. ಇನ್ನು ಪಟಾಕಿ ಸುಡುವುದು. ಇದಂತೂ ಮಹಾಪಾಪ ! ಯಾವುದೇ ಸಮಾರಂಭದಲ್ಲೂ ಪಟಾಕಿ ಸುಡಬಾರದು. ಹಣವನ್ನು ವ್ಯರ್ಥ ಮಾಡುವ, ದೇವರು ಮಾನವನಿಗೆ ಉಸಿರಾಡಲಿಕ್ಕೆ ಕೊಟ್ಟಿರುವ ಶುದ್ಧ ಪ್ರಾಣವಾಯುವನ್ನು ಪಟಾಕಿಯಿಂದ ಮಲಿನಗೊಳಿಸುವ ಅಪರಾಧವನ್ನು ಶರಣ ಮಾರ್ಗಿಗಳು ಮಾಡಬಾರದು. ಅಪವ್ಯಯವಾಗುವ ಹಣವನ್ನು ಉಳಿಸಿ ಲಿಂಗೈಕ್ಯರ ಸ್ಮರಣಾರ್ಥ ವಚನ ಸಾಹಿತ್ಯ ಹಂಚಬೇಕು.

ಧರ್ಮಪಿತರ ಭಾವಚಿತ್ರವನ್ನು ಕೈಲಾದಷ್ಟು ಜನಕ್ಕೆ ಕೊಡಬೇಕು.

ತೆಂಗಿನ ಕಾಯಿಗಳನ್ನು ರಪ್ಪನೆ ನೆಲದ ಮೇಲೆ ಒಡೆದು ಅದು ಚೂರುಚೂರಾಗುವಂತೆ ಮಾಡುವುದು ಮಹಾನ್ ತಪ್ಪು. ಸರಿಯಾಗಿ ಒಡೆದು ಇತರರಿಗೆ ಕೊಡಬಹುದು. ಇಲ್ಲವೇ ಇಡಿಯ ಕಾಯನ್ನೇ ಕೊಟ್ಟುಬಿಡಬಹುದು. ಇವರು ಚೂರು ಚೂರಾಗಿ ಒಡೆಯುವುದು, ಅದನ್ನು ನಿರ್ಗತಿಕರು ಬಂದು ಆರಿಸಿಕೊಳ್ಳುವುದು ಅಮಾನವೀಯ. ಸ್ವಾಮಿಗಳ ಕಾರಿನ ಮುಂದೆ, ತೇರಿನ ಮುಂದೆ ಹೀಗೆಲ್ಲ ಒಡೆಯುವುದು ಬಲಿಯ ಸಂಕೇತವನ್ನು ಒಳಗೊಂಡಿದೆ. ಇಂಥ ಅರ್ಥರಹಿತ, ಅಪವ್ಯಯದ ಆಚರಣೆಗಳನ್ನು ಕೈಬಿಡುವುದು ಶರಣ ಮಾರ್ಗಿಗಳ ಕರ್ತವ್ಯ.

ಚಂದ್ರಶೇಖರ್ ಮರೇಗುದ್ದಿ, ಬೆಳಗಾಂವ.-ಕೆಲವರು ಕೇಳುತ್ತಾರೆ, 'ಮಕ್ಕಳಿದ್ದಾಗ ಲಿಂಗಧಾರಣೆ ಮಾಡಲಾಗುತ್ತದೆ. ನಂತರ ಬೆಳ್ಳಿಯ ಕರಡಿಗೆ ಹಾಕಿ ಕಳಿಸುವುದು ಆಗದು. ಹೀಗಾಗಿ ದೊಡ್ಡವರಾಗುವ ತನಕ ಸದಾ ಇಷ್ಟಲಿಂಗ ಕಟ್ಟಲು ಆಗುವುದಿಲ್ಲ. ಏನು ಮಾಡಬೇಕು ? ಮತ್ತೆ ಕೆಲವರು ಕೇಳುತ್ತಾರೆ, ಬೆಳ್ಳಿಯ ಕರಡಿಗೆ ಬಹಳ ತುಟ್ಟಿಯಾಗಿವೆ. ಮನೆಯಲ್ಲಿ ಎಲ್ಲರೂ ಖರೀದಿಸಲು ಬಡವರಿಗೆ ಆಗದು ಎಂದು, ಇದಕ್ಕೇನು ಪರಿಹಾರ ?

★ ಮಕ್ಕಳಿಗೆ ಕಟ್ಟಲು ತಂತಿ ಹಾಕಿ ಮಾಡಿದ ನಾಗೋಸೆ ಎಂಧಿರುತ್ತದೆ. ದೊಡ್ಡವರಾಗುವ ತನಕ ಕಟ್ಟಬಹುದು. ಕಡೆಗೆ ಒಂದು ರುದ್ರಾಕ್ಷಿಯನ್ನಾದರೂ ಶರೀರದ ಮೇಲೆ ಧರಿಸಲು ವ್ಯವಸ್ಥೆ ಮಾಡಬೇಕು. ಇಷ್ಟಲಿಂಗಧಾರಣೆ ಮುಖ್ಯವೇ ವಿನಾ ಕರಡಿಗೆಯಲ್ಲ. ಎಷ್ಟೇ ಬಡವರಾದರೂ ಬತ್ತಲೆಯಂತೂ ಇರುವುದಿಲ್ಲ; ತಾನೆ ? ಆದ್ದರಿಂದ ಕರಡಿಗೆ ಕೊಳ್ಳಲಾಗದವರು ಬಟ್ಟೆಯ ಚಿಕ್ಕ ಚೀಲಗಳನ್ನು ಮಾಡಿ, ಶಿವದಾರಕ್ಕೆ ಏರಿಸಿ ಅದರಲ್ಲಿ ಇಷ್ಟಲಿಂಗ ಧರಿಸಬಹುದು.

ಮನುಷ್ಯನಿಗೆ ಅಭಿಮಾನ ಬಹಳ ಮುಖ್ಯ. ಸಿಖ್ಖರಿಗೆ ಸದಾ ಜಟೆ ಮತ್ತು ಗಡ್ಡ ಇಟ್ಟುಕೊಳ್ಳಲು ಆದೇಶಿಸಲಾಗಿದೆ. ಅವರು ಜಟೆಯನ್ನು ಕಟ್ಟಿ ಪೇಟ ಕಟ್ಟುವರು. ಸದಾ ಕಟ್ಟಿ

ತಲೆಯಲ್ಲಿ ಗುಳ್ಳೆಯಾಗುತ್ತವೆ. ಆದರೂ ಅವರ ಅಭಿಮಾನದ ಆಚರಣೆ ನೋಡಿರಿ ! ಅನೇಕ ಲಿಂಗಾಯತರು ದೇವರ ಕುರುಹಾದ ಇಷ್ಟಲಿಂಗ ಧರಿಸಲಾರದ ನಿರಭಿಮಾನಿಗಳು.

ಬಿ.ಡಿ. ಗುಡದಿನ್ನಿ ಮತ್ತು ವಿಠ್ಠಲ ಸಾತಣ್ಣನವರು, ಅಡಹಳ ಹಟ್ಟಿ.- ಕಲ್ಯಾಣ ಕಿರಣದ ಸಮಸ್ಯೆ-ಸಮಾಧಾನ ವಿಭಾಗ ಹೆಚ್ಚಿನ ಸಂತೋಷ ಕೊಡುತ್ತದೆ. ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಕಾಣುತ್ತೇವೆ. ಬಸವಣ್ಣನವರು ಬ್ರಹ್ಮಚಾರಿಗಳು ಎಂದು ಅಲ್ಲಮ ಪ್ರಭುಗಳು ಕೊಂಡಾಡುತ್ತಾರೆ. ಆದರೆ ಅವರಿಗೆ ಇಬ್ಬರು ಪತ್ನಿಯರು ಇದ್ದರು. ಇದು ಹೇಗೆ ?

★ ಧರ್ಮಪಿತ ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ, ನೀಲಗಂಗಾಂಬಿಕೆ. ಕೆಲವರು ನೀಲಮ್ಮ ಎಂದು ಕೆಲವರು ಗಂಗಮ್ಮ ಎಂದು ಸಂಕ್ಷಿಪ್ತವಾಗಿ ಕರೆಯುತ್ತಿದ್ದರು. ಕಾಲಾನಂತರದಲ್ಲಿ ಕವಿಗಳು ಈ ಎರಡೂ ಹೆಸರುಗಳು ಬೇರೆ ಬೇರೆ ಇಬ್ಬರು ವ್ಯಕ್ತಿಯ ಹೆಸರು ಎಂದು ತಪ್ಪು ಭಾವಿಸಿ ಇಬ್ಬರು ಪತ್ನಿಯರನ್ನು ಕಲ್ಪಿಸಿದರು. ಮಗುವನ್ನು ಪಡೆಯಬೇಕೆಂಬ ಹಂಬಲ ನೀಲಗಂಗಾಂಬಿಕೆಯಲ್ಲಿ ಉತ್ಕಟವಾಗಿ ಇದ್ದುದರಿಂದ ಧರ್ಮಪಿತರು ನೀಲಗಂಗಾಂಬಿಕೆಯಲ್ಲಿ ಒಂದು ಮಗುವನ್ನು ಪಡೆದರು. ನಂತರ ಅವರು ಸಂಯಮ(ಬ್ರಹ್ಮಚರ್ಯ)ದ ಸಂಕಲ್ಪವನ್ನು ಹೊಂದಿದರು. ಆಗಿನಿಂದ ಪತ್ನಿಯನ್ನು ತಾಯಿಯ ರೂಪದಲ್ಲಿ ಭಾವಿಸಿದರು. ಬಾಲ ಸಂಗಯ್ಯ ಚಿಕ್ಕವಯಸ್ಸಿನಲ್ಲಿಯೇ ತೀರಿ ಹೋದರೂ ಮತ್ತೊಂದು ಮಗುವನ್ನು ಪಡೆಯುವ ಮನಸ್ಸು ಮಾಡಲಿಲ್ಲ. ತಾಯಿ ನೀಲಲೋಚನೆ ಅಪ್ರತಿಮ ಸದ್ಗುಣಿಯೂ ಆಗಿ ಪತಿಯ ಔನ್ನತ್ಯ ಅರಿತು ಸಹಕರಿಸಿದಳು. ಅಪೂರ್ವ ಸುಂದರಿಯಾಗಿದ್ದ ಪತ್ನಿಯನ್ನು ಹೊಂದಿಯೂ ಮನಸ್ಸನ್ನು ವಿಚಲಿತಗೊಳಿಸಿಕೊಳ್ಳದ ಧರ್ಮಪಿತರ ಸಂಯಮವನ್ನು ಕಂಡು ಅಲ್ಲಮ ಪ್ರಭುಗಳೇ ಮುಂತಾಗಿ ಎಲ್ಲ ಶರಣರು ಆಶ್ಚರ್ಯಪಟ್ಟು ಹೀಗೆ ಹೊಗಳಿದರು.

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ
ಗುಹೇಶ್ವರ ಲಿಂಗದಲ್ಲಿ ಅಖಂಡ ಬ್ರಹ್ಮಚಾರಿ ಬಸವಣ್ಣನೊಬ್ಬನೇ !

ನಾವು ಸತಿಯನ್ನು ಹೊಂದಿದ ವಿರಕ್ತರಾದರೆ, ನೀನು ಪತ್ನಿಯನ್ನು ಹೊಂದಿಯೂ ವಿರಕ್ತನಾದವನು. ಆದ್ದರಿಂದ ಪರಮವಿರಕ್ತ ಎಂದು ಬಸವಣ್ಣನವರ ವ್ಯಕ್ತಿತ್ವ ನೋಡಿ ಅಲ್ಲಮ ಪ್ರಭುಗಳು ಉದ್ಗರಿಸುತ್ತಾರೆ.

ಎಸ್. ಟಿ. ಚಂದ್ರಶೇಖರಪ್ಪ, ಸಿದ್ದರಾಮನಹಳ್ಳಿ.- 1. ಮಾದರಸ ಮಾದಲಾಂಬಿಕೆ-ಯರು ತಮ್ಮ ಪುತ್ರ ರತ್ನಕ್ಕೆ "ಬಸವ" ಎಂದು ಏಕೆ ಹೆಸರಿಟ್ಟರು? ಆ ಕಾಲದಲ್ಲಿ ಬ್ರಾಹ್ಮಣ ಸಮಾಜದಲ್ಲಿ ಇಂತಹ ಹೆಸರು ರೂಢಿಯಲ್ಲಿತ್ತೆ ?

★ ಈ ಬಗ್ಗೆ ಕಲ್ಯಾಣ ಕಿರಣದಲ್ಲಿ ಈ ಹಿಂದೆ ಬರೆಯಲಾಗಿದೆ. ಬಹಳ ಮಹತ್ವದ ಪ್ರಶ್ನೆಯಾದ್ದರಿಂದ ಹೊಸ ಓದುಗರಿಗೂ ಲಭ್ಯವಾಗಲೆಂದು, ಹಳೆಯ ಓದುಗರಿಗೂ ನೆನಪು ಮಾಡಲೆಂದು ಉತ್ತರವನ್ನು ಪುನರಾವರ್ತನೆ ಮಾಡುತ್ತಿದ್ದೇನೆ.

ಶಿವಭಕ್ತರಲ್ಲಿ ಬೇರೆ ಬೇರೆ ಶಿವಪರಿವಾರದ ದೇವತೆಗಳನ್ನು ಪೂಜಿಸುವ ಪಂಥಗಳಲ್ಲಿ ಗಾಣಪತ್ಯರಂತೆ, ನಾಂದ್ಯರು (ನಂದಿಯ ಆರಾಧಕರು) ಉಂಟು. ಧರ್ಮಪಿತ ಬಸವಣ್ಣನವರ ಪಿತಾಮಹರು ಆಂಧ್ರದಿಂದ ವಲಸೆ ಬಂದು ಬಾಗೇವಾಡಿಯಲ್ಲಿ ನೆಲೆಸಿದವರು. ಆಂಧ್ರದ ಒಂದು ಶೈವ ಬ್ರಾಹ್ಮಣ ಪಂಗಡದವರು ನಂದಿಯ ಆರಾಧಕರು. ಅವರ ಮನೆಗಳಲ್ಲಿ ಹುಟ್ಟುವ ಮೊದಲನೆಯ ಮಗು ಹೆಣ್ಣಿರಲಿ, ಗಂಡಿರಲಿ ಬಸವ ಎಂದು ಹೆಸರಿಸುವುದು ಕಡ್ಡಾಯ ಆಚರಣೆ. ದಿವಂಗತ ಎನ್. ಟಿ. ರಾಮರಾವ್ ಅವರ ಮೊದಲ ಹೆಂಡತಿಯ ಹೆಸರು ಬಸವ ತಾರಕಂ; ಆಂಧ್ರದ ಓರ್ವ ಪ್ರಸಿದ್ಧ ಕಮ್ಯುನಿಸ್ಟ್ ಲೀಡರ್ ಇದ್ದರು ಅವರ ಹೆಸರು ಬಸವ ಪುನ್ನಯ್ಯ. ವೃಷಭ ಎಂಬ ಸಂಸ್ಕೃತ ಪದವು ದ್ರಾವಿಡ ಭಾಷೆ ತೆಲುಗು, ಕನ್ನಡಗಳಲ್ಲಿ ಬಸವ ಎಂದಾಗುತ್ತದೆ. ಶಿವನ ಅತ್ಯಂತ ಆಪ್ತ ಶಿಷ್ಯ ಶಿಲಾದ ಮುನಿಯ ಮಗ ನಂದಿನಾಥ. ಹೀಗಾಗಿ ನಂದಿಯ ಆರಾಧಕರಾದ ಮಾದರಸ-ಮಾದಲಾಂಬಿಕೆ, ಗುರುಗಳ ಆದೇಶವೂ ಇದ್ದುದರಿಂದ ಮಗುವಿಗೆ ತಮ್ಮ ಸಂಪ್ರದಾಯದ ಹೆಸರು 'ಬಸವ' ಎಂದಿಟ್ಟರು.

ಅಂಥ ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪನೆ ಮಾಡಿ, ಈ ಸಮಾಜದ ಹುಟ್ಟಿಗೆ ಕಾರಣರಾದುದರಿಂದ ಲಿಂಗಾಯತ ಧರ್ಮೀಯರಲ್ಲಿ ಈ ಹೆಸರು ಮಂತ್ರವಾಗಿ, ಇದರ ಪ್ರಾಣವೇ ಆಗಿದೆ. ಅದೇ ರೀತಿ ಈ ಧರ್ಮದ ಬೆಳವಿಗೆಗೆ ಕಾರಣರಾದ ಚನ್ನಬಸವಣ್ಣ ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕಮಹಾದೇವಿ, ನೀಲಮ್ಮ ಮುಂತಾದ ಹೆಸರುಗಳು ಜನಜೀವನದಲ್ಲಿ ಹಾಸು ಹೊಕ್ಕಾಗಿವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಶರಣ ಪರಂಪರೆಯಲ್ಲಿ ಬರುವ ಐತಿಹಾಸಿಕ ವ್ಯಕ್ತಿಗಳಾದ ರೇವಣಸಿದ್ಧ, ಮರುಳ ಸಿದ್ಧರ ಹೆಸರುಗಳು ಅಷ್ಟಿಷ್ಟು ರೂಢಿಯಲ್ಲಿವೆ. ಉಳಿದಂತೆ, ಈಗ ಉದ್ದೇಶಪೂರ್ವಕವಾಗಿ ಹೆಸರನ್ನಿಡುವ ಕೆಲವರನ್ನು ಬಿಟ್ಟರೆ, ಉಳಿದವರಲ್ಲಿ ರೇಣುಕಾ, ದಾರುಕ, ಘಂಟಾಕರ್ಣ ಮುಂತಾದ ಹೆಸರುಗಳು ಬಳಕೆಯಲ್ಲೇ ಇಲ್ಲ ಎಂಬುದು ಗಮನಾರ್ಹ. ಸಾಂಪ್ರದಾಯಿಕವಾಗಿ ಬರುವ ಈ ಹೆಸರಿನ ಸಂಸ್ಕೃತಿಯೇ ಆ ವ್ಯಕ್ತಿಗಳ ಜನಪ್ರಿಯತೆ ಮತ್ತು ಐತಿಹಾಸಿಕತೆಗೆ ಸಾಕ್ಷಿ. ಆದ್ದರಿಂದ ಶರಣರ ಹೆಸರುಗಳನ್ನಿಡುವ ಉದಾತ್ತ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಲಿಂಗಾಯತ ಧರ್ಮದಲ್ಲಿ ಬಸವ ಎಂಬ ಅಕ್ಷರ ನವ ಅಂದರೆ ಹೊಸ ಪ್ರಣವವಾಯಿತು ಎನ್ನುತ್ತಾರೆ ಬಾಲಲೀಲ ಮಹಾಂತ ಶಿವಯೋಗಿಗಳು. 'ಬಸವ ಲಿಂಗ' ನಮ್ಮ ಪಂಚಾಕ್ಷರಿ ಎನ್ನುತ್ತಾರೆ ಮೈಲಾರ ಬಸವ ಲಿಂಗ ಶರಣರು. ಹೀಗಾಗಿ ಬ ಎಂದರೆ ಅ ಉ ಮ, ಸೃಷ್ಟಿ ಸ್ಥಿತಿ ಲಯ, ನಾದ ಬಿಂದು ಕಳೆ, ಸತ್ ಚಿತ್ ಆನಂದ ಎಂದೆಲ್ಲಾ ಬಣ್ಣಿಸುವ ಪರಿಪಾಠ ರೂಢಿಯಾಯಿತು. ಬಸವಾ ಎಂಬ ಮಂತ್ರದ ಉಚ್ಚಾರದಲ್ಲೇ ಆದಿ ಶರಣರು ಆನಂದವನ್ನು ಕಂಡುಕೊಂಡರು.

2. ಬಸವೇಶ್ವರರ ಕ್ರಿಯಾ ವಿಶ್ರಾಂತಿಯ ನಂತರ ಬಸವ ಪುರಾಣ ರಚನಾಕಾರರು ಅವರನ್ನು ಕೈಲಾಸ ಪತಿ ಶಂಕರನ ವಾಹನ ವೃಷಭನ ಅವತಾರ ಎಂದೂ, ಶಿವನ ಆಣತಿಯಂತೆ ಭೂಲೋಕದಲ್ಲಿ ಅವತರಿಸಿದರು ಎಂದು ಕಥೆ ಬರೆದುದರಿಂದ ಬಸವೇಶ್ವರರ 'ಸ್ವಶಕ್ತಿ'

ಸಾಮರ್ಥ್ಯಕ್ಕೆ ಕುಂದುಂಟಾಗಲಿಲ್ಲವೆ ? ಮಹಾತ್ಮಾ ಗಾಂಧೀಜಿಯವರಿಗೆ ಈ ತರಹ ದೈವೀಶಕ್ತಿ ಇತ್ತೇ ?

★ ಸತ್ಯವಾಗಿ ಹೇಳಬೇಕೆಂದರೆ ವಚನ ಸಾಹಿತ್ಯದಲ್ಲಿ ಸಿಗದಿರುವ ಕೆಲವು ಚಾರಿತ್ರಿಕ ಅಂಶಗಳನ್ನು ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ, ಹರಿಹರನ ಬಸವರಾಜ ದೇವರ ರಗಳೆ, ಸಿಂಗಿರಾಜನ ಕಾವ್ಯ, ಎಳಂದೂರು ಷಡಕ್ಷರದೇವನ ವೃಷಭೇಂದ್ರ ವಿಜಯ ಒದಗಿಸುತ್ತವೆ ಎಂಬುದು ಸಮಾಧಾನಕರ ಸಂಗತಿಯಾದರೂ ಅವು ಬಸವ ತತ್ತ್ವಕ್ಕೆ ವಿರುದ್ಧವಾದ ವಿಚಾರಗಳನ್ನೇ ಬಿತ್ತರಿಸಿದವು. ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತೆ ಇಂಥದನ್ನೇ ಬಯಸುವ ಮಠಗಳವರು ವಚನ ಸಾಹಿತ್ಯದ ಮೇಲೆ ಪ್ರವಚನ ಮಾಡಿಸದೆ ಬರೀ ಪುರಾಣಗಳನ್ನೇ ಅವಲಂಬಿಸಿ ಸಮಾಜವನ್ನು ಇನ್ನಷ್ಟು ಹದಗೆಡಿಸಿದರು. ಕೈಲಾಸ, ವೈಕುಂಠ, ದೇವಲೋಕ, ನರಕ ಲೋಕಗಳ ಅಸ್ತಿತ್ವವನ್ನೇ ನಿರಾಕರಿಸಿದ ಬಸವಣ್ಣನವರನ್ನು ಮತ್ತು ಇತರ ಶರಣರನ್ನು ಕೈಲಾಸದಿಂದ ಇಳಿಸಿದರು. ಇದರಿಂದ ಕ್ರಾಂತಿಪುರುಷ ಬಸವಣ್ಣನವರ ಸಾಧನೆಯ ಪ್ರಖರತೆಯನ್ನು ಮಂಕುಗೊಳಿಸಿದ್ದು ದಿಟ.

ಮಹಾತ್ಮಾ ಗಾಂಧೀಜಿಯವರು ತಮ್ಮ ಸದ್ಗುಣ, ಸಹೃದಯತೆಯಿಂದ ಮಹಾತ್ಮರಾದುದು ನಿಜ. ಆದರೆ ಅವರು ಅವತಾರಿಕರಲ್ಲ, ಪ್ರವಾದಿಯಲ್ಲ. ಅವತಾರದ ಪರಿಕಲ್ಪನೆಯಲ್ಲಿ ಸಾಧಕ ಗುರು, ಸಿದ್ಧಗುರು, ಅವತಾರಿಕ ಗುರು ಎಂದು ಚನ್ನಬಸವಣ್ಣನವರು ವಿಂಗಡಿಸಿದ್ದಾರೆ. ಭಾರತೀಯ ಅಧ್ಯಾತ್ಮ ಶಾಸ್ತ್ರದಲ್ಲಿ ಮಹಾತ್ಮಾ, ಅಂಶಾವತಾರಿ, ಪೂರ್ಣಾವತಾರಿ ಎಂಬ ವರ್ಗೀಕರಣ ಉಂಟು. ಮಹಾತ್ಮಾ ಗಾಂಧಿಯವರು ವಚನ ಸಾಹಿತ್ಯದ ದೃಷ್ಟಿಯಲ್ಲಿ ಸಾಧಕ ಗುರು, ಅಧ್ಯಾತ್ಮ ದೃಷ್ಟಿಯಲ್ಲಿ ಮಹಾತ್ಮರು. ಅವರು ಸಮಾಜ ಸುಧಾರಕರೇ ವಿನಾ ಬಸವಣ್ಣನವರಂತೆ ನವ ಸಮಾಜ ನಿರ್ಮಾಪಕರಲ್ಲ. ಅವರೂ ಅದನ್ನು ಒಪ್ಪಿಕೊಂಡಿದ್ದಾರೆ.

3. ಬಸವೇಶ್ವರರನ್ನು ಕೈಲಾಸ ವೃಷಭನ ಅವತಾರ ಎಂದು ಆರೋಪಿಸಿದ್ದರಿಂದ ಇದು ಸಾಮಾನ್ಯ ಜನರ ದೃಷ್ಟಿಯಲ್ಲಿ ಬಸವೇಶ್ವರರನ್ನು ಎರಡು ಕೋಡು, ನಾಲ್ಕು ಕಾಲು, ಒಂದು ಬಾಲವನ್ನುಳ್ಳ 'ಎತ್ತು' ಎಂಬ ಪ್ರಾಣಿಯನ್ನಾಗಿ ಭಾವಿಸಲು ಅವಕಾಶ ನೀಡಿತೆ ? ಬಸವ ಜಯಂತಿಯಂದು ಎತ್ತುಗಳ ಪೂಜೆ ಮತ್ತು ಉತ್ಸವಗಳಿಗೆ ದಾರಿ ಮಾಡಿತೆ ?

★ ಈ ಸಾಕಾರೀಕರಣದಲ್ಲಿ ಋಣಾತ್ಮಕ -ಧನಾತ್ಮಕ ಎರಡೂ ಅಂಶಗಳಿವೆ. ಧರ್ಮಪಿತರ ಗಡಿಪಾರು, ಶರಣರ ವಧೆ, ಮುಖ್ಯ ಶರಣರ ಚದುರುವಿಕೆಯಿಂದ ಲಿಂಗಾಯತ ಸಮಾಜ ಅನಾಥ ಶಿಶುವಿನಂತೆ ಆಯಿತು; ಮಾರ್ಗದರ್ಶಕರಿಲ್ಲದೆ ಚೆದುರಿ ಚಲ್ಲಾಪಿಲ್ಲಿಯಾಯಿತು. ನಂತರ ಸಂಘಟನೆಗೆ ಸಮುದಾಯ ಕೇಂದ್ರ (Community centres)ಗಳು ಅಗತ್ಯವೆನಿಸಿತು. ಅನುಭವ ಮಂಟಪದಂತಹ ಪ್ರೌಢ ಸಂಸ್ಥೆಯನ್ನು ನಿರ್ಮಿಸುವ ಬೌದ್ಧಿಕ ಪಕ್ವತೆ ನಶಿಸಿಹೋಗಿತ್ತು. ಧರ್ಮಪಿತ ಬಸವಣ್ಣನವರು ನಿರಾಕಾರ ಏಕದೇವೋಪಾಸನೆಗೆ ಬೇರೆ ಒತ್ತುಕೊಟ್ಟು ಮೂರ್ತಿಪೂಜೆಯನ್ನು ನಿಷೇಧಿಸಿದ್ದರು. ಹೀಗಾಗಿ ಅಸ್ಪಷ್ಟತೆ ಮತ್ತು ಸಂದಿಗ್ಧತೆಯಲ್ಲಿ ಸಿಕ್ಕ ಸಮಾಜ ಕಲ್ಯಾಣದ ಬಸವಣ್ಣನವರನ್ನು ನಂದಿಯ

ಆಕಾರದಲ್ಲಿ ಸಾಕಾರಗೊಳಿಸಿ, ಬಸವಣ್ಣನ ಗುಡಿಗಳೆಂಬ ಸಮುದಾಯ ಕೇಂದ್ರಗಳನ್ನು ಮಾಡಿಕೊಂಡರು ಎಂದು ಊಹಿಸಬಹುದು.

ನನಗೆ ಇನ್ನೊಂದು ಸಂದೇಹವೂ ಇದೆ. ಅದೇನೆಂದರೆ, ಶೈವ -ವೈದಿಕ ಎರಡೂ ಸಂಪ್ರದಾಯಗಳ ಸಂಕೋಲೆಯಿಂದ ಹೊರಬಂದ ಲಿಂಗಾಯತ ಧರ್ಮ ಪುರೋಹಿತಶಾಹಿಯ ವಿರುದ್ಧ ಹೋರಾಟಕ್ಕೆ ನಿಂತುದರಿಂದ ಬಹಳ ಬಲಿಷ್ಠ ಶತ್ರುವನ್ನು ಎದುರು ಹಾಕಿಕೊಳ್ಳಬೇಕಾಯಿತು. ಹೀಗಾಗಿ ಸಮರ್ಥನಾಯಕತ್ವ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಇಲ್ಲದ್ದರಿಂದ ಲಿಂಗಾಯತರು ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲು ಶೈವದ ಮುಸುಕನ್ನು ಹೊದ್ದುಕೊಂಡರೇನೋ ! ಅದಕ್ಕಾಗಿ ''ನಮ್ಮ ಬಸವಣ್ಣ ನಿಮ್ಮ ನಂದಿಯಲ್ಲದೆ ಬೇರಲ್ಲ, ನಮ್ಮ ಇಷ್ಟಲಿಂಗ ನಿಮ್ಮ ಗುಡಿಯೊಳಗಣ ಲಿಂಗವಲ್ಲದೆ ಬೇರಲ್ಲ.'' ಎಂದು ಹೇಳುತ್ತ ವೈದಿಕ-ಶೈವಕ್ಕೆ ಸೋತು ಶರಣಾಗಿರಬೇಕು. ಹೀಗಾಗಿ ಶರಣರು ಪ್ರೀತಿಯಿಂದ ಕರೆದ ''ಬಸವಣ್ಣ'' - ನಿಧಾನವಾಗಿ ಬಸವೇಶ್ವರ ಸ್ವಾಮಿ ಎಂಬ ಪೌರಾಣಿಕ ಮೂರ್ತಿಯಾದರು. ಬಸವೇಶ್ವರ ಎಂದರೆ ಪೌರಾಣಿಕ ಛಾಯೆ ಬಂದರೆ, ಬಸವಣ್ಣ ಎಂದಾಗ ಐತಿಹಾಸಿಕ ಪ್ರಖರತೆ ಬರುವುದು ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಕ್ರಾಂತಿ ಪುರುಷ ಬಸವಣ್ಣನವರನ್ನು ಎತ್ತನ್ನಾಗಿ, ವೃಷಭನ ಅವತಾರವನ್ನಾಗಿ ಮಾಡಿದವರು ಜನಪದರು. ಇದರಲ್ಲಿ ಒಂದು ಬಗೆಯ ಉತ್ಕಟ ಪ್ರೀತಿಯನ್ನು ಅವರು ಅನುಭವಿಸಿದರು. ಪಂಡಿತೋತ್ತಮರಿಗಿಂತ ಧರ್ಮಪಿತ ಬಸವಣ್ಣನವರನ್ನು ಬಹುವಾಗಿ ಪ್ರೀತಿಸಿದವರು ಜನಪದರು, ಶ್ರೀಸಾಮಾನ್ಯರು. ಅವರು ಬಹುವಾಗಿ ಪ್ರೀತಿಸಿದವು ಎರಡು ವಸ್ತುಗಳು 1. ಕ್ರಾಂತಿ ಪುರುಷ ಮಾತೃಹೃದಯಿ ಬಸವಣ್ಣ

ಹಸಿದೊಡಂಬಲಿ ಮುದ್ದು ಬಿಸಿಲಿಗೆ ಕೊಡೆ ಮುದ್ದು
ಬಸಿರಿನಲಿ ಬಂದ ಶಿಶು ಮುದ್ದು|ಲೋಕಕ್ಕೆ
ಬಸವಣ್ಣನೇ ಮುದ್ದು ಸರ್ವಜ್ಞ ||

2. ರೈತರ ಜೀವನದ ಅವಿಭಾಜ್ಯ ಅಂಗವಾದ ಎತ್ತು, ಎತ್ತು ಧರ್ಮವೃಷಭನ ಸಂಕೇತ, ಸಿಂಧು ನದಿಯ ಬಯಲಿನ ಸಂಸ್ಕೃತಿಯ ಕಾಲದಿಂದಲೂ ವೃಷಭ ಜನಪ್ರಿಯ ಪ್ರಾಣಿ. ಹೀಗಾಗಿ ಐತಿಹಾಸಿಕ ಪುರುಷ ಬಸವಣ್ಣನವರನ್ನು ಧರ್ಮ ವೃಷಭ ಎಂದು ಸಾಂಕೇತಿಕವಾಗಿ ಜನರು ಗೌರವಿಸಿದ್ದಾರೆ.

ಇದು ಏನೇ ಇರಲಿ, ಇಂದು ಈ ಎತ್ತಿನ ಮುಸುಕನ್ನು ಕಿತ್ತೊಗೆದು ಇತಿಹಾಸ ಪ್ರಸಿದ್ಧ ಕ್ರಾಂತಿಪುರುಷ ಮುದ್ದು ಮೊಗದ ಶಾಂತ ಮೂರ್ತಿ ಬಸವಣ್ಣನವರನ್ನು ಜನ ಜೀವನದಲ್ಲಿ ಪ್ರತಿಷ್ಠಾಪಿಸಬೇಕಾಗಿದೆ. ಒಂದು ಮಾತು ಸತ್ಯ; ನಂದಿಯನ್ನು ಆ ಗುಡಿಗಳಲ್ಲಿ ಪ್ರತಿಷ್ಠಾಪಿಸಿದ್ದರೂ ಆ ಗುಡಿಗಳೆಲ್ಲ ಕಲ್ಯಾಣದ ಬಸವಣ್ಣನವರ ಗುಡಿಗಳೇ ! ಆದ್ದರಿಂದ ಜನರಿಗೆ ತಿಳುವಳಿಕೆ ಹೇಳಿ ಬಸವಣ್ಣನ (ದೇವರ) ಗುಡಿಗಳಿರುವಲ್ಲಿ ಐತಿಹಾಸಿಕ ಪುರುಷ ಬಸವಣ್ಣನವರ ಮೂರ್ತಿ ಇಡಬೇಕು, ಭಾವ ಚಿತ್ರ ಬರೆಸಬೇಕು, ವಚನಗಳನ್ನು ಬರೆಸಬೇಕು.

ಜಾತಿವಾದಿಗಳು ಈಗ ಹೊಸ ತಂತ್ರ ಹೂಡುತ್ತಿದ್ದಾರೆ. ಜನರು

ಜಾಗೃತಗೊಳ್ಳುತ್ತಿರುವುದರಿಂದ ಈಗ ಅವರು, ''ಇವು ನಂದಿಯ ಗುಡಿಗಳು; ಗುರು ಬಸವಣ್ಣನವರಿಗೆ ಸಂಬಂಧ ಪಟ್ಟವಲ್ಲ,'' ಎನ್ನುತ್ತಿದ್ದಾರೆ. ''ಬಹಳ ಹಿಂದೆ ಒಂದು ಎತ್ತು ಸತ್ತಿತ್ತು. ಅದನ್ನು ಇಲ್ಲಿ ಸಮಾಧಿ ಮಾಡಿ, ಗುಡಿ ಕಟ್ಟಲಾಗಿದೆ.'' ಎಂದು ಜನರನ್ನು ದಾರಿತಪ್ಪಿಸಲು ಯತ್ನಿಸುತ್ತಿದ್ದಾರೆ. ಲಿಂಗಾಯತ ಪೂಜಾರಿಗಳಿದ್ದ ಗುಡಿಯಾದರೆ ಅದು ಕಲ್ಯಾಣದ ಬಸವಣ್ಣನಿಗೇ ಸಂಬಂಧಿಸಿದ್ದು ಎಂಬುದು ನೂರಕ್ಕೆ ನೂರು ಸತ್ಯ. ಬಸವೇಶ್ವರ ಸ್ವಾಮಿಯನ್ನು ಪುನಃ ಬಸವಣ್ಣನನ್ನಾಗಿ ಮಾಡಿ, ಬಸವೇಶ್ವರ ಗುಡಿಗಳನ್ನು ಬಸವ ಮಂಟಪಗಳನ್ನಾಗಿ ಮಾಡುವಲ್ಲಿ ನಾವು-ನೀವು ಶ್ರಮಿಸಬೇಕಾಗಿದೆ. ಬಸವ ಜಯಂತಿಯ ದಿನ ರೈತನ ಪ್ರೀತಿ ಪಾತ್ರ ಪ್ರಾಣಿಗಳಾದ ಎತ್ತುಗಳನ್ನು ಅಲಂಕರಿಸಿ ಮೆರವಣಿಗೆಯಲ್ಲಿ ತಂದರೆ ತಪ್ಪೇನೂ ಅಲ್ಲ. ಆ ಮೂಕ ಪ್ರಾಣಿಗಳಿಗೂ ಒಂದು ದಿನ ಮಹತ್ವ ಕೊಡಬಹುದು. ಆದರಿಷ್ಟೇ ಬಸವಣ್ಣ ಎಂದರೆ ಎತ್ತು ಎಂಬ ಮೂಢ ಕಲ್ಪನೆ ತೊಡೆಯಲು ಉಪನ್ಯಾಸ ಮಾಡಿಸಬೇಕು; ಮಾನವಾಕಾರದ ಬಸವಣ್ಣನವರ ಪೂಜೆ, ಸ್ತುತಿ ಮಾಡುವಂತಿರಬೇಕು.

ಜೂನ್-ಜುಲೈ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111=00 ರೂ ಕೊಟ್ಟ ಧನ ದಾಸೋಹಿಗಳು.

ಶರಣರುಗಳಾದ :

1. ಆರ್. ಗಂಗಶೆಟ್ಟೆಪ್ಪ, ಬೆಂಗಳೂರು
2. ಡಿ.ಸಿ. ರಾಜ್ಯಶೇಖರ್, ಬೆಂಗಳೂರು
3. ಎಂ.ಹೆಚ್. ಶಂಕರ್, ಬೆಂಗಳೂರು
4. ಲಕ್ಷ್ಮಮ್ಮ , ಬೆಂಗಳೂರು
5. ಎಂ. ನಾಗರಾಜು, ಬೆಂಗಳೂರು
6. ಶಾಂತಕುಮಾರಿ ಮತ್ತು ಬೈಲಪ್ಪನವರು, ಬೆಂಗಳೂರು
7. ಜಯಶ್ರೀ ಗಂಗಾಧರಯ್ಯ, ಬೆಂಗಳೂರು
8. ಸುಧಾ ಶ್ರೀನಿವಾಸ ಗೌಡ, ಬೆಂಗಳೂರು
9. ಜಯಮ್ಮ ನಾರಾಯಣಪ್ಪ, ವಿದ್ಯಾರಣ್ಯಪುರ
10. ರಾಜಮ್ಮ ರಾಮಕೃಷ್ಣಪ್ಪ, ಮತ್ತೀಕೆರೆ
11. ಡಾ|| ವಿಜಯಲಕ್ಷ್ಮಿ ಸುಭಾಷ್ ಮೊಚ್ಚೆ, ಕೊಡಿಗೇಹಳ್ಳಿ
12. ಉಮಾ ಕೆ.ಪಿ. ಮದುರೇ ಗೌಡ, ಕೊಡಿಗೇಹಳ್ಳಿ
13. ಗೌರಮ್ಮ ನಾರಾಯಣಸ್ವಾಮಿ, ಕೊಡಿಗೇಹಳ್ಳಿ
14. ರಾಧಮ್ಮ ತಿಮ್ಮರಾಯಗೌಡ, ಕೊಡಿಗೇಹಳ್ಳಿ
15. ನೀಲಮ್ಮ ಪಿ. ಬಸವರಾಜಪ್ಪ, ಕೊಡಿಗೇಹಳ್ಳಿ
16. ಲಕ್ಷ್ಮಮ್ಮ ಕೆ.ಹೆಚ್. ಆಂಜನಪ್ಪ, ಕೊಡಿಗೇಹಳ್ಳಿ
17. ಪುಟ್ಟಮ್ಮ ಡಿ. ನಾರಾಯಣಪ್ಪ, ಮತ್ತೀಕೆರೆ
18. ಎಸ್. ಚನ್ನಪ್ಪ, ಕೊಡಿಗೇಹಳ್ಳಿ
19. ಹೆಚ್.ಎಂ. ಪರಮಶಿವಯ್ಯ, ಹೆಗ್ಗೆರೆ
20. ಬಿ. ಶಿವಲಿಂಗಪ್ಪ ಎಂ. ಬೇವಿನಹಳ್ಳಿ
21. ಎಂ.ಎನ್.ನಂದೀಶ್, ಬೆಂಗಳೂರು
22. ಕರೆಪ್ಪ. ನಿಂ. ಸೋರಗಾಂವ, ಬೆಂಗಳೂರು

23. ಭೀಮಪ್ಪ ಪಿ. ದಾಸ್ಯಾಳ, ಬೆಂಗಳೂರು
24. ಸುರೇಶ್ ಪಾಟೀಲ್, ಬೆಂಗಳೂರು
25. ಆದಪ್ಪ ಶಿ. ನಾಗೂರು, ಬೆಂಗಳೂರು
26. ಎನ್. ಇಂದುಮತಿ ಬಸವಣ್ಣ, ಬೆಂಗಳೂರು
27. ಶಿವಯೋಗಿ ಎಸ್. ಕಲ್ಯಾಣಿ, ಬೆಂಗಳೂರು
28. ಅನಸೂಯಮ್ಮ, ಬೆಂಗಳೂರು
29. ಬಸಮ್ಮ ಬಸವಂತಪ್ಪ ಕೂಗೂರು, ಹುಬ್ಬಳ್ಳಿ
30. ಮಂಗಳಗೌರಮ್ಮ, ಬೆಂಗಳೂರು

ಬೆಂಗಳೂರಿನ ಬಸವ ಮಂಟಪದ ಮೇಲೆ ನಿರ್ಮಾಣವಾಗಲಿರುವ ಶ್ರೀ ಸಿದ್ಧಲಿಂಗೇಶ್ವರ ಪ್ರಸಾದ ನಿಲಯ ಮತ್ತು ಮಹಿಳೆಯರ ಹಾಸ್ಟೆಲ್‌ಗಾಗಿ ದೇಣಿಗೆ ನೀಡಿದವರು

1. ಶರಣೆ. ರೇವಮ್ಮ ಈಶ್ವರಪ್ಪ, ಬೆಂಗಳೂರು	30,000-00
2. ಶರಣ ಹೆಚ್.ಎಸ್. ಚನ್ನಬಸವಣ್ಣ, ಚೆನ್ನೈ	25,000-00
3. ಶರಣೆ. ಶಕುಂತಲಾ ಮತ್ತು ಶರಣ ಪುಟ್ಟಸಿದ್ಧಪ್ಪ	10,000-00
4. ಶರಣೆ. ಭಾರತಿ ಕೆಂಪಯ್ಯ, ಬೆಂಗಳೂರು	10,000-00
5. ಶರಣೆ. ಲಕ್ಷ್ಮಮ್ಮ ಗೋವಿಂದಪ್ಪ, ವಿದ್ಯಾರಣ್ಯಪುರ	5,100-00
6. ಶರಣೆ. ವಿಜಯಾ ಸೋಮಶೇಖರ್, ಬೆಂಗಳೂರು	5,000-00

ಪೂಜ್ಯ ಶ್ರೀ ಲಿಂಗೈಕ್ಯ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣಾ ದಿನಕ್ಕಾಗಿ ಪುದುವಟ್ಟು

ಶರಣ. ಎಸ್.ಪಿ. ಹಿರೇಮಠ, ಬೆಂಗಳೂರು	15,000-00

ವಚನ ಲೇಖನ ಪುಸ್ತಕಗಳ ಉಚಿತ ವಿತರಣೆಗಾಗಿ

ಶರಣ. ಕೆ.ಆರ್. ಸೋಮಶೇಖರ್, ಬೆಂಗಳೂರು	2500-00
ಶರಣ. ಕೆ. ಮಾಳಿಗಪ್ಪ ಮತ್ತು ಮಕ್ಕಳು, ಬೆಂಗಳೂರು	1250-00
ಶರಣ. ಸಿದ್ಧರಾಮಪ್ಪ ಪಾಟೀಲ್, ಬೆಂಗಳೂರು	1101-00
ಶರಣ. ಸಿ. ಸೋಮಶೇಖರ್	1001-00
ಶರಣೆ. ಮುಕ್ತಾಯಕ್ಕ ಮತ್ತು ಶರಣ ಸತ್ಯಾನಂದರು, ಬೆಂಗಳೂರು	1001-00

ಪುಸ್ತಕ ಮುದ್ರಣಕ್ಕಾಗಿ

ಶರಣೆ. ಪಾರ್ವತಮ್ಮ ಮತ್ತು ಶಿವರಾಜು, ಕೊಡಿಗೇಹಳ್ಳಿ	3000-00
ಶರಣೆ. ಕೆ. ಜಯಮ್ಮ ಕೆ.ಎನ್. ನಾಗೇಶ್ವರರಾವ್, ಮೈಸೂರು (ಗುರುಕಾಣಿಕೆ)	2000-00
ಶರಣೆ. ಶಂಕರಿಶೆಟ್ಟಿ, ಮಂಗಳೂರು (ಗುರುಕಾಣಿಕೆ)	2000-00

ಬಸವ ಮಂಟಪದಲ್ಲಿ ದೇವವಾರ (ಭಾನುವಾರ) ನಡೆಯುವ ಶರಣ ಸಂಗಮ ಸಾಮೂಹಿಕ ಪ್ರಾರ್ಥನೆಯ ನಂತರ ಪ್ರಸಾದ (ಊಟ) ದಾಸೋಹಕ್ಕಾಗಿ 1500 ರೂ. ಕೊಟ್ಟ ಶರಣ ಬಂಧುಗಳು

1-7-2001 ಬಸವರಾಜ ಶಿವಶೆಟ್ಟಿ, ಬೆಂಗಳೂರು
8-7-2001 ಕುಮಾರಿ ಸುಪ್ರೀತಾ D/o ಪಾರ್ವತಿ ಸುನಂದಮೂರ್ತಿ, ಬೆಂಗಳೂರು
8-7-2001 ಸುನೀತಾ ಮತ್ತು ಕುಮಾರ್, ಬೆಂಗಳೂರು
15-7-2001 ಜಗನ್ನಾಥ್ ರಾಜಾಪುರೆ, ತಾಳವಾಡಿ, ಬೀದರ್ ಜಿಲ್ಲೆ
22-7-2001 ಗುಪ್ತ ದಾನಿ
29-7-2001 ಶರಣೆ ಪಾರ್ವತಿ ಮತ್ತು ಶರಣ ಸುನಂದ ಮೂರ್ತಿ, ಬೆಂಗಳೂರು

... ಮುಂದುವರಿಯುವುದು

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

   ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010

ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ

ಅಕ್ಟೋಬರ್ 14 ರಿಂದ 28ರ ವರೆಗೆ

ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯಿಂದ ಪ್ರತಿವರ್ಷವೂ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಮೇ ತಿಂಗಳ ರಜೆ ಅಥವಾ ಅಕ್ಟೋಬರ್ ರಜೆಯಲ್ಲಿ ನಡೆಸಲಾಗುವದು. ಆರ್ಥಿಕ ಅನಾನುಕೂಲತೆಯಿಂದಾಗಿ ಈ ಸಲದ ಕಮ್ಮಟವನ್ನು 2001ರ ಏಪ್ರಿಲ್ / ಮೇ ತಿಂಗಳಲ್ಲಿ ನಡೆಸಲಾಗಲಿಲ್ಲ.

ತರಬೇತಿ ಶಿಬಿರಗಳಿಂದ ಸಿಕ್ಕುವ ಜ್ಞಾನ ಅಪಾರ. ಹೀಗಾಗಿ ಬಹಳ ಜನರು ಕಮ್ಮಟವನ್ನು ಏರ್ಪಡಿಸಬೇಕೆಂದು ಆಗ್ರಹಿಸುತ್ತಲಿದ್ದಾರೆ. ಶರಣ ಬಂಧುಗಳ ಆತ್ಮೀಯ ಆಗ್ರಹಕ್ಕೆ ಸ್ಪಂದಿಸಿ ಅಕ್ಟೋಬರ್ ತಿಂಗಳಲ್ಲಿ ತರಬೇತಿ ಕಮ್ಮಟ ಏರ್ಪಡಿಸಲು ನಿರ್ಧರಿಸಲಾಗಿದೆ.

1. ಅಕ್ಟೋಬರ್ 14, 2001 ಭಾನು(ದೇವ)ವಾರದಿಂದ ಅಕ್ಟೋಬರ್ 28 ಭಾನು(ದೇವ)ವಾರದ ವರೆಗೆ 15ದಿವಸಗಳ ತರಬೇತಿ ಕಮ್ಮಟ ಜರುಗುತ್ತದೆ; 27 ಮತ್ತು 28 ಎರಡು ದಿವಸ ಭಕ್ತಿಪಕ್ಷ ಸಮ್ಮೇಳನ ನಡೆದು, ದಿ.28-10-2001ರಂದು ಬೆಳಿಗ್ಗೆ 10-30ಕ್ಕೆ ಸಮಾರೋಪ ಸಮಾರಂಭ ನಡೆಯುವುದು

23: 15ದಿವಸಗಳ ಶಿಬಿರ ಶುಲ್ಕ ಒಬ್ಬರಿಗೆ 350ರೂ (ಮುನ್ನೂರ ಐವತ್ತು) ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ಅಶಕ್ತರಿಗೆ ಒಬ್ಬರಿಗೆ 200(ಎರಡುನೂರು) ರೂಗಳು. ಉಚಿತವಾಗಿ ಭಾಗವಹಿಸಬೇಕೆಂಬ ಇಷ್ಟವುಳ್ಳ ಆರ್ಥಿಕ ದುರ್ಬಲರು ಮೊದಲೇ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು. ಭಕ್ತಿಪಕ್ಷ ಸಮ್ಮೇಳನ ಶುಲ್ಕ ಒಬ್ಬರಿಗೆ 60ರೂ

ವಿಶೇಷ ಸೂಚನೆ : ಊಟ - ವಸತಿ - ಕಾರ್ಯಕ್ರಮಗಳ ವೆಚ್ಚ ಬಹಳ ಬರುವುದರಿಂದ ಆರ್ಥಿಕವಾಗಿ ಸಶಕ್ತರಾದ ಶಿಬಿರಾರ್ಥಿಗಳು ತಮ್ಮ ಶಿಬಿರ ಶುಲ್ಕವನ್ನು ಕೊಡುವುದಲ್ಲದೆ ಹೆಚ್ಚಿನ ಕಾಣಿಕೆಯನ್ನು ಕೊಟ್ಟು ಸಹಕರಿಸಬೇಕು; ಒಳ್ಳೆಯ ಕಾರ್ಯಕರ್ತರು, ಕ್ರಿಯಾಮೂರ್ತಿಗಳಾಗುವ ಪ್ರತಿಭೆ ಇದ್ದವರು ಆರ್ಥಿಕವಾಗಿ ದುರ್ಬಲರಿದ್ದರೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಮತ್ತು ಶಿಬಿರ ಶುಲ್ಕ ನೀಡಿ ಕಾರ್ಯಕರ್ತರನ್ನು ತರಬೇತಿಗೆ ಕಳಿಸಬೇಕು.

3. ಕ್ರಿಯಾಮೂರ್ತಿಗಳಾಗಿ ತರಬೇತಿ ಹೊಂದಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸುವವರ ಸಂಖ್ಯೆ ಬೆಳೆಯಬೇಕಾಗಿದೆ. ತರಬೇತಿ ಕಮ್ಮಟವು ಸರ್ವಾಂಗೀಣ ತರಬೇತಿ ನೀಡುತ್ತದೆ. ತರಬೇತಿಯ ಬಳಿಕ ಕ್ರಿಯಾಮೂರ್ತಿ ದೀಕ್ಷೆ ನೀಡಿ, ಪ್ರಮಾಣ ಪತ್ರ (certificate) ಕೊಡಲಾಗುವುದು

4. ತರಬೇತಿಯ ಸ್ಥಳ: ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ, ಬೆಂಗಳೂರಿನಿಂದ 21ಕಿ.ಮಿ ದೂರದ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬರುವ ಬಸವ ಗಂಗೋತ್ರಿ.

5. ಅತ್ಯಂತ ಉಪಯುಕ್ತವಾದ ಈ ಬಸವ ತತ್ತ್ವ ತರಬೇತಿ ಕಮ್ಮಟದ ಏರ್ಪಾಡಿಗಾಗಿ ಉದಾರವಾದ ಧನ ಸಹಾಯ ಮಾಡುವವರಿಗೆ ಅವಕಾಶವಿದೆ

6. 2002ರ ಜನವರಿ 11ರಿಂದ 15ರ ವರೆಗೆ ನಡೆಯುವ 15ನೆಯ ಶರಣ ಮೇಳದ ಭಿತ್ತಿಪತ್ರ, ಕರಪತ್ರ, ರಸೀತಿ ಪುಸ್ತಕಗಳನ್ನು ಭಕ್ತಿ ಪಕ್ಷ ಸಮ್ಮೇಳನ ಸಮಯದಲ್ಲಿ ವಿತರಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಕಮ್ಮಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ ಬಸವ ತತ್ತ್ವ ತರಬೇತಿ ಕಮ್ಮಟದ ಸದುಪಯೋಗ ತೆಗೆದುಕೊಳ್ಳುವಿರಾಗಿ ಹಾರೈಸುತ್ತೇವೆ.

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪ್ರಧಾನ ಕಾರ್ಯದರ್ಶಿ
ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮೇನ್, ಕಾರ್ಡ್ ರಸ್ತೆ,
ರಾಜಾಜಿ ನಗರ, ಬೆಂಗಳೂರು-560 010, ☎ : 080- 3325335/3322790



ವಿ.ಟಿ. ರಾಯರೆಡ್ಡಿ ಅವರಿಂದ ಧ್ವಜಾರೋಹಣ



ಬ್ರಾಡ್ ಬೀಮನ್ (ಅಮೇರಿಕಾ) ಅವರಿಂದ ಬಸವ ಪಂಚಮಿ ಕಾರ್ಯಕ್ರಮ ಉದ್ಘಾಟನೆ

ಕಲ್ಯಾಣ ಕಿರಣ CPMG/KA/BGW-50 ಆಗಸ್ಟ್ - 2001
R.NO. 19980/70 WPP (W) - 17

